ದುಡಿಯುವ ಜನರ ಪ್ರಾಣ ಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ

ರುದ್ರೇಶ್ ಹತ್ಯೆ ಮತ್ತು ರಾಜಕೀಯ ದುರ್ಬಳಕೆ



ಸಂಪುಟ 10 | ಸಂಚಿಕೆ 44 ಪುಟ 16 | ಅಕ್ಟೋಬರ್ 30,2016 | ರೂ. 10/- web: www.janashakthi.co.in | e-mail : js_weekly@yahoo.com



ನವೆಂಬರ್ 18 ಭೂಮಿಗಾಗಿ ಜೈಲ್ ಭರೋ ಏಕೆ?





'ಕಮ್ಯೂನಿಸ್ಟ್ ಹಿಂಸಾಚಾರ'ದ ಅಪಪ್ರಚಾರ ಹಿಮ್ಮೆಟ್ಟಿಸಿ

ತೆಲಂಗಾಣ



ಮಹಾಜನ ಪಾದಯಾತ್ರಾ

ತಲಾಕ್... ತಲಾಕ್... ತಲಾಕ್....... ಬೇಡ!

ಬ್ರಿಕ್ಸ್ : ಪಾಕಿಸ್ತಾನ ಒಂಟಿಯಾಯಿತೇ?

ದೆಹಲಿ : ಸರ್ವಾಧಿಕಾರಿಶಾಹಿ ದಾಳಿ

ಮೂರು ಬಾರಿ ತಲಾಖ್ : ಮುಸ್ಲಿಮ್ ಮಹಿಳೆಯರ ಆಗ್ರಹಕ್ಕೆ ಸಿಪಿಐ(ಎಂ) ಪೊಲಿಟ್‌ಬ್ಯುರೊ ಬೆಂಬಲ

ಮೂರು ಬಾರಿ ತಲಾಖ್ ಹೇಳಿ ಕೂಡಲೇ ವಿವಾಹ ವಿಚ್ಛೇದನ ಕೊಡುವ ಪದ್ಧತಿಯನ್ನು ನಿಲ್ಲಿಸಬೇಕೆಂಬ ಮುಸ್ಲಿಮ್ ಮಹಿಳೆಯರ ಆಗ್ರಹಕ್ಕೆ ಸಿಪಿಐ(ಎಂ) ಪೊಲಿಟ್‌ಬ್ಯುರೊ ಬೆಂಬಲ ವ್ಯಕ್ತಪಡಿಸಿದೆ. ಈ ಆಚರಣೆಗೆ ಇಸ್ಲಾಮೀ ದೇಶಗಳಲ್ಲಿ ಪರವಾನಿಗೆ ಇಲ್ಲ. ಈ ಬೇಡಿಕೆಯನ್ನು ಒಪ್ಪಿದರೆ ಸಂತ್ರಸ್ತ ಮಹಿಳೆಯರಿಗೆ ಪರಿಹಾರ ದೊರೆಯುತ್ತದೆ ಎಂದು ಸಿಪಿಐ(ಎಂ) ಅಭಿಪ್ರಾಯ ಪಟ್ಟಿದೆ.

ಬಹುಸಂಖ್ಯಾತ ಸಮುದಾಯ ಸೇರಿದಂತೆ ಎಲ್ಲ ವೈಯಕ್ತಿಕ ಕಾನೂನುಗಳಲ್ಲೂ ಸುಧಾರಣೆ-ಯ ಅಗತ್ಯವಿದೆ ಎಂದು ಅಭಿಪ್ರಾಯಪಟ್ಟಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಈ ಸಂದರ್ಭದಲ್ಲಿ ಸರಕಾರದ ವಕ್ತಾರರು ಹಿಂದೂ ಮಹಿಳೆಯರ ವೈಯಕ್ತಿಕ ಕಾನೂನುಗಳನ್ನು ಆಗಲೇ ಸುಧಾರಿಸಲಾಗಿದೆ ಎಂದಿರುವುದು ಸರಕಾರದ ಆಸಕ್ತಿ ಮಹಿಳೆಯರಿಗೆ ಸಮಾನತೆ ಕೊಡಿಸುವುದಲ್ಲ, ಬದಲಾಗಿ ಅಲ್ಪಸಂಖ್ಯಾತರ ಮೇಲೆ, ಅದರಲ್ಲೂ ಮುಸ್ಲಿಂ ಅಲ್ಪಸಂಖ್ಯಾತರ ಮೇಲೆ ಗುರಿಯಿಡುವುದೇ ಆಗಿದೆ ಎಂಬುದನ್ನು ತೋರಿಸುತ್ತದೆ ಎಂದಿದೆ. ಈಗಲೂ ಕೂಡ ದತ್ತು, ಆಸ್ತಿ ಹಕ್ಕುಗಳು ಮತ್ತು ತನ್ನ ಜೀವನ ಸಂಗಾತಿಯನ್ನು ಆರಿಸಿಕೊಳ್ಳುವ ಹಕ್ಕು ಕುರಿತಂತೆಯೂ ಕಾನೂನುಗಳು ಹಿಂದೂ ಮಹಿಳೆಯರ ವಿರುದ್ಧ ಪಕ್ಷಪಾತ ತೋರುತ್ತವೆ ಎಂದು ಅದು ಹೇಳಿದೆ.

ಅಲ್ಪಸಂಖ್ಯಾತ ಸಮುದಾಯಗಳ ಅಸ್ಮಿತೆಯ ಮೇಲೆಯೇ ಕೋಮುವಾದಿಗಳ ಹಲ್ಲೆಗಳು ನಡೆಯುತ್ತಿರುವಾಗ, ಸರಕಾರ ಈಗ ನೇರವಾಗಿ, ಮತ್ತು ತನ್ನ ಸಂಸ್ಥೆಗಳ ಮೂಲಕ ಮಾಡುತ್ತಿರುವಂತೆ, ಸಮರೂಪೀ ನಾಗರಿಕ ಸಂಹಿತೆಯ ತನ್ನ ಅಜೆಂಡಾವನ್ನು ಮುಂದೊತ್ತುತ್ತಿರುವುದು ಮಹಿಳೆಯರ ಹಕ್ಕುಗಳ ಮೇಲೆ ವಿರುದ್ಧ ಪರಿಣಾಮ ಬೀರುತ್ತದೆ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಸಮರೂಪತೆ ಸಮಾನತೆಯ ಭರವಸೆಯನ್ನೇನೂ ಕೊಡುವುದಿಲ್ಲ ಎಂದಿದೆ.

ಅಸಮರ್ಪಕ ಕಾನೂನುಗಳಲ್ಲಿ ಸಮರೂಪತೆಯಿಂದ ಸಮಾನತೆ ಸಿಗುವುದಿಲ್ಲ-ಎಐಡಿಡಬ್ಲ್ಯುಎ

ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ (ಎಐಡಿಡಬ್ಲ್ಯುಎ) ಮೂರು ಬಾರಿ ತಕ್ಷಣ ತಲಾಖ್ ಪದ್ಧತಿಯನ್ನು ರದ್ದು ಮಾಡಬೇಕೆಂಬ ಮುಸ್ಲಿಂ ಮಹಿಳೆಯರ ಆಗ್ರಹವನ್ನು ಸಂಪೂರ್ಣವಾಗಿ ಬೆಂಬಲಿಸಿದೆ. ಈ ಬಗ್ಗೆ ತಾನು ನಡೆಸಿರುವ ಪ್ರಚಾರಗಳಲ್ಲಿ ಮುಸ್ಲಿಂ ಮಹಿಳೆಯರಿಂದ ಭಾರೀ ಬೆಂಬಲ ದೊರೆತಿರುವುದನ್ನು ಅದು ಸ್ಮರಿಸಿಕೊಂಡಿದೆ. ಈ ವಿಷಯದಲ್ಲಿ ಅಖಿಲ ಭಾರತ ಮುಸ್ಲಿಮ್ ವೈಯಕ್ತಿಕ ಕಾನೂನು ಮಂಡಳಿಯ ನಿಲುವು ಪ್ರತಿಗಾಮಿ ಎಂದು ಅದು ಬಲವಾಗಿ ವಿರೋಧಿಸಿದೆ.

ಆದರೆ ಈ ವೇಳೆಯಲ್ಲೇ ಕಾನೂನು ಆಯೋಗ ಸಮಾನ ನಾಗರಿಕ ಸಂಹಿತೆಯ ಕುರಿತು ಪ್ರಶ್ನಾವಳಿ ಹೊರಡಿಸಿರುವುದು ಮತ್ತು ಮೋದಿ ಸರಕಾರದ ಮಂತ್ರಿಗಳು ಪುಂಖಾನುಪುಂಖವಾಗಿ ಈ ಬಗ್ಗೆ ಹೇಳಿಕೆಗಳನ್ನು ನೀಡುತ್ತಿರುವುದನ್ನೂ ಸಂಘಟನೆ ಬಲವಾಗಿ ಖಂಡಿಸಿದೆ. ಈ ಮೂಲಕ ಅವರು ಮುಸ್ಲಿಮ್ ಸಮುದಾಯದೊಳಗಿನ ಸುಧಾರಣಾವಾದಿಗಳಿಗೆ ಅಪಕಾರ ಮಾಡುತ್ತಿದ್ದಾರೆ ಎಂದು ಎಐಡಿಡಬ್ಲ್ಯುಎ ಹೇಳಿದೆ.

ಈಗಿನ ಘಟ್ಟದಲ್ಲಿ ಎಲ್ಲ ಸಮುದಾಯಗಳ ಮಹಿಳೆಯರಿಗೆ ಸಮಾನತೆಯ ಗುರಿ ಸಾಧನೆಗೆ ಸಂಬಂಧಪಟ್ಟ ವೈಯಕ್ತಿಕ ಕಾನೂನುಗಳ ಸುಧಾರಣೆಯೇ ಉತ್ತಮ ಮಾರ್ಗ. ಅಸಮರ್ಪಕ ವೈಯಕ್ತಿಕ ಕಾನೂನುಗಳಲ್ಲಿ ಸಮರೂಪತೆ ತಂದರೆ ಅದರಿಂದ ಸಮಾನತೆಯೇನೂ ಸಿಗುವುದಿಲ್ಲ. ಅದೇ ವೇಳೆಗೆ ಪ್ರಸಕ್ತ ಜಾತ್ಯಾತೀತ ಕಾನೂನುಗಳ ಚೌಕಟ್ಟನ್ನು ಉತ್ತಮ ಪಡಿಸಬೇಕು ಮತ್ತು ವಿಸ್ತರಿಸಬೇಕು ಎಂದು ಎಐಡಿಡಬ್ಲ್ಯುಎ ಹೇಳಿದೆ.

(ಈ ಕುರಿತ ಲೇಖನವನ್ನು ಪುಟ 6 ರಲ್ಲಿ ನೋಡಿ)

ದಲಿತರ ವಿರುದ್ಧದ ಘಟನೆಗಳು ನೋವುಂಟು ಮಾಡುತ್ತಿವೆ-ಡಿಎಸ್‌ಎಂಎಂ

ದೇಶದ ಹಲವೆಡೆಗಳಲ್ಲಿ ದಲಿತರ ವಿರುದ್ಧ ಇತ್ತೀಚೆಗೆ ನಡೆದಿರುವ ಘಟನೆಗಳ ಬಗ್ಗೆ 'ದಲಿತ ಶೋಷಣ ಮುಕ್ತಿ ಮಂಚ್'(ಡಿಎಸ್‌ಎಂಎಂ) ತನ್ನ ಅತೀವ ನೋವನ್ನು ವ್ಯಕ್ತಪಡಿಸಿದೆ.

ಗುಜರಾತಿನ ಜುನಾಗಡ ಜಿಲ್ಲೆಯಲ್ಲಿ ಪರ್ವತ್ ಪರ್ಮಾರ್ ಎಂಬ ದಲಿತ ರೈತ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಇದು ಉನಾಕ್ಕೆ ಬಹಳ ಸಮೀಪವಿರುವ ಜಾಗ. ಸಂಧಾ ಗ್ರಾಮದ ದಲಿತ ರೈತರು ತಾವು ಉಳುಮೆ ಮಾಡುವ ಜಮೀನಿನ ಕಾನೂನು ಹಕ್ಕುಗಳನ್ನು ಪಡೆಯಲು ಕಳೆದ 25 ವರ್ಷಗಳಿಂದ ಹೋರಾಡುತ್ತಿದ್ದಾರೆ. ಆದರೆ ಸರಕಾರ ಮತ್ತು ಸ್ಥಳೀಯ ಆಡಳಿತ ಭೂಮಾಲಕರ ಪ್ರಭಾವದಿಂದಾಗಿ ಇದನ್ನು ಮಾಡಿಲ್ಲ. ಅವರು ದಲಿತರು ಊರು ಬಿಟ್ಟು ಹೋಗುವಂತೆ ಕೂಡ ಮಾಡುವಲ್ಲಿ ಹಲವೆಡೆ ಯಶಸ್ವಿಯಾಗಿದ್ದಾರೆ. ಅಕ್ಟೋಬರ್ 17 ರಂದು ಇಂತಹ ದಲಿತರು ತಮ್ಮ ಜಮೀನನ್ನು ವಾಪಾಸು ಪಡೆಯಲು ಕಲೆಕ್ಟರ್ ಕಚೇರಿಯೆದುರು ಧರಣಿ ಕೂತಿದ್ದರು. ಈ ಸಂದರ್ಭದಲ್ಲಿ ಮೂವರು ದಲಿತ ರೈತರು ಹತಾಶೆಯಿಂದ ಆತ್ಮಹತ್ಯೆಗೆ ಪ್ರಯತ್ನಿಸಿದ್ದು ಒಬ್ಬ ಅಸು ನೀಗಿದ್ದಾನೆ ಎಂದು ವರದಿಯಾಗಿದೆ. ಬಹಳ ಕಾಲದಿಂದ ದಲಿತರು ಉಳುಮೆ ಮಾಡುತ್ತಿದ್ದ ಜಮೀನನ್ನು ಅವರ ಸ್ವಾಧೀನಕ್ಕೆ ಕೊಡಬೇಕು, ಪರ್ಮಾರ್ ಕುಟುಂಬಕ್ಕೆ ಹಣಕಾಸು ನೆರವು ಒದಗಿಸಬೇಕು ಎಂದು ಡಿಎಸ್‌ಎಂಎಂ ಆಗ್ರಹಿಸಿದೆ.

ಬಿಹಾರದಲ್ಲಿ ನಡೆದ ಘಟನೆ ಇನ್ನಷ್ಟು ಆಘಾತಕಾರಿ. ಮುಝಫ್ಫರ್ಪುರ ಕೇಂದ್ರೀಯ ವಿಶ್ವವಿದ್ಯಾಲಯದಲ್ಲಿ ಓದುತ್ತಿರುವ ದಲಿತ ವಿದ್ಯಾರ್ಥಿಗಳು ಮೇಲ್ಜಾತಿ ವಿದ್ಯಾರ್ಥಿಗಳಿಗಿಂತ ಹೆಚ್ಚು ಅಂಕ ಪಡೆದ ಕಾರಣಕ್ಕಾಗಿ ರ್‍ಯಾಗಿಂಗ್, ಹಲ್ಲೆ ಅನುಭವಿಸಬೇಕಾಯಿತು. ಕೇಂದ್ರೀಯ ವಿದ್ಯಾಲಯದಲ್ಲೇ ಇಂತಹ ಪರಿಸ್ಥಿತಿಯಿದ್ದರೆ ನಮ್ಮ ಶೈಕ್ಷಣಿಕ ಸಂಸ್ಥೆಗಳು ಭವಿಷ್ಯದ ನಾಗರಿಕರನ್ನು ರೂಪಿಸುತ್ತಿರುವ ಪರಿಯಾದರೂ ಎಂತಹದು ಎಂದು ಡಿಎಸ್‌ಎಂಎಂ ಆಘಾತ ವ್ಯಕ್ತಪಡಿಸಿದೆ. ಶೈಕ್ಷಣಿಕ ಸಂಸ್ಥೆಗಳಲ್ಲಿ ಜಾತಿ ತಾರತಮ್ಯವನ್ನು ನಿಲ್ಲಿಸಲು ಭಾರತ ಸರಕಾರ ಮತ್ತು ಈ ಸಂಸ್ಥೆಗಳ ಆಡಳಿತ ನಿರ್ದಿಷ್ಟ ಕ್ರಮಗಳನ್ನು ಕೈಗೊಳ್ಳಬೇಕು. ಈ ಹಿನ್ನೆಲೆಯಲ್ಲಿ ಪ್ರಜಾಪ್ರಭುತ್ವವ ಶಕ್ತಿಗಳು ಆಗ್ರಹಿಸುತ್ತಿರುವ **ದಲಿತ ವಿದ್ಯಾರ್ಥಿಗಳಿಗೆ ಪಕ್ಷಪಾತದಿಂದ ರಕ್ಷಣೆ ಕೊಡುವ ಒಂದು ವಿಶೇಷ ಕಾನೂನು, ರೋಹಿತ್ ವೇಮುಲಾ ಕಾನೂನನ್ನು ತರಬೇಕು ಎಂದು ಡಿಎಸ್‌ಎಂಎಂ ಆಗ್ರಹಿಸಿದೆ.**

ಮತ್ತೊಂದು ಘಟನೆ ಆಂಧ್ರಪ್ರದೇಶದ ತಿರುಪತಿಯಿಂದ ವರದಿಯಾಗಿದೆ. ಅಲ್ಲಿಯ ಸಬ್-ಕಲೆಕ್ಟರನೇ ಸ್ವತಃ ದಲಿತ ರೈತರ ಜಾತಿನಿಂದನೆಗೆ ಇಳಿದಿದ್ದಾನೆ. ಕುಂದುಕೊರತೆಗಳನ್ನು ಆಲಿಸಬೇಕಾದ ದಿನದಂದು ರೈತರು ಆತನನ್ನು ಭೇಟಿಯಾದಾಗ ಅವರ ದೂರುಗಳನ್ನು ತಾಳ್ಮೆಯಿಂದ ಕೇಳುವ ಬದಲು ಈ ಸರಕಾರೀ ಅಧಿಕಾರಿ ಅವರ ಜಾತಿನಿಂದನೆ ಮಾಡಿ ಅವರ ಬ್ಯಾನರನ್ನು ನಾಶ ಮಾಡಿರುವುದಾಗಿ ವರದಿಯಾಗಿದೆ. ಇಂತಹ ಬೇಜವಾಬ್ದಾರಿ ವರ್ತನೆಯಿಂದ ದೇಶದ ಸಂವಿಧಾನವನ್ನು ಉಲ್ಲಂಘಿಸಿರುವ ಈ ಅಧಿಕಾರಿಯ ವಿರುದ್ಧ ಆಂಧ್ರ ಪ್ರದೇಶ ಸರಕಾರ ಎಸ್‌ಸಿ/ಎಸ್‌ಟಿ ಅತ್ಯಾಚಾರ ತಡೆ ಕಾನೂನಿನ ಅಡಿಯಲ್ಲಿ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಡಿಎಸ್‌ಎಂಎಂ ಆಗ್ರಹಿಸಿದೆ.

ಮಾತೆಂದರೆ ಇದು

ಪ್ರಕೃತಿ ನಿರ್ವಾತ ಸಹಿಸುವುದಿಲ್ಲ ಎಂಬಂತೆ ಬಂಡವಾಳ ಯಾವುದೇ ಲಾಭ, ಅತಿ ಸಣ್ಣ ಲಾಭವನ್ನು ಬಿಟ್ಟು ಕೊಡುವುದಿಲ್ಲ. ಒಳ್ಳೆಯ ಲಾಭ ಇದ್ದರೆ ಬಂಡವಾಳಕ್ಕೆ ಭಾರೀ ಧೈರ್ಯ ಬರುತ್ತದೆ. ಶೇ. 10 ಲಾಭ ಸಿಕ್ಕರೆ ಅದು ಎಲ್ಲೂ ಹೋಗಲು ತಯಾರು. ಶೇ. 20 ಸಿಕ್ಕರೆ ಅದಕ್ಕೆ ಅತೀ ಆಸೆ ಶುರುವಾಗುತ್ತದೆ. ಶೇ. 50 ಕಂಡರೆ ಎಲ್ಲಿಲ್ಲದ ಭಂಡತನ ತೋರಿಸುತ್ತದೆ. ಶೇ. 100 ಲಾಭ ಸಿಕ್ಕರೆ ಎಲ್ಲಾ ಮಾನವ ನಿಯಮಗಳನ್ನು ಗಾಳಿಗೆ ತೂರುತ್ತದೆ. ಶೇ. 300 ಲಾಭ ಕಂಡರೂ ಸಾಕು ಅದು ಯಾವ ಅಪರಾಧ ಮಾಡಲು ಹೇಸುವುದಿಲ್ಲ. ಯಾವುದೇ ಅಪಾಯ ಎದುರಿಸಲು ಸಿದ್ಧವಾಗುತ್ತದೆ. ಅದು ತನ್ನ ಒಡೆಯನನ್ನೂ ನೇಣಿಗೆ ಹಾಕಲು ಸಿದ್ದವಾಗುತ್ತದೆ. ಪ್ರಕ್ಷುಬ್ಧತೆ ಮತ್ತು ಘರ್ಷಣೆಗಳು ಲಾಭ ತರುವುದಾದರೆ ಇವೆರಡಕ್ಕೂ ಪ್ರೋತ್ಸಾಹ ಕೊಡುತ್ತದೆ. ಕಳ್ಳ ಸಾಗಾಣಿಕೆ ಮತ್ತು ಗುಲಾಮರ ವ್ಯಾಪಾರ ಈ ವರೆಗೆ ಹೇಳಿದ್ದಕ್ಕೆ ಪುರಾವೆ.

– ಮಾರ್ಕ್ಸ್ 'ಬಂಡವಾಳ' ಗ್ರಂಥದಲ್ಲಿ ಉದ್ಧರಿಸಿದ ಟಿ.ಜೆ. ಡನಿಂಗ್ ಅವರ ಹೇಳಿಕೆ

ಮತ್ತೆ ಪೆಟ್ರೋಲ್ ಮತ್ತು ಡೀಸೆಲ್ ದರ ಏರಿಕೆ

ಇಳಿಕೆಯ ಪ್ರಯೋಜನಗಳನ್ನೆಲ್ಲ ಸರಕಾರ ಬಾಚಿಕೊಂಡು, ಏರಿಕೆಯ ಹೊರೆಯನ್ನೆಲ್ಲ ಜನಗಳೇ ಹೊರಬೇಕು ಎನ್ನುವ ಏಕಮುಖ ಪ್ರಕ್ರಿಯೆ-ಯೆಚೂರಿ ಟೀಕೆ



ಮತ್ತೆ ಪೆಟ್ರೋಲ್ ಮತ್ತು ಡೀಸೆಲ್ ದರಗಳನ್ನು ಏರಿಸಲಾಗಿದೆ. ಪೆಟ್ರೋಲ್ ದರ ಬೆಂಗಳೂರಿನಲ್ಲಿ ಲೀಟರಿಗೆ ರೂ. 71.29 ಆಗಿದೆ. ಡೀಸೆಲ್ ದರ ರೂ.59.22 ಆಗಿದೆ.

ಆಗಸ್ಟ್ 15ರಂದು ಪೆಟ್ರೋಲ್ ದರ ರೂ.64.47 ಇತ್ತು, ಸಪ್ಟಂಬರ್ 1 ರಂದು ಅದು ರೂ.68.10 ಕ್ಕೇರಿತು, ಮತ್ತೆ ಸಪ್ಟಂಬರ್ 15ರಂದು 68.92ಕ್ಕೆ ಮತ್ತು ಅಕ್ಟೋಬರ್1 ರಂದು 69.32 ಕ್ಕೇರಿತು. ಅಂದರೆ ಎರಡೇ ತಿಂಗಳಲ್ಲೇ ರೂ.6.82 ರಷ್ಟು ಹೆಚ್ಚಿದೆ.

ಡೀಸೆಲ್ ಬೆಲೆ ಕೂಡ ಆಗಸ್ಟ್ 15 ರಂದು ರೂ.53.75 ಇತ್ತು. ಅಂದರೆ ಎರಡು ತಿಂಗಳಲ್ಲಿ ರೂ.5.47 ರಷ್ಟು ಏರಿದೆ.

ಅಂತರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ಕಚ್ಚಾತೈಲ ಬೆಲೆಗಳು ಏರಿದ್ದರಿಂದಾಗಿ ಈ ಏರಿಕೆ ಎಂಬುದು ಸರಕಾರದ ಸಿದ್ಧ ಉತ್ತರ.

"ಆದರೆ ಕಚ್ಚಾತೈಲದ ಬೆಲೆಗಳು ಕಳೆದ ಎರಡು ವರ್ಷಗಳಲ್ಲಿ ಇಳಿಯುತ್ತಿದ್ದಾಗ ಅದರ ಪೂರ್ಣ ಪ್ರಯೋಜನವನ್ನು ಜನರಿಗೆ ವರ್ಗಾಯಿಸಲಿಲ್ಲ. ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಅಬಕಾರಿ ಸುಂಕಗಳನ್ನು ದ್ವಿಗುಣಗೊಳಿಸಿತು." ಎಂದು ಈ ಕುರಿತು ಪ್ರತಿಕ್ರಿಯಿಸುತ್ತ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ನೆನಪಿಸಿದ್ದಾರೆ.

ಈಗ ಕಚ್ಚಾತೈಲದ ಬೆಲೆ ಏರುತ್ತಲಿದೆ, ನಿಜ. ಅದು ಇನ್ನು ಆರೆಂಟು ತಿಂಗಳು ಏರುತ್ತಲೇ ಹೋಗಬಹುದು ಎಂದು ನಿರೀಕ್ಷಿಸಲಾಗುತ್ತಿದೆ. ಅದರ ಹೊರೆಯನ್ನು ಪೂರ್ಣವಾಗಿ ಮಧ್ಯಮ ವರ್ಗದವರು ಮತ್ತು ಬಡಜನರ ಮೇಲೆ ಹಾಕುವ ಬದಲು ಬಿಜೆಪಿ ಸರಕಾರ ತಾನು ಏರಿಸಿದ ಅಬಕಾರಿ ಸುಂಕಗಳನ್ನು ಇಳಿಸುವುದೇ ಎಂದು ಅವರು ಪ್ರಶ್ನಿಸಿದ್ದಾರೆ.

ಇದು ದರಗಳಲ್ಲಿ ಇಳಿಕೆಯ ಪ್ರಯೋಜನಗಳನ್ನೆಲ್ಲ ಬಾಚಿಕೊಂಡು ಏರಿಕೆಯ ಹೊರೆಯನ್ನೆಲ್ಲ ಜನಗಳೇ ಹೊರಬೇಕು ಎನ್ನುವ ಏಕಮುಖ ಪ್ರಕ್ರಿಯೆಯಾಗಲು ಸಾಧ್ಯವಿಲ್ಲ. **ಪೆಟ್ರೋಲ್,ಡೀಸೆಲ್ ಬೆಲೆಗಳಲ್ಲಿ ಏರಿಕೆ ಹಣದುಬ್ಬರದ ಏರಿಕೆಯ ಮೂಲಕವೂ ಜನರ ಮೇಲೆ ಮತ್ತಷ್ಟು ಹೊರೆಗಳನ್ನು ಹಾಕುವಾಗ ಸರಕಾರ ಹೆಚ್ಚೆಚ್ಚು ಅಬಕಾರಿ ಸುಂಕಗಳನ್ನು ವಸೂಲಿ ಮಾಡಿ ತನ್ನ ಖಜಾನೆ ತುಂಬುವುದು ಸರಿಯಲ್ಲ ಎಂದು ಯೆಚೂರಿ ಹೇಳಿದ್ದಾರೆ.**

100ದಿನಗಳನ್ನು ದಾಟಿದ ಜಮ್ಮು-ಕಾಶ್ಮೀರದ ಪ್ರಕ್ಷುಬ್ಧ ವಾತಾವರಣ

ವಿಧಾನಸಭೆಯ ವಿಶೇಷ ಅಧಿವೇಶನ ಕರೆಯಲು ರಾಜ್ಯದ ಪ್ರತಿಪಕ್ಷಗಳ ಆಗ್ರಹ

ಜನ ಸುಸ್ತಾಗಿ ಪ್ರತಿಭಟನೆ ನಿಲ್ಲಲಿ ಎಂದು ಕಾಯುವುದು ಅಪಾಯಕಾರಿ ನಿಲುವು-ತರಿಗಾಮಿ

ಕಾಶ್ಮೀರದಲ್ಲಿ ಈಗ ಭುಗಿಲೆದ್ದಿರುವ ಅಂತೋಷ 100ದಿನಗಳನ್ನು ದಾಟುತ್ತಿರುವ ಸಂದರ್ಭ ವನ್ನು ಚರ್ಚಿಸಲು ಅಕ್ಟೋಬರ್ 14 ರಂದು ಸಭೆ ಸೇರಿದ ಜಮ್ಮು ಮತ್ತು ಕಾಶ್ಮೀರದ ಪ್ರತಿಪಕ್ಷಗಳು ರಾಜ್ಯ ಸರಕಾರ ರಾಜ್ಯದಲ್ಲಿನ ಪರಿಸ್ಥಿತಿಯ ಬಗ್ಗೆ ಚರ್ಚೆ ನಡೆಸಲು ಶಾಸನ ಸಭೆಯ ಒಂದು ವಿಶೇಷ ಅಧಿವೇಶನನವನ್ನು ಕರೆಯಬೇಕು ಎಂದು ಆಗ್ರಹಿಸಿವೆ.

ಪೆಲೆಟ್‌ಗನ್‌ಗಳ ಬಳಕೆಯಿಂದಾಗಿ ಆಗಿರುವ ಸಾವುಗಳು, ಮತ್ತು ಸಾವಿರಾರು ಮಂದಿ ಗಾಯಗೊಂಡಿರುವುದರ ಬಗ್ಗೆ, ಅದರಲ್ಲೂ ಯುವಜೀವಗಳ ಸಾವು-ನೋವುಗಳ ಬಗ್ಗೆ ಸುಪ್ರಿಂ ಕೋರ್ಟಿನ ನಿವೃತ್ತ ನ್ಯಾಯಾಧೀಶರಿಂದ ಒಂದು ಪಾರದರ್ಶಕ ಮತ್ತು ಸಮಯಬದ್ಧ ವಿಚಾರಣೆ ನಡೆಸಬೇಕು ಹಾಗೂ ಇದಕ್ಕೆ ಜವಾಬ್ದಾರರಾದವರನ್ನು ಗುರುತಿಸಬೇಕು ಎಂದೂ ಪ್ರತಿಪಕ್ಷಗಳು ಆಗ್ರಹಿಸಿವೆ.

ರಾಜ್ಯದಲ್ಲಿ ರಾಜಕೀಯ ಪ್ರಕ್ಷುಬ್ಧತೆಯ ಉದ್ಭವವಾದದ್ದು 1953ರಂತಹ ಚಾರಿತ್ರಿಕ ಪ್ರಮಾದಗಳು ಮತ್ತು ತಪ್ಪುಗಳಿಂದಾಗಿ, ಈ ಬಗ್ಗೆ ರಾಷ್ಟ್ರೀಯ ಪಕ್ಷಗಳು ಆತ್ಮಾವಲೋಕನ ಮಾಡಿಕೊಳ್ಳುವ ಅಗತ್ಯವಿದೆ, ಯಥಾಸ್ಥಿತಿ ಮುಂದುವರೆಯಲಿ ಎನ್ನುವುದು ಒಂದು ಸರಿಯಾದ ಆಯ್ಕೆಯಲ್ಲ ಎಂದು ಈ ಸಭೆಯಲ್ಲಿ ಭಾಗವಹಿಸಿ ಮಾತಾಡುತ್ತ ಸಿಪಿಐ(ಎಂ) ಕೇಂದ್ರ ಸಮಿತಿ ಸದಸ್ಯ ಹಾಗೂ ಶಾಸಕ ಮಹಮ್ಮದ್ ಯೂಸುಫ್ ತರಿಗಾಮಿ ಹೇಳಿದ್ದಾರೆ.

"ಚಳುವಳಿ ಮತ್ತು ಅಸಂತೋಷ ತಾನಾಗಿಯೇ ಇಳಿದು ಹೋಗಲಿ ಎಂದು ಕಾಯುವುದು ಒಂದು ಪರಿಹಾರ ಎಂದು ಯೋಚಿಸುವುದೇ ಸಮಸ್ಯಾತ್ಮಕ ಮತ್ತು ಅತ್ಯಂತ ಅಪಾಯಕಾರಿ ನಿಲುವೆ. ಈ ಚಳುವಳಿ ಸುಸ್ತಾಗಿ ಸದ್ಯಕ್ಕೆ ನಿಂತು ಹೋದರೆ, ಹೊಸದೊಂದು ಕುಮ್ಮಕ್ಕು ಸಿಕ್ಕಿದಾಗ ಬೇಗನೇ ಅದು ಮತ್ತೆ ಭುಗಿಲೇಳುತ್ತದೆ. ಕಾಶ್ಮೀರ ಒಂದು ರಾಜಕೀಯ ಪ್ರಶ್ನೆ ಮತ್ತು ಅದಕ್ಕೆ ರಾಜಕೀಯ ಇತ್ಯರ್ಥವೇ ಬೇಕು ಎಂಬುದು ನಿರಾಕರಿಸಲಾಗದ ಸಂಗತಿ" ಎಂದು ಅವರು ಎಚ್ಚರಿಸಿದ್ದಾರೆ.

ನ್ಯಾಶನಲ್ ಕಾನ್ಫರೆನ್ಸ್ ಅಧ್ಯಕ್ಷ ಡಾ.ಫಾರುಖ್ ಅಬ್ದುಲ್ಲ ಈ ಸಭೆ ಕರೆದಿದ್ದರು. ತರಿಗಾಮಿ ಯವರಲ್ಲದೆ ಜಮ್ಮು ಮತ್ತು ಕಾಶ್ಮೀರ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಗುಲಾಮ್ ಅಹ್ಮದ್ ಮೀರ್, ಪೀಪಲ್ಸ್ ಡೆಮಾಕ್ರಟಿಕ್ ಫ್ರಂಟ್‌ನ ಅಧ್ಯಕ್ಷ ಹಕೀಮ್ ಮಹಮ್ಮದ್ ಯಾಸಿನ್ ಮತ್ತು ಡೆಮಾಕ್ರಟಿಕ್ ಪಾರ್ಟಿ ನ್ಯಾಶನಲಿಸ್ಟ್‌ನ ಅಧ್ಯಕ್ಷ ಗುಲಾಮ್ ಹಸನ್ ಮೀರ್ ಭಾಗವಹಿಸಿದ್ದರು.

ಆರಂಭದಲ್ಲಿ ಮಾತಾಡಿದ ಫಾರುಖ್ ಅಬ್ದುಲ್ಲ ಪ್ರಸ್ತುತ ಪರಿಸ್ಥಿತಿ ಆತಂಕಕಾರಿಯಾಗಿದೆ, ಈ ಪ್ರಶ್ನೆಗೆ ಒಂದು ಶಾಶ್ವತ ರಾಜಕೀಯ ಪರಿಹಾರ ಕಂಡುಕೊಳ್ಳಲೇ ಬೇಕಾಗಿದೆ, ಈ ನಿಟ್ಟಿನಲ್ಲಿ ರಾಜ್ಯದ ಪ್ರತಿಪಕ್ಷಗಳು ಒಂದು ಪರಿಣಾಮಕಾರಿ ಪರಿಹಾರಕ್ಕಾಗಿ ಕೆಲಸ ಮಾಡಲು ಒಂದು ಒಮ್ಮತ ರೂಪಿಸಿಕೊಳ್ಳಬೇಕಾಗಿದೆ ಎಂದರು.

ಪ್ರಧಾನ ಮಂತ್ರಿಗಳು ರಾಜಕೀಯ ಪ್ರಶ್ನೆಗೆ ಒಂದು ಶಾಶ್ವತ ಪರಿಹಾರಕ್ಕಾಗಿ ಸಂವಾದದ ಅಗತ್ಯವನ್ನು ಒಪ್ಪಿಕೊಂಡಿದ್ದಾರೆ. ಆದ್ದರಿಂದ ಕೇಂದ್ರ ಸರಕಾರ ರಾಜ್ಯದಲ್ಲಿ ಈ ಬಗ್ಗೆ ಹಿತಾಸಕ್ತಿಗಳಿರುವ ಎಲ್ಲರೊಂದಿಗೆ ಮಾತುಕತೆಗಳನ್ನು ಆರಂಭಿಸಬೇಕು ಮತ್ತು ಪಾಕಿಸ್ತಾನದೊಂದಿಗೆ ಅರ್ಥಪೂರ್ಣ ಸಂವಾದವನ್ನು ಮುಂದುವರೆಸಬೇಕು. ತನ್ನ ""ಮೈತ್ರಿಯ ಅಜೆಂಡಾ"ದಲ್ಲಿ ವಿವಿಧ ಅಭಿಪ್ರಾಯಗಳಿರುವ ಎಲ್ಲರೊಂದಿಗೆ ಸಂವಾದದ ಭರವಸೆ ನೀಡಿರುವ ರಾಜ್ಯದ ಪಿಡಿಪಿ-ಬಿಜೆಪಿ ಮೈತ್ರಿಕೂಟ ತನ್ನ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುವುದು ಸಾಧ್ಯವಿಲ್ಲ ಎಂದು ಫಾರುಖ್ ಅಬ್ದುಲ್ಲ ಹೇಳಿದರು.

ಈ ಸಭೆ ರಾಜಕೀಯ ಪರಿಹಾರಕ್ಕೆ ಸಂವಾದವನ್ನು ಆರಂಭಿಸಬೇಕು ಎಂದು ಆಗ್ರಹಿಸುತ್ತಲೇ ರಾಜ್ಯದಲ್ಲಿ ಮನಬಂದಂತೆ ಬಂಧನಗಳನ್ನು ನಡಸುವುದು ಮತ್ತು ದಬ್ಬಾಳಿಕೆ ನಡೆಯುತ್ತಿದೆ ಎಂದು ಖಂಡಿಸಿದೆ, ಇದು ಯುವಜನರನ್ನು ಇನ್ನೂ ದೂರ ಒಯ್ಯುತ್ತದೆ ಎಂದು ಎಚ್ಚರಿಸಿದೆ.

ಸಾವಿರಾರು ವಿದ್ಯಾರ್ಥಿಗಳ ಪಾಠ-ಪ್ರವಚನಗಳಿಗೆ ತೀವ್ರ ಧಕ್ಕೆಯುಂಟಾಗಿರುವಾಗ ಸರಕಾರ ಅವರ ಮೇಲೆ ಪರೀಕ್ಷೆಗೆ ಸಿದ್ಧವಾಗುವ ಯಾತನೆಯನ್ನು ಹೇರುವಷ್ಟು ಸಂವೇದನಾಶೂನ್ಯ ಆಗಬಾರದು ಎಂದೂ ಸಭೆ ಆಗ್ರಹಿಸಿದೆ.

ಕಮ್ಯುನಿಸ್ಟ್-ವಿರೋಧಿ ಅಪಪ್ರಚಾರ ಬಯಲಿಗೆಳೆಯಬೇಕು

ಸಂಪಾದಕೀಯ

ಇದೇ ಅಕ್ಟೋಬರ್ 15 ರಂದು ಸುಮಾರು 150 ಜನ ಬಿಜೆಪಿ ಕಾರ್ಯಕರ್ತರು ಮತ್ತು ಬೆಂಬಲಿಗರು ಬೆಂಗಳೂರಿನ ಮಹಾಲಕ್ಷ್ಮಿ ಲೇಔಟ್ ನಲ್ಲಿರುವ ಸಿಪಿಐ(ಎಂ)ನ ರಾಜ್ಯ ಕೇಂದ್ರದ ಕಛೇರಿ ಮೇಲೆ ದಾಳಿ ಮಾಡಿ ದಾಂಧಲೆ ಎಬ್ಬಿಸಲು ಪ್ರಯತ್ನಿಸಿದ್ದಾರೆ. ಅದೇ ದಿನ ಒಡಿಶಾದ ಸಿಪಿಐ(ಎಂ) ರಾಜ್ಯ ಕಚೇರಿ ಮೇಲೂ ದಾಳಿಯ ಗಂಭೀರ ಪ್ರಯತ್ನ ನಡೆದಿದೆ. ತ್ರಿಪುರಾ ಮುಖ್ಯಮಂತ್ರಿ ಮಾಣಿಕ್ ಸರ್ಕಾರ್ ಅವರ ನಿವಾಸದ ಮೇಲೂ ಅದೇ ದಿನ ದಾಳಿಯ ಪ್ರಯತ್ನ ನಡೆದಿದೆ. ಇವೆರಡೂ ದಾಳಿಗಳನ್ನೂ ಬಿಜೆಪಿ-ಆರೆಸ್ಸೆಸ್ ಕಾರ್ಯಕರ್ತರು ನಡೆಸಿದ್ದಾರೆ. ಕೇರಳದಲ್ಲಿ ಬಿಜೆಪಿ ಕಾರ್ಯಕರ್ತರ ಮೇಲೆ ಸಿಪಿಐ(ಎಂ) ಕಾರ್ಯಕರ್ತರ ದಾಳಿಯನ್ನು ಪ್ರತಿಭಟಿಸಲು ಈ ದಾಳಿ ಎಂಬ ಬಿಜೆಪಿ ಕಾರ್ಯಕರ್ತರ ಹೇಳಿಕೆ ಸತ್ಯಕ್ಕೆ ದೂರವಾದುದ್ದು. ನಿಜವಾಗಿಯು ಕೇರಳ ಮತ್ತು ಇತರೆಡೆ ಹಲವಾರು ದಶಕಗಳಿಂದ ಬಿಜೆಪಿ ಮತ್ತು ಸಂಘ ಗ್ಯಾಂಗಿನ ಕಾರ್ಯಕರ್ತರು ಸಿಪಿಐ(ಎಂ) ಕಾರ್ಯಕರ್ತರ ಮೇಲೆ ಸತತವಾಗಿ ದಾಳಿ ಮಾಡುತ್ತಾ ಬಂದಿದ್ದಾರೆ. ಇದನ್ನು ಮುಚ್ಚಿ ಕೊಳ್ಳಲು ಇಂತಹ ಹುಸಿ ಪ್ರತಿಭಟನೆ ಮತ್ತು ದಾಳಿ ಅವರ ಒಂದು ತಂತ್ರ.

ಇತ್ತೀಚಿಗಷ್ಟೇ (ಅಕ್ಟೋಬರ್ 10ರಂದು) ಕಣ್ಣೂರು ಜಿಲ್ಲೆಯ ಪಡುವಿಳ್ಳೆ ಸ್ಥಳೀಯ ಸಮಿತಿಯ ಸದಸ್ಯ ಕೆ.ಮೋಹನನ್ ಅವರ ಬರ್ಬರ ಕೊಲೆ, ಎಲ್.ಡಿ.ಎಫ್.ನ ಇತ್ತೀಚಿನ ಪ್ರಚಂಡ ವಿಜಯದ ನಂತರ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಪ್ರತಿನಿಧಿಸುವ ಧರ್ಮದಂ ಕ್ಷೇತ್ರದಲ್ಲಿ ನಡೆದಿರುವ ಸಿಪಿಐ(ಎಂ) ಕಾರ್ಯಕರ್ತರ ಎರಡನೇ ಕೊಲೆ. ಇತ್ತೀಚೆಗೆ ದಿಲ್ಲಿಯಲ್ಲಿ ಸಿಪಿಐ(ಎಂ) ಕೇಂದ್ರ ಸಮಿತಿ ಕಚೇರಿಗೆ ಕೆಲವು ಬಿಜೆಪಿ ಮಂದಿ ಕೇರಳದಲ್ಲಿ ಆರೆಸ್ಸೆಸ್ ಕಾರ್ಯಕರ್ತರ ಮೇಲೆ ದಾಳಿ ನಡೆ-ಯುತ್ತಿದೆ ಎಂದು ಬೊಬ್ಬೆ ಹಾಕುತ್ತ ಮೆರವಣಿಗೆ ಬಂದಿದ್ದರು ಎಂಬುದನ್ನು ನೆನಪಿಸಿಕೊಳ್ಳಬಹುದು. ನಿಜಸಂಗತಿಯೆಂದರೆ ಆರೆಸ್ಸೆಸ್‌ನ ಮತ್ತು ಅದರ ಅಂಗ ಸಂಘಟನೆಗಳ ಮಾರಣಾಂತಿಕ ದಾಳಿಗಳಿಗೆ ಬಲಿಯಾಗುತ್ತಿರುವವರು ಸಿಪಿಐ(ಎಂ) ಮತ್ತು ಎಲ್‌ಡಿಎಫ್‌ನ ಇತರ ಅಂಗಗಳ ಕಾರ್ಯಕರ್ತರು. ಇದು ಹೊಸದೇನಲ್ಲ. ಎಲ್‌ಡಿಎಫ್ ಅಧಿಕಾರಕ್ಕೆ ಬಂದಾಗಲೆಲ್ಲ ಅವರು ಇದನ್ನೇ ಮಾಡಿದ್ದಾರೆ. ಎಲ್.ಡಿ.ಎಫ್ ಸರಕಾರದ ಈ ಬಾರಿಯ ಅಲ್ಪಾವಧಿಯಲ್ಲೇ ಏಳು ಸಿಪಿಐ(ಎಂ) ಕಾರ್ಯಕರ್ತರು ಕೊಲ್ಲಲ್ಪಟ್ಟಿದ್ದಾರೆ, ಸುಮಾರು 300 ಸದಸ್ಯರು ಗಾಯಗೊಂಡಿದ್ದಾರೆ. ಪಕ್ಷದ 35 ಕಚೇರಿಗಳ ಮೇಲೆ ದಾಳಿ ನಡೆದಿದೆ. ಪಕ್ಷದ ಕಾರ್ಯಕರ್ತರ 80 ಮನೆಗಳ ಮೇಲೂ ದಾಳಿ ನಡೆದಿದೆ. ಕೇರಳದಲ್ಲಿ 1968ರಲ್ಲಿ ಆರಂಭವಾದ ಈ ಬರ್ಬರ ದಾಳಿಗಳಲ್ಲಿ ಈ ವರೆಗೆ 197 ಸಿಪಿಐ(ಎಂ) ಕಾರ್ಯಕರ್ತರು ಹುತಾತ್ಮರಾಗಿದ್ದಾರೆ. (ಇದರ ವಿವರಗಳು ಈ ಸಂಚಿಕೆಯ ಬೇರೆ ಪುಟಗಳಲ್ಲಿ ಇವೆ)

ಸಂಘಗ್ಯಾಂಗ್ 'ಕಮ್ಯುನಿಸ್ಟ್ ಹಿಂಸಾಚಾರ' ಬಗ್ಗೆ ಟಿವಿ-ಪತ್ರಿಕೆಗಳಲ್ಲಿ, ಸಾಮಾಜಿಕ ಮಾಧ್ಯಮಗಳಲ್ಲಿ ವ್ಯಾಪಕ ಅಪಪ್ರಚಾರವನ್ನೂ ನಡೆಸುತ್ತಿದೆ. ಒಂದು ಸುಳ್ಳನ್ನು ನೂರಾರು ಬಾರಿ ಹೇಳಿ ಅದೇ ಸತ್ಯ ಎನ್ನುವ ಹಿಟ್ಲರನ ಬಂಟ ಗೋಬೆಲ್ಸ್‌ನ ತಂತ್ರಗಳನ್ನು ಬಿಜೆಪಿ/ಆರೆಸ್ಸೆಸ್ ಸದಾ ಬಳಸಿಕೊಂಡು ಬಂದಿದೆ. ಬೆಂಗಳೂರಿನಲ್ಲಿ 'ಕಮ್ಯುನಿಸ್ಟ್ ಹಿಂಸಾಚಾರ ಕೊನೆಗೊಳ್ಳಬೇಕು' ಎಂಬ ವಿಚಾರಗೋಷ್ಠಿಯನ್ನು ಸಿಪಿಐ(ಎಂ)ನ ಕಛೇರಿ ಮೇಲೆ ದಾಳಿ ಪ್ರಯತ್ನದ ಮರುದಿನ ಸಂಘಟಿಸಲಾಗಿತ್ತು. ಈ ವಿಚಾರಗೋಷ್ಠಿಯನ್ನು ಮಂಥನ ಎಂಬ ಸಂಘಟನೆ ಆಯೋಜಿಸಿದ್ದು ಇದು ಸಂಘಗ್ಯಾಂಗಿನ ಮುಖವಾಡಗಳಲ್ಲಿ ಒಂದು ಎಂಬುದು ಸ್ಪಷ್ಟ. ಈ ವಿಚಾರಗೋಷ್ಠಿಯ ಬಗ್ಗೆ ಘೋಷಣೆ ದಾಳಿ ಪ್ರಯತ್ನದ ಮೊದಲೇ ಮಾಡಲಾಗಿತ್ತು ಎಂಬುದನ್ನು ಗಮನಿಸಿದರೆ ಇದು ವ್ಯವಸ್ಥಿತ ಕಮ್ಯುನಿಸ್ಟ್-ವಿರೋಧಿ ಅಪಪ್ರಚಾರದ ಭಾಗ ಎನ್ನುವುದು ಸ್ಪಷ್ಟ. ಇಂತಹ ಒಂದು ವಿಚಾರಗೋಷ್ಠಿಯನ್ನು ಬೆಂಗಳೂರಿನಲ್ಲಿ ಹಮ್ಮಿಕೊಂಡದ್ದು ಬಹುಶ: ಇದೇ ಮೊದಲು ಎಂದು ಗಮನಿಸಬೇಕು. ಇದರಲ್ಲಿ ಮುಖ್ಯ ಮಾತುಗಾರ ಕಾರ್ಮಿಕ-ವಿರೋಧಿ ಕುಖ್ಯಾತಿಯ ಬಿ.ಪಿ.ಎಲ್ ಮಾಲಿಕ ರಾಜೀವ್ ಚಂದ್ರಶೇಖರ್ ಆಗಿದ್ದರು. ಈತ ಭ್ರಷ್ಟಾಚಾರದ ವಿರುದ್ಧ ದೊಡ್ಡ ಮಾತುಗಳನ್ನು ಆಡುತ್ತಿದ್ದರೂ, ಕರ್ನಾಟಕದ ರಾಜ್ಯಸಭಾ ಸೀಟನ್ನು ಕೋಟಿಗಟ್ಟಲೆ ಹಣ ಸುರಿದು ಖರೀದಿಸಿದ ಆಸಾಮಿ. ಆತ ಕರ್ನಾಟಕದ ಎಲ್ಲಾ ಪಕ್ಷಗಳ ಶಾಸಕರ 'ಬೆಂಬಲ'ದಿಂದ 'ಚುನಾಯಿತ'ನಾದ 'ಪಕ್ಷೇತರ' ರಾಜ್ಯಸಭಾ ಸದಸ್ಯ. ಆದರೆ ಕೇರಳದ ಎನ್.ಡಿ.ಎ.ಯ ಸಂಚಾಲಕ (ಇದು ಹೇಗೆ ಸಾಧ್ಯ ಎಂದು ಅವರನ್ನೇ ಕೇಳಬೇಕು)?! ಸುವರ್ಣ ನ್ಯೂಸ್ ಟಿವಿ ಚಾನೆಲ್ ಮತ್ತು ಇತರ ಹಲವು ಕಂಪನಿಗಳ ಮಾಲಿಕನಾಗಿರುವ ದೊಡ್ಡ ಕಾರ್ಪೊರೇಟ್ ಕುಳ. ಸ್ವಾಭಾವಿಕವಾಗಿಯೇ ಆತನ ಒಡೆತನದ ಸುವರ್ಣ ನ್ಯೂಸ್ 'ಕಮ್ಯುನಿಸ್ಟ್ ಹಿಂಸಾಚಾರ' ಬಗ್ಗೆ ಪುಂಖಾನುಪುಂಖವಾಗಿ ಅಪಪ್ರಚಾರ ನಡೆಸುತ್ತಿದೆ.



ಕರ್ನಾಟಕದ ಇತರ ಟಿವಿ-ಪತ್ರಿಕೆಗಳು ಈ ಅಪಪ್ರಚಾರವನ್ನು ಇಷ್ಟು ಗಂಭೀರವಾಗಿ ಮಾಡದಿದ್ದರೂ, ತಮ್ಮ 'ಜಾಣ ಕಿವುಡು/ಕುರುಡು' ಗಳಿಂದ ಈ ಅಪಪ್ರಚಾರಕ್ಕೆ ಸಹಾಯ ಮಾಡುತ್ತಿವೆ. ಸಿಪಿಐ(ಎಂ) ಮತ್ತು ಇತರ ಎಡ ಸಂಘಟನೆ/ಪಕ್ಷಗಳ ಕಾರ್ಯಕರ್ತರ ಮೇಲೆ ದಾಳಿ ಕೊಲೆಗಳು ಈ ಹೆಚ್ಚಿನ ಮಾಧ್ಯಮಗಳಲ್ಲಿ ಸುದ್ದಿಯಾಗುವುದಿಲ್ಲ. ಈ ಕೊಲೆಗಳ ಅಪರಾಧಿಗಳು ಬಿಜೆಪಿ/ಆರೆಸ್ಸೆಸ್ ಕಾರ್ಯಕರ್ತರು ಎಂಬುದು ದೊಡ್ಡ ಸುದ್ದಿಯಾಗುವುದಿಲ್ಲ. ಆದರೆ ಆರೆಸ್ಸೆಸ್/ಬಿಜೆಪಿ ಕಾರ್ಯಕರ್ತರ ಸಾವುಗಳು ಮತ್ತು ಅವುಗಳ ಬಗ್ಗೆ ಸಂಘಗ್ಯಾಂಗಿನ ಅತಿರಂಜಿತ ಹೇಳಿಕೆಗಳು ಭಾರಿ ಪ್ರಚಾರ ಪಡೆಯುತ್ತವೆ. ಇದು ಒಂದು ಬಗೆಯಾದರೆ ಹೆಚ್ಚು 'ಲಿಬರಲ್' ಟಿವಿ-ಪತ್ರಿಕೆಗಳು ಇಬ್ಬರೂ ಈ ಹಿಂಸಾಚಾರಕ್ಕೆ ಸಮಾನವಾಗಿ ಜವಾಬ್ದಾರರು ಎಂಬ ಕಪ್ಪೆ ತಕ್ಕಡಿ ನ್ಯಾಯ ಮಾಡುತ್ತವೆ. ಹೆಚ್ಚಿನ ಆರೆಸ್ಸೆಸ್/ಬಿಜೆಪಿ ಕಾರ್ಯಕರ್ತರ ಸಾವುಗಳು ಬಾಂಬು ತಯಾರಿಕಾ ಘಟಕಗಳಲ್ಲಿ ಆದ ಅಫಘಾತಗಳಿಂದ ಅಥವಾ ಭೂಗತ ಅಪರಾಧಿ-ಗ್ಯಾಂಗುಗಳ ನಡುವಿನ ಪೈಪೋಟಿಯ ಅಥವಾ ವೈಯಕ್ತಿಕ ಕಾರಣಗಳು ಎಂದು ಬಹಿರಂಗವಾದಾಗಲೂ ಅವು ಮಾಧ್ಯಮಗಳಲ್ಲಿ ಪ್ರಚಾರ ಪಡೆಯುವುದಿಲ್ಲ. ಕೊಲೆಯಾದ ಅಥವಾ ಸಾವಿಗೀಡಾದ ಆರೆಸ್ಸೆಸ್/ಬಿಜೆಪಿ ನಾಯಕರು/ಕಾರ್ಯಕರ್ತರು ರೌಡಿಶೀಟರುಗಳು ಅಪರಾಧಿ ಗ್ಯಾಂಗುಗಳಿಗೆ ಸೇರಿದ್ದವರು ಆಗಿದ್ದಾಗಲೂ, ಆರೆಸ್ಸೆಸ್/ಬಿಜೆಪಿ ನಾಯಕತ್ವ ಅವರನ್ನು 'ರಾಷ್ಟ್ರೀಯವಾದಿ ಹುತಾತ್ಮ'ರಂತೆ ಬಿಂಬಿಸಲು ಪ್ರಯತ್ನಿಸುತ್ತದೆ. ಹೆಚ್ಚಿನ ಮಾಧ್ಯಮಗಳು ಇದನ್ನು ಪ್ರಶ್ನಿಸಿ ಬಯಲಿಗೆಳೆಯುವುದಿಲ್ಲ. ಬದಲಾಗಿ ಕೆಲವು ಆರೆಸ್ಸೆಸ್/ಬಿಜೆಪಿ ನಿಲುವುಗಳನ್ನು ಬೆಂಬಲಿಸುತ್ತವೆ ಕೂಡಾ. ಆದ್ದರಿಂದ ಸಂಘಗ್ಯಾಂಗಿನ 'ಕಮ್ಯುನಿಸ್ಟ್-ವಿರೋಧಿ ಅಪಪ್ರಚಾರ ಹಾಗೂ ಮಾಧ್ಯಮಗಳ 'ಜಾಣ ಕಿವುಡು/ಕುರುಡು' ಅಥವಾ ಶಾಮೀಲನ್ನೂ ಬಯಲಿಗೆಳೆಯುವುದೂ ಅಗತ್ಯ.

ಇಂತಹ ಎರಡು ಪ್ರಮುಖ ಪ್ರಯತ್ನಗಳನ್ನು ಇಲ್ಲಿ ನಿರೂಪಿಸುವುದು ಪ್ರಸ್ತುತ. ಅಗಸ್ಟ್ 2015ರಲ್ಲಿ 'ಕೇರಳದಲ್ಲಿ ಕಮ್ಯುನಿಸ್ಟ್ ಹಿಂಸಾಚಾರ'ದ ಬಗ್ಗೆ ಒಂದು ಪೋಸ್ಟರ್ ಪ್ರದರ್ಶನವನ್ನು ನವದೆಹಲಿಯಲ್ಲಿ ಏರ್ಪಡಿಸಿತ್ತು. ಅದನ್ನು ಬಿಜೆಪಿ ಪ್ರಧಾನ ಕಾರ್ಯದರ್ಶಿ ಅಮಿತ್ ಶಾ ಅವರೇ ಉದ್ಘಾಟಿಸಿದರು. ಪೋಸ್ಟರ್ ಪ್ರದರ್ಶನದಲ್ಲಿ ಸಂಘಗ್ಯಾಂಗಿನ 'ಹುತಾತ್ಮ'ರ ಫೋಟೊಗಳನ್ನು ಹಾಕಲಾಗಿತ್ತು. ಸಿಪಿಐ(ಎಂ)ನ ಕೇಂದ್ರೀಯ ಸಾಮಾಜಿಕ ಮಾಧ್ಯಮ ವಿಭಾಗ ಈ 'ಹುತಾತ್ಮ'ರ ಅಸಲಿಯತ್ತುಗಳನ್ನು ಬಯಲಿಗೆಳೆಯಿತು. ಇವುಗಳಲ್ಲಿ ಗಮನಾರ್ಹವಾದದ್ದು ಎಂದರೆ 'ಹುತಾತ್ಮ'ರಲ್ಲಿ ಆರು ಜನ ಬಾಂಬ್ ತಯಾರಿಕಾ ಘಟಕದಲ್ಲಿ ಅಫಘಾತವಾದಾಗ ಮತ್ತು ಬಾಂಬು ಇಡಲು ಹೋಗುತ್ತಿದ್ದಾಗ ಸತ್ತವರು, ಕೊಲೆಯಾದವರಲ್ಲ ಎಂಬುದನ್ನು ಪತ್ರಿಕಾ ವರದಿಗಳು ಪೋಲಿಸ್ ಮೂಲಗಳಿಂದ ಸಿದ್ಧಪಡಿಸಿತು. ಹೀಗೆ ಹಲವು 'ಹುತಾತ್ಮ'ರ ಸಾವುಗಳ ಹಿಂದಿರುವ ಅಸಲಿಯತ್ತನ್ನು ಬಹಿರಂಗಪಡಿಸುತ್ತಾ ಸಂಘಗ್ಯಾಂಗಿನ ಅಪಪ್ರಚಾರವನ್ನು ಬಯಲಿಗೆಳೆಯುತ್ತಾ ಹೋಯಿತು. ಇದನ್ನು ಫೇಸ್ ಬುಕ್, ಟ್ವಿಟರ್ ಗಳಲ್ಲಿ ಪ್ರಸಾರ ಮಾಡಿ ಸಂಘಗ್ಯಾಂಗಿನ ಗೋಬೆಲ್ಸಿಯನ್ ಪ್ರಚಾರವನ್ನು ಬಯಲಿಗೆಳೆಯಿತು. ಮಾತ್ರವಲ್ಲ ದಶಕಗಳಿಂದ ಸಿಪಿಐ(ಎಂ) ಕಾರ್ಯಕರ್ತರ ಕೊಲೆ ಮತ್ತು ಸಂಘಗ್ಯಾಂಗಿನ ಕೊಲೆಗಾರರ ವಿವರಗಳನ್ನು ಪ್ರಕಟಿಸಿ ದಾಳಿಕೋರರರು ಯಾರು ಬಲಿಪಶುಗಳು ಯಾರು ಎಂದು ಸ್ಪಷ್ಟ ಪಡಿಸಿತು. ಇದೇ ಅಭಿಯಾನದಲ್ಲಿ ಸಂಘಗ್ಯಾಂಗಿನ ಕ್ರಿಮಿನಲ್ ದಾಳಿಗೆ ಗುರಿಯಾಗಿದ್ದು ಸಿಪಿಐ(ಎಂ) ಮಾತ್ರವಲ್ಲ. ಸಂಘಗ್ಯಾಂಗಿನ ರಾಜಕೀಯವೇ ಕ್ರಿಮಿನಲ್ ಪಿತೂರಿಗಳ ಬೆದರಿಕೆಗಳ ಕೋಮುದಂಗೆಗಳ ಹಿಂಸಾಚಾರ ಪ್ರಚೋದೆಯ ಮೇಲೆ ಆಧಾರಿತವಾಗಿದೆ. ಈ ನಿಟ್ಟಿನಲ್ಲಿ ಸಂಘಗ್ಯಾಂಗಿನ ಕ್ರಿಮಿನಲ್ ದಾಳಿಗಳಿಗೆ ಒಳಗಾಗಿರುವ ಮುಸ್ಲಿಂ/ಕ್ರಿಶ್ಚಿಯನ್ ವ್ಯಕ್ತಿಗಳು, ಸಂಘಟನೆಗಳ ವಿವರಗಳೂ ಇವೆ. ಈ ಫೇಸ್ ಬುಕ್, ಟ್ವಿಟರ್ ಅಭಿಯಾನವನ್ನು #RSSTerror ನ ಗೂಗಲ್ ಹುಡುಕಾಟದಿಂದ ಪಡೆಯಬಹುದು. ಇದು ಒಟ್ಟಾಗಿ ಈ ಮುಂದಿನ ವೆಬ್ ಕೊಂಡಿಯಿಂದಲೂ ದೊರೆಯುತ್ತದೆ https://storify.com/cpimspeak/rss-terror-in-kerela. ಈ ಮೂಲಗಳನ್ನು ಬಳಸಿ ಕನ್ನಡದಲ್ಲೂ ಇಂತಹುದೇ ಅಭಿಯಾನ ನಡೆಸಿ ಸಂಘಗ್ಯಾಂಗಿನ ಅಪಪ್ರಚಾರವನ್ನು ಬಯಲಿಗೆಳೆಯಬೇಕಾಗಿದೆ. ಈ ಅಭಿಯಾನದ ಕೆಲವು ಉದಾಹರಣೆಗಳನ್ನು ಈ ಸಂಚಿಕೆಯ ಇತರ ಪುಟಗಳಲ್ಲಿ ಕೊಡಲಾಗಿದೆ.

ಎರಡು ದಶಕಗಳ ಕಾಲ ಆರೆಸ್ಸೆಸ್ ಪ್ರಚಾರಕನಾಗಿದ್ದ ಸುಧೀಶ್ ಮಿನ್ನಿ ಅವರ 'ನರಕ ಸಾಕೇತತ್ತಿಲೆ ಉಳ್ಳರ್ಕಳ್' (ನರಕದ ಗರ್ಭಗುಡಿಯ ಗುಟ್ಟುಗಳು) ಎಂಬ ಪುಸ್ತಕ ಸಂಘಗ್ಯಾಂಗಿನ ಅಪಪ್ರಚಾರವನ್ನು ಪೂರ್ಣವಾಗಿ ಬಯಲಿಗೆಳೆದ ಇನ್ನೊಂದು ವಿದ್ಯಮಾನ. ಇದು ಸುಧೀಶ್ ಅವರು ತಾವು ಕಣ್ಣಾರೆ ಕಂಡ ಆರೆಸ್ಸೆಸ್ ಪಿತೂರಿಗಳ ಹಿಂಸಾಚಾರದ ಬಗ್ಗೆ ಅಸಂದಿಗ್ಧ ಪುರಾವೆ ನೀಡುವ ದಾಖಲೆ. ಈ ಪುಸ್ತಕ ಈಗಾಗಲೇ ಮೂರು ಆವೃತ್ತಿಗಳನ್ನು ಕಂಡ 'ಬೆಸ್ಟ್ ಸೆಲ್ಲರ್' ಆಗಿದೆ. ಈ ಪುಸ್ತಕದಿಂದಲೂ ಕೆಲವು ಉದಾಹರಣೆಗಳನ್ನು ಈ ಸಂಚಿಕೆಯ ಇತರ ಪುಟಗಳಲ್ಲಿ ಕೊಡಲಾಗಿದೆ.

ಈ ಎರಡೂ ಮೂಲಗಳು ಮತ್ತು ಇತರ ಮೂಲಗಳನ್ನು ಆಧರಿಸಿ ಈ ಪತ್ರಿಕೆಯ ಮುಂದಿನ ಸಂಚಿಕೆಗಳಲ್ಲಿ ಸಂಘಗ್ಯಾಂಗಿನ ಅಪಪ್ರಚಾರವನ್ನು ಬಯಲಿಗೆಳೆಯಲಾಗುವುದು. ಈ ಅಭಿಯಾನದಲ್ಲಿ ಎಲ್ಲಾ ಎಡ ಪ್ರಜಾಸತ್ತಾತ್ಮಕ ಶಕ್ತಿಗಳು, ಪಕ್ಷಗಳು, ವ್ಯಕ್ತಿಗಳು, ಸಂಘಟನೆಗಳು ಕೈಜೋಡಿಸಿ ಸಂಘಗ್ಯಾಂಗಿನ ದುಷ್ಟ ರಾಜಕೀಯವನ್ನು ಸೋಲಿಸಬೇಕಾಗಿದೆ.

ಕೋಮುವಾದದ ವಿರುದ್ಧ ಕರಾವಳಿ ಜಿಲ್ಲೆಗಳಲ್ಲಿ ಪ್ರಚಾರಾಂದೋಲನ

ಕೋಮುವಾದದ 'ಪ್ರಯೋಗಶಾಲೆ' ಎಂದು ಕುಖ್ಯಾತಿ ಪಡೆದಿರುವಕರ್ನಾಟಕದ ಕರಾವಳಿ ಜಿಲ್ಲೆಗಳಲ್ಲಿ ಕೋಮುವಾದದ ವಿರುದ್ಧವ್ಯಾಪಕ ಪ್ರಚಾರಾಂದೋಲನ ನಡೆಸಲು ಸಿಪಿಐ(ಎಂ) ರಾಜ್ಯ ಸಮಿತಿ ನಿರ್ಧರಿಸಿದೆ. ಈ ಪ್ರಚಾರಾಂದೋಲನ ಮೂರು ಹಂತಗಳಲ್ಲಿ ನಡೆಯಲಿದೆ. ಮೊದಲ ಹಂತದಲ್ಲಿಡಿಸೆಂಬರ್ ಮೊದಲ ವಾರದಲ್ಲಿ ಕರಾವಳಿ ಜಿಲ್ಲೆಗಳಲ್ಲಿ ಕೋಮುವಾದದ ಬಗ್ಗೆ ಕಾರ್ಯಾಗಾರಗಳು ನಡೆಯಲಿವೆ. ಎರಡನೇಹಂತದಲ್ಲಿ ಡಿಸೆಂಬರ್ ಎರಡನೇ ವಾರದಲ್ಲಿ ಕೋಮುವಾದದ ಬಗ್ಗೆ ಸಮಾವೇಶಗಳು ನಡೆಯಲಿವೆ. ಮೂರನೇ ಹಂತದಲ್ಲಿ ಕರಾವಳಿ ಜಿಲ್ಲೆಗಳಲ್ಲಿ ವ್ಯಾಪಕವಾಗಿ ಜನತೆಯನ್ನು ಮುಟ್ಟುವ ಜಾಥಾಗಳು ನಡೆದು ಜನವರಿ ಎರಡನೇ ವಾರದಲ್ಲಿ ಮಂಗಳೂರಿನಲ್ಲಿ ಬೃಹತ್‌ರ್‍ಯಾಲಿಯೊಂದಿಗೆ ಪ್ರಚಾರಾಂದೋಲನ ಮುಗಿಯಲಿದೆ. ಮಂಗಳೂರಿನ ಬೃಹತ್ ರ್‍ಯಾಲಿಗೆ ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಬರಲಿದ್ದಾರೆ.

ನ. 12: ಕೋಮುವಾದದ ವಿರುದ್ಧ ಎಡಪಕ್ಷಗಳ ಸಮಾವೇಶ

ಹಿಂದೆ ಆಯೋಜಿಸಲಾಗಿದ್ದು ಮುಂದೂಡಲಾಗಿದ್ದ ಕೋಮುವಾದದ ವಿರುದ್ಧ ಎಡಪಕ್ಷಗಳ ಸಮಾವೇಶ ನವೆಂಬರ್ 12ರಂದು ಬೆಂಗಳೂರಿನಲ್ಲಿ ನಡೆಯಲಿದೆ. ಈ ಸಮಾವೇಶ 'ರಾಜದ್ರೋಹ ಕಾನೂನು ಮತ್ತುಅದರ ಅಪಾಯಗಳ ಬಗ್ಗೆ ಗಮನ ಕೇಂದ್ರೀಕರಿಸಲಿದೆ. ಈ ಬಗ್ಗೆ ಪರಿಣತ ವಕೀಲರು/ನ್ಯಾಯಮೂರ್ತಿಗಳ ವಿಶೇಷ ಉಪನ್ಯಾಸ ಹಾಗೂ ಸಂವಾದಗಳು ನಡೆಯಲಿವೆ.

ಅಕ್ಟೋಬರ್ ಕ್ರಾಂತಿ ಶತಮಾನೋತ್ಸವ

ಅಕ್ಟೋಬರ್‌ಕ್ರಾಂತಿ ಶತಮಾನೋತ್ಸವವನ್ನು ಈ ನವೆಂಬರ್ ನಿಂದ ಮುಂದಿನ ನವೆಂಬರ್ ವರೆಗೆ ಆಚರಿಸಲು ನಿರ್ಧರಿಸಲಾಗಿದೆ. ಬೆಂಗಳೂರಿನಲ್ಲಿ ಬೆಂಗಳೂರು ಉತ್ತರ ಮತ್ತು ದಕ್ಷಿಣ ಜಿಲ್ಲಾ ಸಮಿತಿಗಳು ನವೆಂಬರ್ 6-7 ರಂದು ಶತಮಾನೋತ್ಸವದ ಉದ್ಘಾಟನೆಯನ್ನು ಹಮ್ಮಿಕೊಂಡಿವೆ. ಪ್ರತಿ ತಿಂಗಳು ಒಂದು ಕಾರ್ಯಕ್ರಮದಂತೆ ಇಡೀ ವರ್ಷಶತಮಾನೋತ್ಸವ ನಡೆದು 2017 ನವೆಂಬರ್ 7ರಂದು ಬೃಹತ್ ರ್‍ಯಾಲಿಯೊಂದಿಗೆ ಸಮಾರೋಪಗೊಳ್ಳಲಿದೆ.

ರುದ್ರೇಶ್ ಹತ್ಯೆ ಮತ್ತು ರಾಜಕೀಯ ದುರುದ್ದೇಶಗಳು

ಎಸ್.ವೈ. ಗುರುಶಾಂತ್

ಕರ್ನಾಟಕದಲ್ಲೀಗ ಹತ್ಯೆ ಮತ್ತು ಆತ್ಮಹತ್ಯೆಗಳ ಸರಣಿ ಮತ್ತಷ್ಟೂ ಲಂಬಿಸುತ್ತಿದೆ. ಸಮಾಜದಲ್ಲಿ ಜರುಗುತ್ತಲೇ ಇರುವ ಅಪರಾಧಗಳು ಒಂದೆಡೆಯಾದರೆ ಸಾಮಾಜಿಕ ಮತ್ತು ರಾಜಕೀಯ ಅಸಹಿಷ್ಣುತೆಯ ಪರಿಣಾಮದಲ್ಲಿ ಹತ್ಯಾ ರಾಜಕೀಯ ತಲ್ಲಣವನ್ನು ಉಂಟು ಮಾಡುತ್ತಿವೆ. ಮತೀಯ ಮೂಲಭೂತವಾದ, ಜಾತೀವಾದ, ಲಿಂಗ ತಾರತಮ್ಯಗಳ ದಳ್ಳುರಿಯಲ್ಲಿ ಬೇಯುವ ದುರ್ಘಟನೆಗಳು ನಿತ್ಯದ ಮಾತಾಗುತ್ತಿದೆ. ನಡೆಯುವ ಹತ್ಯೆಗಳು ನಡೆಸುವ ದಂಧೆಗಳ ಸ್ಪರ್ಧೆಗಳ ಮೂಲವೇ ಆಗಿರಬಹುದು. ಅಥವಾ ತಾತ್ವಿಕ ರಾಜಕೀಯ ಭಿನ್ನಾಭಿಪ್ರಾಯಗಳ ಲೆಕ್ಕ ಚುಕ್ತಾ ಮಾಡಿಕೊಳ್ಳುವ ದ್ವೇಷ, ಅಸಹನೆಯೂ ಇರಬಹುದು. ಆದರೆ ಹತ್ಯಾ ರಾಜಕೀಯ ನಮ್ಮ ಭಾದತೀಯ ಸಮಾಜದ ಸೌಹಾರ್ಧತೆ, ಶಾಂತಿ ಸಾಮರಸ್ಯ, ಕಾನೂನು ಬದ್ಧ ಆಡಳಿತವನ್ನು ನಾಶಗೊಳಿಸುವ ಕಿಚ್ಚುಗಳಾಗುತ್ತಿರುವುದು ದುರಂತವೇ ಆಗಿದೆ.

ಕಾರ್ಷಿಕ ಬಿಕ್ಕಟ್ಟಿನಿಂದ ರೈತರು ಆತ್ಮಹತ್ಯೆಗಳೆಂಬ ಕೊಲೆಗೀಡಾಗುತ್ತಿರುವುದು 'ಮಾಮೂಲಿ'ಯಂತಾಗಿ ಬಿಟ್ಟಿರುವುದು ಮಾನವೀಯತೆಯ ಮನಸ್ಸಿಗೆ 'ಗರ' ಬಡಿದಿರುವುದರ ಪ್ರತೀಕ. ಕರ್ತವ್ಯದ ತನ್ನ ಕ್ಷೇತ್ರದಲ್ಲಿ ಹಲವು ಒತ್ತಡಗಳನ್ನು ತಾಳದೇ ಕೆಲ ಅಧಿಕಾರಿಗಳು ಆತ್ಮಹತ್ಯೆಗೀಡಾಗುವುದು , ಹತಾಶೆಯ ಪರಿಹಾರದ ಹಾದಿ ಆತ್ಮಹತ್ಯೆ ಎಂಬಂತೆ ಸಾಂಕ್ರಾಮಿಕವಾಗುತ್ತಿರುವುದು ಒಂದು ಗಂಭೀರ ಸಾಮಾಜಿಕ ಬಿಕ್ಕಟ್ಟಿನ ಒತ್ತಡದ ಸಂದರ್ಭ.

ಈ ವಾರದಲ್ಲಿ ಮಾಲೂರಿನ ಇನ್‌ಸ್ಪೆಕ್ಟರ್ ಒಬ್ಬರು ಠಾಣೆಯಲ್ಲೇ ತಲೆಗೆ ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ನಿಜದ ಕಾರಣ ತಿಳಿದಿಲ್ಲ. ಎರಡನೆಯದು ಬೆಂಗಳೂರಿನ ಕಾಮರಾಜ್ ರಸ್ತೆಯಲ್ಲಿ ಆದ ಆರ್.ಎಸ್.ಎಸ್. ಕಾರ್ಯಕರ್ತ ಆರ್.ರುದ್ರೇಶ್(42) ರವರ ಹತ್ಯೆ. ಈ ಬಗ್ಗೆ ಕೊಲೆಗಡುಕರು ಯಾರು, ಕಾರಣ–ಹಿನ್ನೆಲೆ ಏನು ಎಂಬುದು ತಿಳಿದಿಲ್ಲ, ತನಿಖೆ ನಡೆದಿದೆ. ಪ್ರತಿಭಟನೆಯೂ ತೀವ್ರ ಸ್ವರೂಪ ತಾಳುತ್ತಿದೆ.

ಆರ್.ರುದ್ರೇಶ್ ರವರು ಅಕ್ಟೋಬರ್ 19, 2016 ರಂದು ಬೆಳಿಗ್ಗೆ ಆರ್.ಎಸ್.ಎಸ್.ನ ನಿಗದಿತ ಪಥ ಸಂಚಲನ ಮುಗಿಸಿಕೊಂಡು ಗೆಳೆಯರ ಕರೆಯಂತೆ ಅಂಗಡಿ ಬಳಿ ಕುಳಿತಿರುವಾಗ ಪಲ್ಸರ್ ಬೈಕ್ ಮೇಲೆ ಬಂದ ಇಬ್ಬರು ಹತ್ಯೆ ಮಾಡಿದ್ದಾರೆ. ರುದ್ರೇಶ್‌ರವರು ಶಿವಾಜಿನಗರದ ಶಾಖೆಯೊಂದರ ಅಧ್ಯಕ್ಷರು ಹಾಗೂ ಬಿಜೆಪಿ ಪಕ್ಷದ ವಿಧಾನಸಭಾ ಕ್ಷೇತ್ರದ ಕಾರ್ಯದರ್ಶಿಯೂ ಆಗಿದ್ದವರು. ಅವರು ಹಣಕಾಸು ಹಾಗೂ ಭೂ ಮಾರಾಟದ ರಿಯಲ್ ಎಸ್ಟೇಟ್ ವ್ಯವಹಾರದಲ್ಲಿ ಇದ್ದವರು. ಕೊಲ್ಲುವವರು ನೀಡುವ ಕಾರಣಗಳು ಏನೇ ಇರಬಹುದು. ಆದ–ರೆ ಭಿನ್ನಾಭಿಪ್ರಾಯಗಳು ಅಥವಾ ವ್ಯವಹಾರದಲ್ಲಿನ ವ್ಯಾಜ್ಯಗಳನ್ನು ಕೊಲೆ ಮಾಡುವ ಮೂಲಕ ಇತ್ಯರ್ಥ ಪಡಿಸಿಕೊಳ್ಳುವ ಯಾವುದೇ ಕೃತ್ಯಗಳು ಖಂಡನೀಯ.

ರುದ್ರೇಶ್ ರವರ ಹತ್ಯೆಯ ತನಿಖೆ ತೀವ್ರವಾಗಿ ನಡೆಸಿ ಕೊಲೆಗಡುಕರನ್ನು ಬಂಧಿಸಲಾಗುವುದು ಎಂದು ಬೆಂಗಳೂರಿನ ಪೊಲೀಸರು ತಿಳಿಸಿದ್ದಾರೆ. ವಿಶೇಷ ತನಿಖಾ ತಂಡಗಳು ಕಾರ್ಯಾಚರಣೆಯಲ್ಲಿವೆ. ಈ ಕೃತ್ಯಕ್ಕೆ ಕಾರಣಗಳನ್ನು ಬಯಲಿಗೆಳೆಯುವುದು ಮತ್ತು ಅಪರಾಧಿಗಳು ಯಾರೆಂದು ನಿಖರ ಸಾಕ್ಷ್ಯಗಳ ಸಮೇತ ಬಂಧಿಸಲು ತನಿಖೆಯನ್ನು ತೀವ್ರಗೊಳಿಸಬೇಕಿದೆ. ದೃಡ ಕ್ರಮಗಳನ್ನು ಕೈಗೊಳ್ಳಬೇಕಿದೆ.

ಈ ದುರ್ಘಟನೆಯನ್ನು ಖಂಡಿಸಿ ಕರ್ನಾಟಕ ಬಿಜೆಪಿ ಪಕ್ಷ ಸತತವಾಗಿ ಪ್ರತಿಭಟನೆಯನ್ನು ನಡೆಸುತ್ತಿದೆ. ಅಪರಾಧಿಗಳನ್ನು ಬಂಧಿಸಲು ವಿಳಂಬವಾಗುತ್ತಿದೆಯೆಂದೂ ಆರೋಪಿಸುತ್ತಿದೆ. ಪ್ರತಿಭಟನೆ–ಒತ್ತಾಯಗಳು ಸಹಜ, ಅದು ತಪ್ಪು ಎಂದು ಹೇಳಲಾಗದು. ಆದರೆ ತನಿಖೆ ನಡೆದಿರುವಾಗಲೇ ಅವರು ಮುಂದುವರಿದು, ಸರಕಾರ ಅಪರಾಧಿಗಳನ್ನು ರಕ್ಷಿಸಲು ಬಯಸುತ್ತಿದೆಯೆಂದೂ, ಆ ಅಪರಾಧಿಗಳು ಆ ಪ್ರದೇಶದಲ್ಲೇ ಇರುವ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದವರೆಂದೂ, ಅವರು ದೇಶದ್ರೋಹಿಗಳು, ದೇಶಭಕ್ತರನ್ನೂ ಕೊಲ್ಲುತ್ತಿರುವರೆಂದೂ, ಕಾನೂನು ಸುವ್ಯವಸ್ಥೆ ಕುಸಿದಿದೆಯೆಂದೂ ಎತ್ತರದ ಸ್ವರದಲ್ಲಿ ಹೇಳುತ್ತಾ, ಕರ್ನಾಟಕ ಬಂದ್‌ಗೆ ಕರೆ ಕೊಡುವುದಾಗಿ ಹೇಳಿದ್ದಾರೆ. ಕೊಲೆಗಡುಗರು ಹೊರಗಿನಿಂದ ಬಂದಿರುವರೆಂದೂ ಇನ್ನೂ ಮುಂದೆ ಹೋಗಿ ಕಮ್ಯೂನಿಷ್ಟರ ಪಾತ್ರ ಇರಬಹುದೆಂದೂ ಆರೋಪಿಸಿದ್ದಾರೆ. ಈ ಪ್ರತಿಭಟನೆಯಲ್ಲಿ ಇಡೀ ಬಿಜೆಪಿಯ ಬಹುತೇಕ ಪ್ರಮುಖ ನಾಯಕರೆಲ್ಲಾ ಧುಮುಕಿದ್ದಾರೆ ಮತ್ತು ಅವರದೇ ಧಾಟಿಗಳಲ್ಲಿ ರಾಜ್ಯದಾದ್ಯಂತ ಹೇಳಿಕೆಗಳನ್ನು ಕೊಡುತ್ತಿದ್ದಾರೆ.

ಇವೆಲ್ಲವನ್ನೂ ಗಮನಿಸಿದರೆ ಬಿಜೆಪಿಗೆ ಈ ಹತ್ಯೆಯ ಪ್ರಕರಣದಲ್ಲಿ ಅಪರಾಧಿಗಳನ್ನು ಪತ್ತೆ ಹಚ್ಚಿ ಶಿಕ್ಷಿಸಲು ಕಾನೂನು ಕ್ರಮ ವಹಿಸಬೇಕು ಎಂಬುದಕ್ಕೆ ಒತ್ತು ನೀಡುವುದಕ್ಕಿಂತ ಈ ಪ್ರಕರಣವನ್ನು ತನ್ನ ರಾಜಕೀಯ ಗುರಿ ಸಾಧನೆಗೆ ಬಳಸಲು ಯತ್ನಿಸುತ್ತಿದೆ. ಮೇಲಾಗಿ ಪ್ರಕರಣವನ್ನು ಕೋಮು ವಿಭಜನೆ ತರಲು ಪ್ರಯತ್ನಿಸುತ್ತಿರುವುದು ಹಾಗೂ ಇದನ್ನು ವ್ಯಾಪಕಗೊಳಿಸಲು ಬಯಸುತ್ತಿರುವುದು ಸ್ಪಷ್ಟವಾಗುತ್ತದೆ.

ಕೊಲೆ ನಡೆದ ವಿಧಾನ, ಪ್ರಾಥಮಿಕವಾಗಿ ದೊರೆತಿರುವ ಮಾಹಿತಿಗಳನ್ನು ಪರಿಶೀಲಿಸಿದರೆ ಇದು ವ್ಯವಸ್ಥಿತವಾದ ಯೋಜನೆ ಎಂದು ತಿಳಿಯಬಹುದು. ಆದರೆ ನಿಖರ ಮಾಹಿತಿಗಳು ಬಂದಿಲ್ಲ, ಅವೆಲ್ಲಾ ಊಹಾ ಮಟ್ಟದಲ್ಲೇ ಇದೆ ಎನ್ನಬಹುದು. ಹೀಗಾಗಿ ತನಿಖೆ ನಡೆದಿರುವಾಗಲೇ ಬಿಜೆಪಿಯ ನಾಯಕರು ಅಪರಾಧಿಗಳನ್ನು, ದೇಶದ್ರೋಹಿಗಳನ್ನು ಗುರುತಿಸುವುದು ಹೇಗೆ ? ಯಾಕೆ ? ಹೀಗೆ ಬೊಟ್ಟು ಮಾಡಿ ಇದನ್ನೇ ತನಿಖೆ ಮಾಡಿ ಎನ್ನುವುದು ತನಿಖೆಯ ಹಾದಿ ತಪ್ಪಿಸಲಾರದೇ ? ಹೇರುವ ವಿಪರೀತ ಒತ್ತಡವೂ ಸಹ ಇಲಾಖೆಯು ಕೈಗೆ ಸಿಕ್ಕ ಯಾರನ್ನೋ ಒಂದಿಬ್ಬರನ್ನೂ ತೋರಿಸಿ ಕೈ ತೊಳೆದುಕೊಳ್ಳುವಂತೆ ಮಾಡಲಾರದೇ? ಹಾಗೂ ಹಿಂದಿನ ಕೆಲ ಪ್ರಕರಣಗಳ ಬಗ್ಗೆ ಊಹಾಪೋಹಗಳನ್ನು ಪುಂಖಾನುಪುಖಃ ಹರಿಯ ಬಿಟ್ಟು ತನಿಖೆ ಪೂರ್ಣಗೊಂಡಾಗ ವಿರೋಧ ಪಕ್ಷವಾಗಿರುವ ಬಿಜೆಪಿ ನಾಯಕರ ಹಿಂದಿನ ಅರ್ಭಟಗಳು ಬರೀ ಶೋ ಎಂಬ ಮಟ್ಟಕ್ಕೆ ಇಳಿದಿಲ್ಲವೇ?

ಹೀಗಾಗಿ ತಮ್ಮ ಕಾರ್ಯಕರ್ತರನ್ನೂ, ಸಂಘಪರಿವಾರದವರನ್ನು ಮಾತ್ರ ಗುರಿಯಿಟ್ಟು ಕೊಲ್ಲಲಾಗುತ್ತಿದೆಯೆಂದು ಆರೋಪಿಸುವ ಬಿಜೆಪಿ ನಾಯಕರ ಪ್ರಾಮಾಣಿಕತೆಯನ್ನು ಪ್ರಶ್ನಿಸಬೇಕಿದೆ. ಇವರು ಹೇಳುವಂತೆ ದಕ್ಷಿಣ ಕನ್ನಡದಲ್ಲಿ ಕೊಲೆಗೀಡಾದ ಪ್ರಶಾಂತ್ ಪೂಜಾರಿ, ಮೈಸೂರಿನ ರಾಜು, ಶಿವಾಜಿನಗರದ ರುದ್ರೇಶ್ ರವರು 'ಸ್ವಯಂ ಸೇವಕ'ರಾಗಿರುವಾಗಲೇ ಅವರು ಹಣಕಾಸು ಲೇವಾದೇವಿ ಮತ್ತು ರಿಯಲ್ ಎಸ್ಟೇಟ್‌ನ ವ್ಯವಹಾರಸ್ಥರು ಎಂಬುದುನ್ನು ಮುಖ್ಯವಾಗಿ ಗಮನಿಸಬೇಕು. ಹೇಳಿ ಕೇಳಿ ಇವು ಸ್ವಲ್ಪ ವಾಲಿದರೂ ಸಾಕು ' ತಾಮ್ರದ ದುಡ್ಡು ದುಡ್ಡು ತಾಯಿ, ಮಕ್ಕಳನ್ನು ಅಗಲಿಸಿತು' ಎಂಬಂತೆ ಎಂತಹವರನ್ನೂ ಅಪರಾಧದ ಕೃತ್ಯಗಳಿಗೆ, ಕಾನೂನು ಬಾಹೀರ ಕ್ರಮಗಳಿಗೆ ಎಳಸಿ, ಗಳೆತನದ ಹತ್ಯೆ ಮಾಡಿ ವೈರತ್ವವನ್ನು ಕಟ್ಟಿ ಕೊಡಬಲ್ಲುದು. ಇಂತಹದೇ ವ್ಯವಹಾರದಲ್ಲಿ ತೊಡಗಿರುವ ಇಂತಹ ಕೆಲವು ಸ್ವಯಂ ಸೇವಕರು, ಕ್ರಿಮಿನಲ್ ವ್ಯವಹಾರದಲ್ಲಿ ಚಿಕ್ಕಮಗಳೂರಿನಲ್ಲಿ ಪೊಲೀಸ್ ಅಧಿಕಾರಿ ಕಲ್ಲಪ್ಪ ಹಂಡಿಬಾಗ್‌ರವರನ್ನು ಆತ್ಮಹತ್ಯೆಗೆ ದೂಡಿದರು. ಬಿಜೆಪಿ–ಆರ್.ಎಸ್.ಎಸ್.ನ 'ಸಾಮಾಜಿಕ ನ್ಯಾಯದ ಪರಿಕಲ್ಪನೆಯಲ್ಲೇ ಕೆಲವು ಕ್ರಿಮಿನಲ್ ಗ್ಯಾಂಗ್‌ಗಳು 'ಸ್ವಯಂಸೇವಕರಾಗಿ' ಪರಿವರ್ತನೆಯಾಗಿರುವುದು ಕರಾವಳಿ ಜಿಲ್ಲೆಗಳಲ್ಲಿ ನಡೆವ ವಿದ್ಯಾಮಾನಗಳಲ್ಲಿ ನಿತ್ಯ ನಿಚ್ಚಳ ವಿದ್ಯಾಮಗಳು, ಹಣ ಮಾಡುವ ಹಲವು ಸ್ವರೂಪದ ದಂಧೆ ಗಾರರು ಬಿಜೆಪಿಯಲ್ಲಿ ಆಶ್ರಿತರಾಗಿ, ಆರೋಪಿಗಳಾಗಿ, ಅಪರಾಧಿಗಳೂ ಆಗಿ ಜೈಲು ಸೇರಿ ವಾಪಸ್ಸು ಬಂದಿರುವ ನಿದರ್ಶನಗಳು ಏನನ್ನು ಹೇಳುತ್ತವೆ. ಗಣಿಗಳ್ಳರು, ಭೂಗಳ್ಳರು, ಅಕ್ರಮ ವ್ಯವಹಾರಸ್ಥರು 'ದೇಶಭಕ್ತ'ರೆಂದು ಕರೆದುಕೊಳ್ಳುವ ರಾಜಕೀಯ ಪಕ್ಷದ ಅಥವಾ ಸಂಘದ ಸಖ್ಯತೆಗೆ ಬಂದು ಬಿಟ್ಟರೇ ದೇಶಭಕ್ತರೂ, ಪವಿತ್ರರೂ ಆಗಿಬಿಡುತ್ತಾರೆಯೇ ? ತಮ್ಮದೇ ಅಕ್ರಮ ವ್ಯವಹಾರಗಳಿಂದ ವಿರೋಧಿಗಳನ್ನು ಬಗಲಲ್ಲೇ ಸಾಕಿಕೊಂಡು 'ಬಲಿ'ಯಾಗುವುದು, ಅದನ್ನೇ ರಾಜಕೀಯ ಮೈಲುಗಲ್ಲು ಸಾಧಿಸಲು ಬಳಸುವುದು ನಿಜಕ್ಕೂ ಅತಂಕಕಾರಿ.

ಹಾಗೆಯೇ ಬಿಜೆಪಿ ಎತ್ತುವ ಪ್ರತಿಭಟನೆಗಳೂ ಆರೋಪಿಸುವ ಅಂಶಗಳು ಸಹ ವಿಷಯ ಬಯಲಾದಾಗ ರಾಜಕೀಯ ದುರುದ್ದೇಶ ಬಯಲಾಗುವುದು ಈಗಂತೂ ನಡೆದೇ ಇದೆ. ಮತ್ತು ಬಿಜೆಪಿ–ಆರ್‌ಎಸ್‌ಎಸ್‌ನ ಬಗ್ಗೆ ವಿಶ್ವಾಸವನ್ನೇ ಸಾರ್ವಜನಿಕರಲ್ಲಿ ಪ್ರಶ್ನಿಸುವಂತೆ ಮಾಡಿದೆ. ಐಎಎಸ್ ಅಧಿಕಾರಿ ಡಿ.ಕೆ.ರವಿ ಸಾವನ್ನೇ ಬಿಜೆಪಿ ಬಳಸಿದ ರೀತಿ, ಆರೋಪಗಳ ಮಟ್ಟ, ಕೊನೆಗೆ ವಿವರಗಳು ಹೊರಬಂದಾಗ ಬಣ್ಣ ಬಯಲಾಯಿತು. ಅವರ ಆಪೇಕ್ಷೆಯಂತೆ ಕೇಸ್ ನ್ನು ಸಿಬಿಐ ಗೆ ನೀಡಿದರೂ ಇನ್ನೂ ಏನೂ ಪೂರ್ಣ ತನಿಖೆ ಹೊರಬರಲಿಲ್ಲ. ಇದ–ಕ್ಕೆ ಮೋದಿ ಸರಕಾರವನ್ನು ಇವರೂ ಕೇಳಲು ಮರೆತು ಬಿಟ್ಟಿದ್ದಾರೆಯೇ ? ಹೋಗಲಿ – ಇತ್ತೀಚಿಗೆ ಡಿ.ವೈ.ಎಸ್.ಪಿ ಗಣಪತಿಯವರ ಪ್ರಕರಣವನ್ನು ಆಕಾಶದಾಚೆಗೆ ಇವರೇ ಒಯ್ದಿದ್ದರು ! ಈಗ ಗಣಪತಿಯವರ ಮಗ, ಪತ್ನಿ, ಮತ್ತು ಕುಟುಂಬದ ಸದಸ್ಯರು ಈಗ ನಡೆದ ತನಿಖೆಯೇ ಸಾಕು. ಬಿಜೆಪಿಯವರು ಇದರಲ್ಲಿ ಮೂಗು ತೂರಿಸುವುದು ಬೇಡ ಎಂದು ಲಿಖಿತವಾಗಿ ಹೇಳಿರುವುದು ಸಾಕಲ್ಲವೇ ?

ಈಗ ಬಿಜೆಪಿ ಮತ್ತು ಸಂಘಪರಿವಾರದ ಸಂಘಟನೆಗಳಲ್ಲಿ ಕ್ರಿಮಿನಲ್ ಶಕ್ತಿಗಳು ಹೆಚ್ಚುತ್ತಿರುವ ಪ್ರಮಾಣ ಗಾಬರಿ ಹುಟ್ಟಿಸುವಂತಿದೆ. ಬಜರಂಗದಳ, ಶ್ರೀರಾಮಸೇನೆ, ಸನಾತನಾ, 'ಗೋರಕ್ಷಕರು' ಇತ್ಯಾದಿ ಹಲವು ಹೆಸರುಗಳಲ್ಲಿರುವ 'ಸ್ವಯಂ ಸೇವಕರ' ಕೃತ್ಯಗಳು ಹೊರಬರುತ್ತಲೇ ಇವೆ. ತನ್ನದೇ ಪಕ್ಷದ ಕಾರ್ಯಕರ್ತ ಉಡುಪಿ ಕೆಂಜೂರಿನ ಅಮಾಯಕ ಯುವಕ ಪ್ರವೀಣ ಪೂಜಾರಿಯವರ ಅಮಾನೂಷ ಹತ್ಯೆ, ಬಂಟ್ವಾಳದ ಕಾರ್ಯಕರ್ತನೊಬ್ಬನ ಕೊಲೆ ಪ್ರಕರಣಗಳು ಅಲ್ಲಿರುವ ಅನಿಯಂತ್ರಿತ, ಅಪರಾಧೀ ಶಕ್ತಿಗಳ ಮೇಲುಗೈಯನ್ನೇ ತೋರಿಸುತ್ತವೆ. ಇಂತಹ ಘಟನೆಗಳಿಂದ ಬಿಜೆಪಿ ನಾಯಕರು, ಚಿಂತತರಾಗದೇ ಇರುವುದು, ಅವುಗಳನ್ನು ಅಪವ್ಯಾಖ್ಯಾನಿಸಿ ತಿರುಚಿ ಬಳಸುವುದು ಮತ್ತೂ ಆತಂಕದ ವಿಷಯ. ಇಂತಹುಗಳಿಗೆ ಹಿಂದುಳೀದ ಸಮುದಾಯಗಳಿಂದ ಬಂದವರೇ ಬಲಿಯಾಗುವುದು ಮತ್ತೊಂದು ವಿಷಾಧದ ಸಂಗತಿ.

ಮುಂದಿನ 2018ರಲ್ಲಿ ನಡೆಯಲಿರುವ ವಿಧಾನಸಭಾ ಚುನಾವಣೆಯ ಸುತ್ತಲೇ ಗಮನ ಕೇಂದ್ರೀಕರಿಸಿರುವ ಬಿಜೆಪಿ ಎಲ್ಲವನ್ನೂ ತನ್ನ ರಾಜಕೀಯ ಲಾಭಕ್ಕೆ ಕಾಂಗ್ರೆಸ್ ವಿರೋಧಕ್ಕೆ ಬಳಸುತ್ತಿದೆ. ಇಂತಹ ಪ್ರಸಂಗಗಳಲ್ಲಿ ಕಾಂಗ್ರೆಸ್ ಪಕ್ಷ ಮತ್ತು ಅದರ ರಾಜ್ಯ ಸರಕಾರ ದೃಢವಾಗಿ ಕೋಮುವಾದವನ್ನು ಎದುರಿಸದೇ ಬಿಜೆಪಿ ನಡೆಸುವ ಧಾಳಿಗಳಿಗೇ ಬೆಚ್ಚಿ ಒತ್ತಡಕ್ಕೊಳಗಾಗಿ ಕ್ರಿಮನಲ್‌ಗಳನ್ನೂ ಹುತಾತ್ಮರೆಂದು ಒಪ್ಪಿ ಪರಿಹಾರವನ್ನೂ ಘೋಷಿಸುತ್ತದೆ. ಕೇಂದ್ರ ಸರಕಾರದ ದೇಶದ್ರೋಹ, ಜನದ್ರೋಹದ ಕೃತ್ಯಗಳನ್ನು ಮುಚ್ಚಿಕೊಳ್ಳಲು ಬಿಜೆಪಿ ಇಂತಹ ಪ್ರಕರಣ ಮತ್ತು ರಾಜಕೀಯ ಸಂದರ್ಭವನ್ನು ಬಳಸಿಕೊಳ್ಳುವಲ್ಲಿ ಯಶಸ್ವಿಯಾಗುತ್ತದೆ.

ರುದ್ರೇಶ್ ಹತ್ಯೆಯ ಹಿಂದೆ ಪಿಎಫ್ಐ ನಂತಹ ಮೂಲಭೂತವಾದಿ ಸಂಘಟನೆಯೊಂದರ ಕೈವಾಡ ಇದೆಯೆಂದು ಹೇಳಲಾಗುತ್ತಿದೆ. ತನಿಖೆಯ ಬಳಿಕವೇ ಸತ್ಯ ಹೊರಬರಬೇಕಾಗಿದೆ. ಆದರೆ ಒಂದಂತೂ ನಿಜ, ಹಿಂದುತ್ವದ ಕೋಮುವಾದಿಗಳನ್ನು ಎದುರಿಸುವ ಹೆಸರಿನಲ್ಲಿ ಉಗ್ರ ಮುಸ್ಲಿಂ ಮೂಲಭೂತವಾದಿ ಶಕ್ತಿಗಳ ಕೃತ್ಯಗಳನ್ನು ಕಡಿಮೆ ಅಂದಾಜಿಸಲು ಸಾಧ್ಯವಿಲ್ಲ. ಇಬ್ಬರೂ ಒಬ್ಬರನ್ನೊಬ್ಬರು ತೋರಿಸಿ ಅದೇ ಕೃತ್ಯ ಎಸಗುವವರೂ, ಪ್ರೋತ್ಸಾಹದಾಯಿಗಳು, ಸಮಾನ ಮನಸ್ಕರೂ ಆಗಿರುವುದು ಹಲವಾರು ಘಟನೆಗಳಲ್ಲೇ ಎದ್ದು ಕಾಣುವುದು.

ಆದ್ದರಿಂದ ಸಮಾಜವನ್ನೂ ಯಾವುದೇ ಹೆಸರಿನಲ್ಲಿ ಅಪರಾಧಿಕರಣಗೊಳಿಸುವುದು, ರಾಜಕೀಯ ದುರುದ್ದೇಶಗಳಿಗೆ, ಕೋಮು ವಿಭಜನೆಯ ದೃವೀಕರಣಕ್ಕೆ ಬಳಸುವುದನ್ನೂ ಎಲ್ಲಾ ರೂಪಗಳ ಕ್ರಿಮಿನಲ್ ಕೃತ್ಯಗಳನ್ನೂ ಖಂಡ ತುಂಡವಾಗಿ ವಿರೋಧಿಸಬೇಕು.

ಅನಿರ್ದಿಷ್ಟಾವಧಿ ಮುಷ್ಕರಕ್ಕೆ ಮುಂದಾದ ಹೊರಗುತ್ತಿಗೆ ನೌಕರರು

ಕಳೆದ ಹತ್ತಾರು ವರ್ಷಗಳಿಂದ ದಿನಗೂಲಿಗಳಾಗಿ, ಹೊರಗುತ್ತಿಗೆ ನೌಕರರಾಗಿ ದುಡಿಯುತ್ತಿರುವ ಅಡುಗೆಯವರು ಮತ್ತು ಅಡುಗೆ ಸಹಾಯಕರು, ಗುತ್ತಿಗೆದಾರರ ಶೋಷಣೆಯನ್ನು ಅನುಭವಿಸುತ್ತಾ ಅತ್ಯಂತ ಕಡಿಮೆ ಸಂಬಳಕ್ಕೆ ದುಡಿಯುತ್ತಿದ್ದು, ಅವರಲ್ಲಿ ಶೇ.90 ಮಹಿಳೆಯರೇ ಆಗಿದ್ದಾರೆ. ದಲಿತರು, ಹಿಂದುಳಿದ ವರ್ಗಗಳಿಗೆ ಸೇರಿದವರು ಮತ್ತು ಅಲ್ಪಸಂಖ್ಯಾತರೇ ಹೆಚ್ಚಾಗಿ ಇರುವ ಎಲ್ಲಾ ಹೊರಗುತ್ತಿಗೆ ನೌಕರರು ಖಾಯಂಗೊಳಿಸಬೇಕೆಂಬ ಹಕ್ಕೊತ್ತಾತಯವನ್ನಿಟ್ಟು ಅಕ್ಟೋಬರ್ 20ರಂದು ಬೆಂಗಳೂರು ಚಲೋ ಮೂಲಕ ಅನಿರ್ದಿಷ್ಟಾವಧಿ ಮುಷ್ಕರಕ್ಕೆ ಮುಂದಾಗಿದ್ದಾರೆ.

ಕರ್ನಾಟಕ ರಾಜ್ಯ ಸರ್ಕಾರಿ ಹಾಸ್ಟೆಲ್ ಮತ್ತು ವಸತಿ ಶಾಲಾ ಹೊರಗುತ್ತಿಗೆ ನೌಕರರ ಸಂಘಟನೆ ನೇತೃತ್ವದಲ್ಲಿ ನಗರದ ರೈಲ್ವೇ ನಿಲ್ದಾಣದಿಂದ ಪ್ರಾರಂಭವಾದ ಪ್ರತಿಭಟನಾ ಮೆರವಣಿಗೆ ಸ್ವಾತಂತ್ರ್ಯ ಉದ್ಯಾನವನ ತಲುಪಿತು. ಸಾವಿರಾರು ಸಂಖ್ಯೆಯಲ್ಲಿ ನೌಕರರು ಧರಣಿ ಮುಷ್ಕರದಲ್ಲಿ ಭಾಗವಹಿಸಿದ್ದಾರೆ.

ಧರಣಿಯನ್ನು ಉದ್ದೇಶಿಸಿ ರಾಜ್ಯ ಅಧ್ಯಕ್ಷರಾದ ನಿತ್ಯಾನಂದಸ್ವಾಮಿರವರು ಮಾತನಾಡಿ "ಹೊರಗುತ್ತಿಗೆ ಪದ್ಧತಿಯು ನೌಕರರ ಶೋಷಣೆಗೆ ಆಸ್ಪದ ಕೊಡುತ್ತದೆ. ಲೇಬರ್ ಗುತ್ತಿಗೆದಾರರು ನೌಕರರಿಗೆ ಸರ್ಕಾರ ನೀಡುವ ವೇತನವನ್ನು ಪೂರ್ಣ ಪ್ರಮಾಣದಲ್ಲಿ ವಿತರಣೆ ಮಾಡುವುದಿಲ್ಲ. ಹೊರಗುತ್ತಿಗೆ ಪದ್ಧತಿಯು 'ಸಮಾನ ಕೆಲಸಕ್ಕೆ ಸಮಾನ ವೇತನ' ಎಂಬ ಆಶಯಕ್ಕೆ ವಿರುದ್ಧವಾಗಿದೆ. ನೌಕರರು ಹೆಚ್ಚು ಜವಾಬ್ದಾರಿಯಿಂದ ಕೆಲಸ ಮಾಡುವಂತಾಗಲೂ ಅವರ ಸೇವೆಯನ್ನೂ ಆದಷ್ಟು ಬೇಗ ಕಾಯಂ ಮಾಡಿ, ಕಣ್ಣೀರು ಹಾಕುತ್ತಿರುವ ಬಡಪಾಯಿ ನೌಕರರ ಕೊರಗನ್ನು ನೀಗಿಸಬೇಕು" ಎಂದು ತಿಳಿಸಿದರು.

ಸರ್ಕಾರದ ಪರವಾಗಿ ಸಮಾಜ ಕಲ್ಯಾಣ ಇಲಾಖೆಯಿಂದ ಇಬ್ಬರು ಅಧಿಕಾರಿ ಬಂದು ಮನವಿ ಪತ್ರವನ್ನು ಸ್ವೀಕರಿಸಿ ಸಚಿವರ ಗಮನಕ್ಕೆ ತರಲಾಗುವುದು ಎಂದು ತಿಳಿಸಿದರು. ಹೋರಾಟವು 2ನೇ ದಿನಕ್ಕೂ ಮುಂದುವರೆದಿದ್ದು, ಬೇಡಿಕೆಗಳು ಈಡೇರುವವರೆಗೂ ಧರಣಿಯನ್ನು ಹಿಂಪಡೆಯುವುದಿಲ್ಲ ಎಂದು ಪ್ರತಿಭಟನಾಕಾರರು ಆಗ್ರಹಿಸಿದ್ದಾರೆ.

ನೌಕರರನ್ನು ಉದ್ದೇಶಿಸಿ ಪ್ರಧಾನ ಕಾರ್ಯದರ್ಶಿ ಭೀಮಶೆಟ್ಟಿ ಯಂಪಳ್ಳಿ, ಉಪಾಧ್ಯಕ್ಷರಾದ ಕೆ.ಹನುಮೇಗೌಡ, ಖಜಾಂಚಿ ಚಂದ್ರಪ್ಪ ಹೊಸ್ಕೆರಾ, ಮತ್ತು ಆದಿವಾಸಿ ಸಂಘಟನೆ ಮುಖಂಡರಾದ ಎಸ್.ವೈ.ಗುರುಶಾಂತ್, ರಾಜ್ಯ ರೈತ ಸಂಘ ಮುಖಂಡರಾದ ವೀರಸಂಗಯ್ಯ, ಎಸ್.ಎಫ್.ಐ. ರಾಜ್ಯ ಕಾರ್ಯದರ್ಶಿ ಗುರುರಾಜ ದೇಸಾಯಿ, ಮತ್ತಿತರ ಮುಖಂಡರು ಮಾತನಾಡಿದರು.





ಭದ್ರಾವತಿ ಉಕ್ಕಿನ ಕಾರ್ಖಾನೆ ಮತ್ತು ಮೈಸೂರು ಪೇಪರ್ ಮಿಲ್ ಖಾಸಗೀಕರಣ ವಿರೋಧಿಸಿ

– ಕೆ. ಶಂಕರ್

ಭದ್ರಾವತಿ ಉಕ್ಕಿನ ಕಾರ್ಖಾನೆಯು 1918ರಲ್ಲಿ ಭಾರತರತ್ನ ಸರ್.ಎಂ.ವಿಶ್ವೇಶ್ವರಯ್ಯನವರು ಈ ಕಾರ್ಖಾನೆಗೆ ಶಂಕುಸ್ಥಾಪನೆ ಮಾಡಿದರು. ಈ ಕಾರ್ಖಾನೆಯು ಸುಮಾರು 450 ಎಕರೆ ಪ್ರದೇಶದಲ್ಲಿ ಪೈಪ್ ತಯಾರಿಕಾ ಘಟಕ, ಸ್ಟೀಲ್ ಪೌಂಡ್ರಿ, ಜನರಲ್ ಪೌಂಡ್ರಿ, ಫೆರೋ ಸಿಲಿಕಾನ್ ಪ್ಲಾಂಟ್, ಸಿಮೆಂಟ್ ತಯಾರಿಕೆ, ಸ್ಟೀಲ್ ಮತ್ತು ಉಕ್ಕನ್ನು ಉತ್ಪಾದನೆ ಮಾಡುವ ಹಾಗೂ ಸಣ್ಣ–ಸಣ್ಣ ಇಲಾಖೆಗಳನ್ನು ಹೊಂದಿ 1923ರಲ್ಲಿ ಉತ್ಪಾದನೆಯನ್ನು ಪ್ರಾರಂಭಿಸಿತು.

ಮೊದಲು ಈ ಕಾರ್ಖಾನೆಯ ಹೆಸರು ಮೈಸೂರು ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ ಎಂದು ಹೆಸರಿತ್ತು, ಏಕೆಂದರೆ ಆವತ್ತಿನ ಮೈಸೂರು ರಾಜ್ಯವಾಗಿದ್ದರಿಂದ ತದನಂತರ ಕರ್ನಾಟಕ ರಾಜ್ಯವಾದಾಗ ಈ ಕಾರ್ಖಾನೆಯ ಹೆಸರನ್ನು ವಿಶ್ವೇಶ್ವರಯ್ಯನವರು ಸ್ಥಾಪಿಸಿದ್ದರಿಂದ, ವಿಶ್ವೇಶ್ವರಯ್ಯ ಐರನ್ ಅಂಡ್ ಸ್ಟೀಲ್ ಲಿಮಿಟೆಡ್ (VISL) ಎಂದು ನಾಮಕರಣವಾಯಿತು. ಆವಾಗ ಇದ್ದಂತಹ ಕಾರ್ಮಿಕರ ಸಂಖ್ಯೆ ಸುಮಾರು 16,000 ಹಾಗೂ 6,000 ಗುತ್ತಿಗೆ ಕಾರ್ಮಿಕರು ಕೆಲಸ ನಿರ್ವಹಿಸುತ್ತಿದ್ದರು. ಈ ಉಕ್ಕಿನ ಕಾರ್ಖಾನೆಯು ಭಾರತ ದೇಶದ ಹಾಗೂ ಏಷ್ಯಾ ಖಂಡದಲ್ಲೇ ಮೊದಲ ಸ್ಟೀಲ್ ಉದ್ಯಮವಾಗಿತ್ತು.

ಇಂತಹ ಉದ್ಯಮವು 80ರ ದಶಕದಿಂದಲೂ ಲಾಭವನ್ನು ಮಾಡದೆ ಇದ್ದಂತಹ ಸಂದರ್ಭದಲ್ಲಿ 1983ರಿಂದಲೂ ಈ ಕಾರ್ಖಾನೆಯನ್ನು ಉತ್ತಮವಾದ ರೀತಿಯಲ್ಲಿ ನಡೆಸಲು ಬಂಡವಾಳವನ್ನು ತೊಡಗಿಸಬೇಕೆಂದು ಉಕ್ಕು ಕಾರ್ಮಿಕರ ಒಕ್ಕೂಟ (SWFI) ಸಿಐಟಿಯು ನೇತೃತ್ವದಲ್ಲಿ ಪ್ರತಿಭಟನೆ, ಸಭೆ–ಧರಣಿ ನಡೆಸುತ್ತಾ ರಾಜ್ಯ ಸರಕಾರವನ್ನು ಒತ್ತಾಯಿಸುತ್ತಾ ಬಂದಿದೆ. ಆಗ ಇದ್ದ ಕೈಗಾರಿಕೆಯ ಮಂತ್ರಿ ಜೆ.ಎಚ್.ಪಟೇಲ್‌ರವರು 'ಈ ಕಾರ್ಖಾನೆಯನ್ನು ನಾವು ನಡೆಸಲು ಸಾಧ್ಯವೇ ಇಲ್ಲ, ಈ ಕೈಗಾರಿಕೆಯನ್ನು ಭಾರತೀಯ ಉಕ್ಕು ಪ್ರಾಧಿಕಾರಕ್ಕೆ (SAIL) ವಹಿಸುತ್ತೇವೆ' ಎಂದು ಹೇಳಿದರು. ಆಗಿನ ಪ್ರಧಾನಮಂತ್ರಿಯವರಾದ ದಿವಂಗತ ರಾಜೀವಗಾಂಧಿಯವರು ಈ ಕಾರ್ಖಾನೆಯನ್ನು ಭಾರತೀಯ ಉಕ್ಕು ಪ್ರಾಧಿಕಾರದ ಅಂಗ ಸಂಸ್ಥೆಯಾಗಿ ವಹಿಸಿಕೊಂಡರು. ಅನಂತರ ಸರಕಾರದ ಹೊಸ ಆರ್ಥಿಕ ನೀತಿಯ ಪರಿಣಾಮ(LPG) ಅನೇಕ ಬಿಕ್ಕಟ್ಟುಗಳನ್ನು ಕಾರ್ಖಾನೆಯು ಎದುರಿಸುವಂತಾಯಿತು.

ಈ ಕಾರ್ಖಾನೆಗೆ ಕೆಮ್ಮಣ್ಣುಗುಂಡಿ ಮೈನ್ಸ್ (ಕಬ್ಬಿಣದ ಅದಿರಿನ ಗಣಿ) ನವೀಕರಣಗೊಳ್ಳದೆ ಕೈತಪ್ಪಿ ಹೋಯಿತು. ಇಂತಹ ಸಂದರ್ಭದಲ್ಲಿ ಯಾವುದೇ ಹೊಸ ನೇಮಕಾತಿ ಮಾಡದೆ ಇದ್ದ ಕಾರ್ಮಿಕರನ್ನು ಸ್ವಯಂ ನಿವೃತ್ತಿಯ ಮುಖಾಂತರ ಹೊರ ಹಾಕಲಾಯಿತು.

ಈಗಿರುವ ಖಾಯಂ ಕಾರ್ಮಿಕರ ಸಂಖ್ಯೆ 480 ಹಾಗೂ ಗುತ್ತಿಗೆ ಕಾರ್ಮಿಕರು 1800 ಇದ್ದು ಕುಟುಂತ್ತಾ ನಡೆಯುತ್ತಿದೆ. ಈ ಕಾರ್ಖಾನೆಯನ್ನು ಉತ್ತಮ ರೀತಿಯಲ್ಲಿ ನಡೆಸಬೇಕಾದರೆ ರಾಜ್ಯ ಸರಕಾರವು ಯಾವುದೆ ಅಡೆತಡೆ ಮಾಡದೆ ಕಬ್ಬಿಣದ ಅದಿರಿನ ಗಣಿಯನ್ನು ನೀಡಬೇಕು. ಕೇಂದ್ರದ ಉಕ್ಕು ಮಂತ್ರಿಗಳಾದ ಶ್ರೀ ನರೇಂದ್ರ ಸಿಂಘ ತೊಮರ್ ರವರು ತಾರೀಕು 22–8–2015ರಂದು ಕಾರ್ಖಾನೆಗೆ ಬೇಟಿ ನೀಡಿ ಪರಿಶೀಲಿಸಿ ಈ ಹಳೆಯದಾದ ಕಾರ್ಖಾನೆಗೆ ಅಭಿವೃದ್ಧಿ ಪಡಿಸಲು ರಾಜ್ಯ ಸರಕಾರವು ಗಣಿ ನೀಡುವುದಾದರೆ ಕೇಂದ್ರ ಸರಕಾರವು 1000 ಕೋಟಿ ರೂ. ಬಂಡವಾಳ ತೊಡಗಿಸುವುದಾಗಿ ಹೇಳಿ ಒಂದು ವರ್ಷ ಕಳೆದರೂ 1 ರೂಪಾಯಿ ಬಂಡವಾಳ ಬಂದಿಲ್ಲ.

2013ರಲ್ಲಿ ಇದ್ದ ಕಾಂಗ್ರೆಸ್ ಸರಕಾರ ಈ ಕಾರ್ಖಾನೆಯನ್ನು ಖಾಸಗಿ ಸಹಬಾಗಿತ್ವದಲ್ಲಿ ನಡೆಸಲು ಟೆಂಡರ್ ಕರೆಯಲಾಗಿತ್ತು. ಆದರೆ ಕಾರ್ಮಿಕರು, ಅಧಿಕಾರಿಗಳು, ಗುತ್ತಿಗೆ ಕಾರ್ಮಿಕರು, ಭದ್ರಾವತಿಯ ಜನತೆ ಪಕ್ಷಬೇಧ ಮರೆತು 72 ದಿನಗಳ ಧರಣಿ, ಪ್ರತಿಭಟನೆ, ಮೆರವಣಿಗೆ ನಂತರ ಈ ಪ್ರಕ್ರಿಯೆಯನ್ನು ಸರಕಾರ ಕೈಬಿಡಲಾಯಿತು.

ಆದರೆ ಈಗಿರುವ (NDA) ಬಿಜೆಪಿ ಸರಕಾರ 1,000 ಕೋಟಿ ಬಂಡವಾಳ ತೊಡಗಿಸುವುದರ ಬದಲಾಗಿ ಈ ಕಾರ್ಖಾನೆಯನ್ನು ಖಾಸಗಿಯವರಿಗೆ ಕೊಡಲು ಮುಂದಾಗಿರುತ್ತದೆ. ಇದನ್ನು ವಿರೋಧಿಸಿ ರಾಜ್ಯಸಭಾ ಸದಸ್ಯ ಹಾಗೂ ಸಿಐಟಿಯು ಅಖಿಲ ಭಾರತ ಪ್ರಧಾನ ಕಾರ್ಯದರ್ಶಿಯವರಾದ ಕಾ|. ತಪನ್ ಸೇನ್‌ರವರು ರಾಜ್ಯಸಭೆಯಲ್ಲಿ ಪ್ರಸ್ತಾಪಿಸಿ, ಖಾಸಗೀಕರಣ ಮಾಡದಂತೆ ಒತ್ತಾಯಿಸಿದ ಪರಿಣಾಮವಾಗಿ ಈ ಪ್ರಕ್ರಿಯೆಯನ್ನು ಕೈಬಿಡಲಾಗಿದೆ ಎಂದು ತಿಳಿದು ಬಂದಿದೆ.

ಮೈಸೂರು ಪೇಪರ್ ಮಿಲ್ (M.P.M) : ಈ ಕಾರ್ಖಾನೆಯು 1936ರಲ್ಲಿ ಪ್ರಾರಂಭವಾಯಿತು. ದೇಶದಲ್ಲೇ ಉತ್ತಮವಾದ ಪೇಪರ್ ಉತ್ಪಾದನೆ ಮಾಡುತ್ತಿದ್ದ ಈ ಕಾರ್ಖಾನೆಯು ಸಾವಿರಾರು ಕಾರ್ಮಿಕರಿಗೆ ಉದ್ಯೋಗ ನೀಡಿತ್ತು. ಆಡಳಿತದಲ್ಲಿನ ಭಷ್ಟಾಚಾರದಿಂದ ಪ್ರತಿ ತಿಂಗಳು ನಷ್ಟ ಅನುಭವಿಸುತ್ತಾ ಇದ್ದು ಸುಮಾರು 500 ಕೋಟಿ ರೂಪಾಯಿ ನಷ್ಟದಲ್ಲಿದ್ದು ಇದನ್ನು ನೆಪಮಾಡಿದ ಸರಕಾರ ಕಳೆದ ನವಂಬರ್ 15ರಿಂದ ಕಾರ್ಖಾನೆಯನ್ನು ಸ್ಥಗಿತಗೊಳಿಸಿ ಸುಮಾರು 1500 ಜನ ಖಾಯಂ ನೌಕರರು ಹಾಗೂ ಗುತ್ತಿಗೆ ಕಾರ್ಮಿಕರನ್ನು ಹೊರ ಹಾಕಿದ್ದಾರೆ. ಇದನ್ನು ವಿರೋಧಿಸಿ ಪ್ರತಿಭಟನೆ, ಧರಣಿ, ಮೆರವಣಿಗೆ "ಭದ್ರಾವತಿ ಬಂದ್" ಮಾಡಿ ಮುಖ್ಯಮಂತ್ರಿ ಜತೆ ಅನೇಕ ಸುತ್ತಿನ ಮಾತುಕತೆ ನಡೆಸಿದರೂ ಯಾವುದೇ ಪ್ರಯೋಜನವಾಗಿಲ್ಲ.

ಸರಕಾರದ ನಿಲುವು ಖಾಸಗೀಕರಣ ಬಿಟ್ಟು ಬೇರೆ ದಾರಿ ಇಲ್ಲ. ಇದಕ್ಕೆ ಬೇಕಾಗಿರುವ 500 ಕೋಟಿ ಬಂಡವಾಳ ತೊಡಗಿಸಲು ನಮ್ಮಿಂದ ಸಾಧ್ಯವಿಲ್ಲ ಎನ್ನುತ್ತಿದ್ದಾರೆ. ಇವತ್ತಿಗೂ ಕೂಡಾ ಕಾರ್ಮಿಕರು ಗೇಟ್ ಮುಂಭಾಗದಲ್ಲಿ ಧರಣಿ ನಡೆಸುತ್ತಿದ್ದಾರೆ. ಸಿಐಟಿಯು ಜಿಲ್ಲಾ ಸಮಿತಿಯಿಂದ ಕಾರ್ಖಾನೆ ಮುಂಭಾಗದಲ್ಲಿ ಧರಣಿಯಲ್ಲಿ ಭಾಗವಹಿಸಿರುವುದು ಹಾಗೂ ಪ್ರತಿಭಟನೆ, ಮೆರವಣಿಗೆ ನಡೆಸಿ ಸರಕಾರ–ಕ್ಕೆ ಮನವಿ ಸಲ್ಲಿಸಲಾಗಿದೆ. ಪತ್ರಿಕಾಗೋಷ್ಟಿ ನಡೆಸಿ ಸರಕಾರದ ನೀತಿಯನ್ನು ಖಂಡಿಸಲಾಗಿದೆ.

ಆದರೆ ಸರಕಾರದ ನಿಲುವು ಬದಲಾವಣೆ ಈವರೆಗೆ ಆಗಲಿಲ್ಲ. ಬಹಳ ಮುಖ್ಯವಾದ ಸಾರ್ವಜನಿಕ ಉದ್ಯಮವನ್ನು ಉಳಿಸಲು ಸರಕಾರದ ಮೇಲೆ ಒತ್ತಡ ಹಾಕಬೇಕಾದ ಚಳುವಳಿ ರಾಜ್ಯಮಟ್ಟದಲ್ಲಿ ರೂಪುಗೊಳ್ಳಬೇಕಾಗಿದೆ. ■

"ಅರಿವಿನ ಬೆಳಕು ನೀಡಿದ್ದು ಬಿಪಿಎಲ್ ಹೋರಾಟ"

ಬಿಪಿಎಲ್ ಕಾರ್ಮಿಕ ಸಂಗಾತಿಗಳ ಪುನರ್ ಸಂಗಮ ಸಭೆ ಅಂಗವಾಗಿ ಅಕ್ಟೋಬರ್ 16ರಂದು ಬೆಂಗಳೂರಿನ ಸುಬ್ರಮಣ್ಯನಗರದ ಬಿಬಿಎಂಪಿ ಸಮುದಾಯ ಭವನದಲ್ಲಿ ಕಾರ್ಮಿಕರ ಸಭೆಯನ್ನು ಏರ್ಪಡಿಸಿದ್ದರು. ಜ್ಯೋತಿ ಬೆಳಗುವುದರ ಮೂಲಕ ಕಾರ್ಯಕ್ರಮ ಉದ್ಘಾಟನೆಗೊಂಡಿತು.



ಬಿಪಿಎಲ್‌ನ ಸುಧೀರ್ಘ 18 ವರ್ಷಗಳ ಹೋರಾಟದ ಭಾಗವಾಗಿ ಸಂಘಟನಾತ್ಮಕವಾಗಿ, ಕಾನೂನಾತ್ಮಕವಾಗಿ ಎಲ್ಲಾ ರೀತಿಯ ಹೋರಾಟಗಳು ನಡೆದಿವೆ. ಮಾಲೀಕರ ಕುತಂತ್ರಗಳಿಂದ ಜೈಲುವಾಸ ಅನುಭವಿಸಿ ಬಿಡುಗಡೆಗೊಂಡ ಕಾರ್ಮಿಕರಿಗೆ ಸನ್ಮಾನ ಕಾರ್ಯಕ್ರಮದ ಅಂಗವಾಗಿ ಪುನರ್ ಸಂಗಮ ಸಭೆ ಏರ್ಪಡಿಸಲಾಗಿತ್ತು.

ಸಿಐಟಿಯು ರಾಜ್ಯ ಉಪಾಧ್ಯಕ್ಷರಾದ ಕಾಂ॥ವಿ.ಜೆ.ಕೆ.ನಾಯರ್‌ರವರು ಕರ್ನಾಟಕದಲ್ಲಿ ಬಿಪಿಎಲ್ ಕಂಪನಿಯ ಮತ್ತು ಕಾರ್ಮಿಕರ ಹೋರಾಟದ ಬಗ್ಗೆ ಮಾತನಾಡಿ "ದೀಪದ ಬೆಳಗು ಆರಿ ಹೋಗಬಹುದು. ಆದರೆ ಅರಿವಿನ ಬೆಳಕು ಧೀರ್ಘವಾಗಿ ಉಳಿಯುತ್ತದೆ. ಕರ್ನಾಟಕ ಕಾರ್ಮಿಕ ಹೋರಾಟದ ಇತಿಹಾಸದಲ್ಲಿ ಬಿಪಿಎಲ್ ಹೋರಾಟ ಚಾರಿತ್ರಿಕವಾದ ಹೋರಾಟವಾಗಿದೆ." ಎಂದರು. ಕಾರ್ಮಿಕರನ್ನು ಸಂಘಟಿಸಲು ದೀರ್ಘ ಪ್ರಯತ್ನಗಳು ನಡೆದಿದ್ದವು. ಹೆಣ್ಣು ಮಕ್ಕಳು ಹೆಚ್ಚಾಗಿ ಕೆಲಸ ಮಾಡುವ ಬಿಪಿಎಲ್‌ನಲ್ಲಿ ಕಾರ್ಮಿಕರು ಹಲವು ಮೂಲಭೂತ ಸೌಲಭ್ಯಗಳಿಂದ ವಂಚಿತವಾಗಿದ್ದರು. ಬಿಪಿಎಲ್‌ನಲ್ಲಿ ಶೋಷಣೆಗಳು ಹೆಚ್ಚಾಗುತ್ತಿದ್ದಂತೆ 1998ರ ನಂತರದಲ್ಲಿ ಹೋರಾಟಗಳು ರೂಪುಗೊಂಡವು. ದೇಶದ ದಾರಿಯನ್ನು ಬದಲಾಯಿಸಲು, ಸಮಾಜವಾದಕ್ಕೆ ಬದಲಾಯಿಸಲು ನಾವು ಹೋರಾಟ ಮಾಡಬೇಕಿದೆ. ಕಾರ್ಮಿಕರಿಗೆ ಶಿಕ್ಷಣ ನೀಡಬೇಕು ಎಂದು ಕರೆ ನೀಡಿದರು.

ಉದ್ಘಾಟನಾ ಭಾಷಣ ಮಾಡಿದ ಹಿರಿಯ ಸಾಹಿತಿ, ಡಾ. ಜಿ.ರಾಮಕೃಷ್ಣರವರು "ಜೈಲಿಗೆ ಹೋಗುವವರು ಅಧಿಕಾರದಲ್ಲಿ, ಅಧಿಕಾರದಲ್ಲಿ ಇರಬೇಕಾದವರು ಜೈಲಲ್ಲಿ ಇರುವ ಪರಿಸ್ಥಿತಿ ಎದುರಾಗಿದೆ. ದರ್ಪ ಹೆಚ್ಚಾಗುತ್ತಿದೆ. ನೆನ್ನೆ ಸಿಪಿಐ(ಎಂ) ಪಕ್ಷದ ಕಛೇರಿ ಮೇಲೆ ದಾಳಿಗೆ ಪ್ರಯತ್ನ ನಡೆದಿದೆ. ಹೋರಾಟಗಳಲ್ಲಿ ಐಕ್ಯತೆಯನ್ನು ಸಾಧಿಸಬೇಕು, ಬೇಧಗಳನ್ನು ದೂರ ಇಟ್ಟು ಚಳುವಳಿಗಳನ್ನು ಸಂಘಟಿಸಬೇಕಿದೆ" ಎಂದರು.

ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಕಾ. ಮೀನಾಕ್ಷಿ ಸುಂದರಂ ರವರು ಮಾತನಾಡಿ "ಬಿಪಿಎಲ್‌ನ ಸುಧೀರ್ಘ ಹೋರಾಟ ಉತ್ತುಂಗಕ್ಕೆ ಹೋದಾಗ ನಾವು ಇನ್ನೂ ಯುವಕರಾಗಿದ್ದೆವು. ಬಿಪಿಎಲ್ ಹೋರಾಟ ನಂತರದಲ್ಲಿ ಸಿಐಟಿಯು ಸಂಘಟನೆಯನ್ನೆ ಇಲ್ಲವಾಗಿಸಲು ಸತತ 10 ವರ್ಷಗಳ ಕಾಲ ಕಾರ್ಮಿಕರ ಮಧ್ಯೆ ಸಾಕಷ್ಟು ಅಪಪ್ರಚಾರಗಳನ್ನು ಮಾಡಲಾಗಿದೆ. ಆದರೆ ಇಂದು ಕಾರ್ಮಿಕರ ಮದ್ಯೆ ಬಲಿಷ್ಟ ಸಂಘಟನೆಯಾಗಿ ಸಿಐಟಿಯು ಎಲ್ಲೆಡೆ ತನ್ನ ಬಾವುಟವನ್ನು ಹಾರಿಸುತ್ತಿದೆ. ಇತರೆ ಕಾರ್ಮಿಕರ ಮದ್ಯೆ ಚಳುವಳಿಯನ್ನು ವಿಸ್ತರಿಸಲು ಬಿಪಿಎಲ್ ಕಾರ್ಮಿಕರ ಹೋರಾಟದ ಅನುಭವ ಸಾಕಷ್ಟು ಸಹಾಯ ಮಾಡಿದೆ. ಬಿಪಿಎಲ್ ಹೋರಾಟ ಬಂಡವಾಳ ಮತ್ತು ದುಡಿಮೆಯ ಮಧ್ಯೆ ನೇರ ಹೋರಾಟ. ಕಾನೂನಾತ್ಮಕವಾಗಿ, ರಾಜಕೀಯವಾಗಿ ಬದಲಾವಣೆ ತಂದ ಹೋರಾಟವದು. ಇತಿಹಾಸದಲ್ಲಿ ಉಳಿಯುವಂತಹ ಹೋರಾಟ. ನಾವು ಸಹ ವಿಮರ್ಶೆಗಳನ್ನು ಮಾಡಿಕೊಳ್ಳಲು ಸಾಧ್ಯವಾಗಿದೆ." ಎಂದು ಬಿಪಿಎಲ್ ಹೋರಾಟದ ಮಹತ್ವವನ್ನು ವಿವರಿಸಿದರು.

ಬಿಪಿಎಲ್ ಹೋರಾಟದ ಪ್ರಮುಖ ನಾಯಕರಾಗಿದ್ದ ಹಿರಿಯ ಮುಖಂಡ ಕಾ. ಆರ್.ಶ್ರೀನಿವಾಸ್‌ರವರು ಮಾತನಾಡಿ "ಬಿಪಿಎಲ್‌ನ 8 ಸಾವಿರ ಜನ ನಮ್ಮ ಹೋರಾಟದ ಭಾಗವಾಗಿದ್ದರು. ಸೈದ್ಧಾಂತಿಕವಾಗಿ ನಮಗೆ ಗೆಲುವಾಗಿದೆ. ಎಲ್ಲೂ ರಾಜಿ ಮಾಡಿಕೊಳ್ಳಲಿಲ್ಲ. ಸಿಐಟಿಯು ಸಂಘಟನೆ ಕಾರ್ಮಿಕರಿಗಾಗಿ ತಮ್ಮ ಕರ್ತವ್ಯವನ್ನು ನಿರ್ವಹಿಸಿದೆ." ಎಂದರು

ಕಾರ್ಮಿಕ ಮುಖಂಡರಾದ ಟಿ.ಕೆ.ಎಸ್.ಕುಟ್ಟಿರವರು ಮಾತನಾಡಿ "1998ರಲ್ಲಿ ಹೋರಾಟ ಪ್ರಾರಂಭವಾದಾಗ ಯೂನಿಯನ್ ಇನ್ನು ರಿಜಿಸ್ಟರ್ ಆಗಿರಲಿಲ್ಲ. ಒಮ್ಮೆ ಸಭೆ ಸೇರಿದಾಗ ಸುಮಾರು 2,300 ಜನ ಸೇರಿದ್ದರು, ರಿಜಿಸ್ಟೇಷನ್ ಪ್ರಾರಂಭ ಘಟ್ಟದಲ್ಲಿ ಆಗಿನ ಸಂದರ್ಭದಲ್ಲೇ ವಿರೋಧಗಳು ಎದುರಾದವು. ಕಾನೂನಾತ್ಮಕವಾಗಿಯೂ ಹೋರಾಟ ನಡೆಸಲಾಯಿತು. ಕಾಮಿರ್ಕರ ಮುಖಂಡರ ವಿರುದ್ಧ ಸಂಚು ರೂಪಿಸಲಾಯಿತು. ಸರ್ಕಾರವೂ ಮಾಲಿಕರ ಬೆಂಬಲಕ್ಕೆ ಇತ್ತು. ಮಾಲೀಕರ ಪರವಾದವರು ಕೇಂದ್ರದಲ್ಲಿಯೂ ಅತ್ಯಂತ ಉನ್ನತ ಸ್ಥಾನದಲ್ಲಿಯೂ ಇದ್ದರು. ನಮ್ಮ ಕಾನೂನಾತ್ಮಕ ಹೋರಾಟದ ಮೂಲಕ ಸುಮಾರು 16 ಕಾನೂನುಗಳನ್ನು ಬದಲಿಸಲು ಸಾಧ್ಯವಾಗಿದೆ." ಎಂದು ತಿಳಿಸಿದರು.

ಮುಖಂಡರಾದ ಕಾ. ಧರಣೇಶ್ ಮಾತನಾಡಿ "ಸತತ 18 ವರ್ಷದ ಹೋರಾಟ ಇದು. 49 ಜನರಲ್ಲಿ 44 ಜನ ಸತತ ಹೋರಾಟ ಎದುರಿಸಿದೆವು. ಜೈಲಿನಿಂದ ಬಿಡುಗಡೆಗಾಗಿ ಸಾಕಷ್ಟು ಪ್ರಯತ್ನಗಳನ್ನು ಮಾಡಲಾಯಿತು. ನಮ್ಮ ಬಿಡುಗಡೆಗಾಗಿ ಕಾರ್ಮಿಕ ಸಂಘಟನೆಗಳು, ಕಾರ್ಮಿಕರು, ಸಾಹಿತಿಗಳು ಪ್ರಯತ್ನಗಳನ್ನು ಮಾಡಿದ್ದಾರೆ. ಲಕ್ಷಾಂತರ ರೂಪಾಯಿಗಳು ಹಣ ಖರ್ಚು ಆಗಿದೆ. ಕಾರ್ಮಿಕರು ತಮ್ಮ ಒಂದು ತಿಂಗಳ ಸಂಬಳಗಳನ್ನು ನೀಡಿದ್ದಾರೆ. ಈಗಲೂ ಬಿಪಿಎಲ್ ಕಾರ್ಮಿಕ ಹೋರಾಟಗಾರರು ಎಂದು ಹೇಳಿಕೊಳ್ಳಲು ಯಾವುದೇ ಹಿಂಜರಿಕೆ ಇಲ್ಲ ಎಂದು ತಿಳಿಸಿದರು.

ಕಾ. ರವಿನಂದರವರು ಮಾತನಾಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾರ್ಮಿಕ ಮುಖಂಡರು ಹಾಗೂ ವಕೀಲರಾದ ಕಾ. ಅನಂತರಾಮ್‌ರವರು ವಹಿಸಿದ್ದರು. ಅರುಣ್‌ಕುಮಾರ್, ಎಡ್ವಿನ್, ಗಿರೀಶ್, ರಮೇಶ್ ಕುಲಕರ್ಣಿ, ಉದಯ್ ರಾವ್, ಸತೀಶ್, ನಾಗರಾಜ್, ಎನ್.ಆರ್.ಪರಮೇಶ್ವರಯ್ಯ, ರಾಜು, ಬಾಬು, ಶೇಖರ್ ಬಡಿಗೇರ್ ಇನ್ನೂ ಹಲವು ಕಾರ್ಮಿಕರಿಗೆ ಅಭಿನಂದನೆಗಳನ್ನು ಸಲ್ಲಿಸಲಾಯಿತು.

ನೂರಾರು ಸಂಖ್ಯೆಯಲ್ಲಿ ಸೇರಿದ್ದ ಕಾರ್ಮಿಕರ ಮಧ್ಯೆ ಸಂಗಾತಿಗಳಿಗೆ ಸನ್ಮಾನವನ್ನು ಏರ್ಪಡಿಲಾಗಿತ್ತು. ಕಾರ್ಯಕ್ರಮದ ಸ್ವಾಗತವನ್ನು ಕಾ. ಸರೋಜ ಮತ್ತು ನಿರೂಪಣೆಯನ್ನು ಕಾ. ಶೇಖರ್ ಬಡಿಗೇರ್ ನೆರವೇರಿಸಿದರು.

ಕಾರ್ಯಕ್ರಮದಲ್ಲಿ ಸಿಐಟಿಯು ರಾಜ್ಯ ಉಪಾಧ್ಯಕ್ಷರಾದ ಟಿ.ಲೀಲಾವತಿ, ಹೆಚ್.ಎನ್. ಗೋಪಾಲಗೌಡ, ರಾಜ್ಯ ಕಾರ್ಯದರ್ಶಿ ಕೆ.ಎನ್. ಉಮೇಶ್, ಬೆಂ.ಉತ್ತರ ಜಿಲ್ಲಾಧ್ಯಕ್ಷರಾದ ಪ್ರತಾಪ್ ಸಿಂಹ, ಬೆಂ.ದಕ್ಷಿಣ ಜಿಲ್ಲಾಧ್ಯಕ್ಷರಾದ ಕೆ.ಪ್ರಕಾಶ್, ಮುಖಂಡರಾದ ರುದ್ರಮೂರ್ತಿ ಮತ್ತಿತರ ಮುಖಂಡರು ಭಾಗವಹಿಸಿದ್ದರು. ■

ಟ್ರಿಪಲ್ ತಲಾಖ್ . .. ಮತ್ತು ಸಮಾನ ನಾಗರಿಕ ಸಂಹಿತೆ



ಕೆ.ಎಸ್. ವಿಮಲಾ

"ಸುಶೀಲೆಯರಾದ ಸ್ತ್ರೀಯರ ಮೇಲೆ ಯಾರು ಆರೋಪ ಹೊರಿಸುತ್ತಾರೋ ಮತ್ತು ನಾಲ್ಕು ಮಂದಿ ಸಾಕ್ಷಿದಾರರನ್ನು ಅವರು ತರುವುದಿಲ್ಲವೋ ಅವರಿಗೆ 80 ಬಾರೇಟುಗಳನ್ನು ಹೊಡೆಯಿರಿ ಮತ್ತು ಅವರ ಸಾಕ್ಷ್ಯವನ್ನು ಸ್ವೀಕರಿಸಬೇಡಿ–ಅವರೇ ಧರ್ಮಭ್ರಷ್ಟರು' ಎಂದು 24ನೆ ಸೂರಾದ 4 ನೇ ಆಯತ್ ನಲ್ಲಿ ಹೇಳಲಾಗಿದೆ. ಈ ಸೂರಾದ ಪ್ರಕಾರ ತಲಾಖ್ ಕೊಡುವ ಬಹುಪಾಲು ಗಂಡಸರು 80 ಬಾರೇಟುಗಳಿಗೆ ಅರ್ಹರಾಗಿದ್ದಾರೆ. ಆದರೆ ಒಬ್ಬನೂ ಬಾರೇಟು ತಿಂದ ದಾಖಲೆಯಿಲ್ಲ. ಕುರಾನಿನಲ್ಲಿ ಪುರುಷರು ಮತ್ತು ಸ್ತ್ರೀಯರಿಗೆ ಸಮಾನಾವಕಾಶವಿದೆ. ಪತಿಯು ಪತ್ನೀವ್ರತನಾಗಿಯೂ ಪತ್ನಿಯು ಪತಿವ್ರತೆಯಾಗಿಯೂ ಇರಬೇಕೆಂದು ಹೇಳಲಾಗಿದೆ. 2 ನೇ ಸೂರಾದ 187 ನೇ ಆಯತದಲ್ಲಿ ಹೇಳಲಾದ ಹೆಂಡತಿ ಗಂಡನಿಗೆ ಗಂಡ ಹೆಂಡತಿಗೆ ಪೋಷಾಕು ಎಂಬ ಮಾತು ಗಂಡ ಹೆಂಡತಿಯರ ಅನ್ಯೋನ್ಯ ಸಂಬಂಧವನ್ನು ಸೂಚಿಸುತ್ತದೆ, ಅಷ್ಟೆ ಅಲ್ಲದೇ ಸಮಾನತೆಯನ್ನು ಕುರಿತು ಹೇಳುತ್ತದೆ."

(ರಂಜಾನ್ ದರ್ಗಾರ ತಲಾಖು ಕೊಟ್ಟರೆ ಬಾರೇಟಿನ ಶಿಕ್ಷೆ ಪುಸ್ತಕದಿಂದ)

ನನ್ ಗಂಡ ನನ್ ಬಿಟ್ಟು ಬಹಳ ವರ್ಷ ಆಯ್ತುರೀ..ಆತ ತಲಾಕ್ ಅಂತ ನನ್ ಮುಂದೇನೂ ಹೇಳ್ಲಿಲ್ರೀ.. ..ನನಗೆ ಅದು ಗೊತ್ತೇ ಇಲ್ಲ.. ಕಷ್ಟ ಪಟ್ಟು ದುಡಿದು ಮಕ್ಕಳನ್ನು ಸಾಕಿಕೊಂಡು ಬದುಕ್ತಿದೀನ್ರೀ. ಇದು ಬೀದರ್ ನ ಮುಸ್ಲಿಂ ಮಹಿಳೆಯೊಬ್ಬಳ ಮಾತು.

ಕಳೆದ ಕೆಲವು ವರ್ಷಗಳ ಹಿಂದೆ ಒರಿಸ್ಸಾದಲ್ಲಿ ನಡೆದ ಘಟನೆ ಕುಡಿದು ಬಂದ ಗಂಡ ಕೋಪ ಮತ್ತು ಅಮಲಿನಲ್ಲಿ ಹೆಂಡತಿಗೆ ಮೂರು ಬಾರಿ ತಲಾಖ್ ಹೇಳುತ್ತಾನೆ ಅಮಲು ಇಳಿದ ಮೇಲೆ ಅರಿವಾಗುತ್ತದೆ ತಾನೇನು ತಪ್ಪು ಮಾಡಿದ್ದೇನೆಂದು ಆದರೆ ಮುಸ್ಲಿಂ ವೈಯಕ್ತಿಕ ಕಾನೂನಿನ ತಪ್ಪು ಅರ್ಥೈಸುವಿಕೆಯಿಂದಾಗಿ ಅವರಿಬ್ಬರ ವಿಚ್ಛೇದನವಾಗಿರುತ್ತದೆ.

ಈಗ ಆದುನಿಕ ಯುಗ, ಮೊಬೈಲ್ ಸಂದೇಶಗಳ ಮೂಲಕವೂ ತಲಾಕ್ ಸಂದೇಶ ರವಾನೆಯಾಗುತ್ತಿದೆ. ಷರಿಯತ್ ಅಥವಾ ಕುರಾನ್ ತನಗೆ ತಲಾಕ್ ಕೊಡುವ ಹಕ್ಕು ಕೊಟ್ಟಿದೆ ಎಂದು ಧರ್ಮ ಗ್ರಂಥಗಳ ಉಲ್ಲೇಖಗಳನ್ನು ತಪ್ಪಾಗಿ ಪಾಲಿಸುತ್ತ ಪ್ರತಿಪಾದಿಸುತ್ತ ತನಗೆ ಬೇಕಾದಂತೆಲ್ಲ ಅದನ್ನು ದುರ್ಬಳಕೆ ಮಾಡಿಕೊಳ್ಳುತ್ತಿರುವುದರ ವಿರುದ್ಧ ಹಲವು ದೂರುಗಳು ನ್ಯಾಯಾಲಯಗಳಲ್ಲಿ ಬಾಕಿ ಇವೆ. ಈಗ ಪ್ರಸ್ತುತ ಒಂದು ಅಂಥಹುದೇ ಪ್ರಕರಣ ಸುಪ್ರಿಂ ಕೋರ್ಟಿನಲ್ಲಿ ವಿಚಾರಣೆಗೆ ಬಂದಿದ್ದು ಏಕಪಕ್ಷೀಯ ತಲಾಕ್ ನ್ನು ವಿರೋಧಿಸಿ ಹಲವು ಮುಸ್ಲಿಂ ಮಹಿಳೆಯರು ಕೋರ್ಟಿಗೆ ಹೋಗುತ್ತಿರುವುದಕ್ಕೆ ನಿದರ್ಶನವಾಗಿದೆ. ಅದರ ಜೊತೆಯೇ ಬಹು ಪತ್ನಿತ್ವ ಪದ್ಧತಿಯನ್ನು ಕೂಡ ತಮ್ಮ ಅನುಕೂಲಕ್ಕೆ ತಕ್ಕಂತೆ ಪುರುಷರು ಬಳಸಿಕೊಳ್ಳುತ್ತಿರುವುದು ಮತ್ತು ಸೋಕಾಲ್ಡ್ ಧರ್ಮಪರಿಪಾಲಕರು ಅದಕ್ಕೆ ಅಂಗೀಕಾರ ನೀಡಿರುವುದೂ ಸಾಮಾನ್ಯ ವಿಚಾರವೆಂಬಂತೆ ನಡೆಯುತ್ತಿದೆ. ಈ ಕುರಿತಾದ ಪ್ರಕರಣಗಳೂ ನ್ಯಾಯಾಲಯದ ಮೆಟ್ಟಿಲೇರಿವೆ.

(ಸುಪ್ರಿಂಕೋರ್ಟ ಕೆಲವು ದಿನಗಳ ಹಿಂದೆ ಸಮಾನ ನಾಗರಿಕ ಸಂಹಿತೆಯ ಬಗ್ಗೆ ಪ್ರಸ್ತಾಪವನ್ನು ಎತ್ತಿ ಸರ್ಕಾರದ ನಿಲುವನ್ನು ಕೇಳಿದ ನೆನಪು ನಮಗಿದೆ. ಆಗಾಗ ಈ ರೀತಿಯ ಪ್ರಶ್ನೆಗಳನ್ನು ಎತ್ತುವ ಬಗ್ಗೆ ಇದೇ ಅಂಕಣದಲ್ಲಿ ಬರೆಯಲಾಗಿದೆ.) ಈಗ ಕಾನೂನು ಆಯೋಗ ಒಂದು ಪ್ರಶ್ನಾವಳಿಯನ್ನು ಬಿಟ್ಟಿದೆ. ಈ ತೆರನ ವಿಷಯಗಳ ಬಗ್ಗೆ ಚರ್ಚಿಸುವಾಗ ಕೆಲವು ಎಚ್ಚರಗಳನ್ನೂ ವಹಿಸಬೇಕು. ಇಂದಿನ ಕೇಂದ್ರ ಸರ್ಕಾರ ಸುಪ್ರಿಂ ಕೋರ್ಟ ಕೇಳಿದ ತಕ್ಷಣ ಅಫಿಡೆವಿಟ್ ಸಲ್ಲಿಸಿದ್ದರ ಹಿಂದೆ ಮಹಿಳಾ ಪರವಾದ ಧೋರಣೆಗಿಂತ ಹೆಚ್ಚು ಭಾರತೀಯ ಜನತಾ ಪಕ್ಷದ ಹಳೆಯ ಅಜೆಂಡಾವಾಗಿ ಸಮಾನ ನಾಗರಿಕ ಸಂಹಿತೆಯನ್ನು ಜಾರಿಗೆ ತರುವುದಾಗಿದೆ. ಇದರಲ್ಲಿ ಮುಸ್ಲಿಂ ಮಹಿಳೆಯರ ಹಿತಾಸಕ್ತಿಯನ್ನು ಕಾಯುವ ಯಾವ ಒಳ್ಳೆಯತನವನ್ನೂ ಕಾಣಲು ಸಾಧ್ಯವಿಲ್ಲ. ಸುಪ್ರಿಂ ಕೋರ್ಟು ಕೇಳಿದ ತಕ್ಷಣ ಕೇಂದ್ರ ಸರ್ಕಾರ ಅಫಿಡೆವಿಟ್ ಸಲ್ಲಿಸಿದೆ. ಆದರೆ, ಹಿಂದೂ ಮಹಿಳೆಯರಿಗೆ ಸಂಬಂಧಿಸಿದಂಥಹ ಹಲವು ವಿಷಯಗಳು–ದತ್ತಕ, ಸಮಾನ ಆಸ್ತಿ ಹಕ್ಕು, ಜೀವನಾಂಶದಂಥಹ ನೂರಾರು ಪ್ರಕರಣಗಳು ನ್ಯಾಯಾಲಯಗಳಲ್ಲಿ ಕೊಳೆಯುತ್ತಿವೆ. ವರದಕ್ಷಿಣೆಯಂಥಹ ಅಮಾನವೀಯ ಪದ್ಧತಿ, ನಿಷೇಧದ ಕಾನೂನಿನ ನಡುವೆಯೂ ಮಹಿಳೆಯರ ಪಾಲಿಗೆ ಮರಣ ಶಾಸನವಾಗಿ ಚಾಲ್ತಿಯಲ್ಲಿದೆ. ತನ್ನ ಮೇಲೆ ನಡೆಯುವ ದೌರ್ಜನ್ಯ, ವರದಕ್ಷಿಣೆಗಾಗಿನ ಕಿರುಕುಳಗಳ ದೂರು ದಾಖಲಿಸಿದ ಮಹಿಳೆಗೆ ಅದನ್ನು ಸಾಬೀತು ಮಾಡಲು ಸಾಧ್ಯವಾಗದ ನಿಷ್ಠುರ ಸತ್ಯವನ್ನು ವಾಸ್ತವ ಸ್ಥಿತಿಯನ್ನು ಅರ್ಥಮಾಡಿಕೊಳ್ಳದ ಸುಪ್ರಿಂಕೋರ್ಟ ಚಾಲ್ತಿಯಲ್ಲಿರುವ ಕಾನೂನಿಗೆ ಯಾವುದೇ ತಿದ್ದುಪಡಿಯನ್ನೂ ತರದೇ ಕಾನೂನಿನ ಜಾರಿಯ ಸಂದರ್ಭದಲ್ಲಿ ಕೆಲವು ನಿರ್ದಿಷ್ಟ ನಿಯಮಗಳನ್ನು ಅನುಸರಿಸುವಂತೆ ರಾಜ್ಯಗಳಿಗೆ ಸೂಚಿಸಿದೆ. ಮತ್ತು ತಕ್ಷಣವೇ ಅದು ಜಾರಿಗೂ ಬಂದಿದೆ.!! ಇದೇ ಸುಪ್ರಿಂಕೋರ್ಟ ವಿಶಾಖಾ/ ರಾಜಸ್ತಾನ ಆದೇಶದನ್ವಯ ಕೆಲಸದ ಸ್ಥಳಗಳಲ್ಲಿ ಲೈಂಗಿಕ ಕಿರುಕುಳ ತಡೆ ಸಮಿತಿಗಳನ್ನು ರಚಿಸಲು ಮೊದಲು ಆದೇಶ ಮತ್ತು ನಂತರ ಕಾನೂನು ಜಾರಿಗೊಳಿಸಿದ್ದರೂ ಅದರ ಆದೇಶ ಅಥವಾ ಕಾನೂನನ್ನು ಸರ್ಕಾರದ ಇಲಾಖೆಗಳೇ ಪಾಲಿಸುತ್ತಿಲ್ಲ. ಕೇಂದ್ರ ಸರ್ಕಾರದ ಕಣ್ಣಿಗೆ ಇದೂ ಕಾಣಬೇಕಲ್ಲವೇ? ಇಲ್ಲಿ ಯಾವುದೇ ಉತ್ಸುಕತೆಯನ್ನು ತೋರದ ಕೇಂದ್ರ ಸರ್ಕಾರ ಮುಸ್ಲಿಂ ಕಾನೂನಿನ ಸಂದರ್ಭದಲ್ಲಿ ತೋರುತ್ತಿರುವ ತರಾತುರಿ ಯಾರಿಗೂ ಅರ್ಥವಾಗಬೇಕು.

ಯಥಾ ಪ್ರಕಾರ ಮುಸ್ಲಿಂ ಪುರುಷರ ಅಧಿಪತ್ಯದಲ್ಲಿರುವ ಮುಸ್ಲಿಂ ವೈಯಕ್ತಿಕ ಕಾನೂನು ಮಂಡಳಿ ತನ್ನ ವಿರೋಧವನ್ನು ವ್ಯಕ್ತ ಪಡಿಸಿದೆ. ಸ್ವತಃ ಷರಿಯತ್, ಕುರಾನ್ ಗಳನ್ನು ತಮಗೆ ಬೇಕಾದಂತೆ ಅರ್ಥೈಸಿಕೊಂಡು ಮಹಿಳೆಯರನ್ನು ಮನುಷ್ಯರಂತೆ ನೋಡದಿರುವವರಿಗೆ ಸಹಜವಾಗಿಯೇ ಇದು ವಿರೋಧಿಸುವ ಸಂಗತಿಯೇ.

ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಏಕಪಕ್ಷೀಯ ತ್ರಿವಳಿ ತಲಾಕ್ ಮತ್ತು ಬಹುಪತ್ನಿತ್ವ ಪದ್ಧತಿಯನ್ನು ರದ್ದುಗೊಳಿಸುವಂತೆ ಕೋರುವ ರಾಷ್ಟ್ರೀಯ ಸಹಿ ಸಂಗ್ರಹ ಅಭಿಯಾನವನ್ನು ಹಮ್ಮಿಕೊಂಡಿದೆ. ದಶಕಗಳ ಕಾಲದಿಂದ ಮುಸ್ಲಿಂ ಮಹಿಳೆಯರ ಬದುಕಿನ ಹಲವು ಪ್ರಶ್ನೆಗಳನ್ನು ಎತ್ತಿ–ಕೊಂಡು ಹೋರಾಟ ನಡೆಸುತ್ತಿರುವ ಸಂಘಟನೆ ಅವಳ ಮೂಲಭೂತ ಹಕ್ಕಿನ ರಕ್ಷಣೆಯ ಪ್ರಶ್ನೆಯಾಗಿ ಇದನ್ನು ಪರಿಗಣಿಸುತ್ತದೆ. ಇದು ಪುರುಷ ಪ್ರಧಾನ ಪಾಳೆಯಗಾರೀ ಮೌಲ್ಯಗಳ ವಿರುದ್ಧ ಮಹಿಳೆಯರ ಪರವಾಗಿ, ಅವರ ನ್ಯಾಯಯುತ ಬೇಡಿಕೆಗಳ ಪರವಾಗಿಯೇ ಹೊರತೂ ಮನುವಾದಿಗಳ ಕುತಂತ್ರದ ನೆಲೆಯಲ್ಲಿ ಅಲ್ಲ.

ಪುರುಷ ಸಮಾಜ ಸ್ತ್ರೀ ವಿರೋಧೀ ಧೋರಣೆಗಳನ್ನು ಅನೂಚಾನವಾಗಿ ಪಾಲಿಸಿಕೊಂಡು ಬರುತ್ತಿರುವುದು ಕೇವಲ ಮುಸ್ಲಿಂ ಸಮುದಾಯಕ್ಕೆ ಮಾತ್ರವೇನೂ ಸೀಮಿತವಾಗಿಲ್ಲ. ಇದರ ವಿರುದ್ಧ ನಡೆಯುವ ಎಲ್ಲ ಚಟುವಟಿಕೆಗಳು ಸಮ ಸಮಾಜದ ಕಲ್ಪನೆಯ ನೆಲೆಯಲ್ಲಿಯೇ.

ಉಡುಪಿ ಸಕಾರೀ ಆಸ್ಪತ್ರೆ ಖಾಸಗೀಕರಣ ವಿರೋಧಿಸಿ ಪ್ರತಿಭಟನೆ

ಉಡುಪಿ ಜಿಲ್ಲಾ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆಯನ್ನು ಖಾಸಗೀಕರಿಸುವುದನ್ನು ವಿರೋಧಿಸಿ ಸಿಪಿಐ(ಎಂ) ಉಡುಪಿ ಜಿಲ್ಲಾ ಸಮಿತಿಯ ವತಿಯಿಂದ ಅಕ್ಟೋಬರ್ 17ರಂದು ಅಲ್ಲಿನ ಸರ್ವಿಸ್ ಬಸ್ ನಿಲ್ದಾಣದ ಎದುರು ಪ್ರತಿಭಟನೆ ನಡೆಸಲಾಯಿತು.

ಉಡುಪಿ ನಗರದ ಆಧುನಿಕ ಇತಿಹಾಸದಲ್ಲೇ ಪ್ರಖ್ಯಾತ ದಾನಿಯೆಂದು ಹೆಸರಾದ ಹಾಜಿ ಅಬ್ದುಲ್ ಹಾಜಿ ಖಾಸಿಂ ಸಾಹೇಬರು ಸರಕಾರಕ್ಕೆ ದಾನವಾಗಿ ನೀಡಿದ ತಮ್ಮ ಜಮೀನಿನಲ್ಲಿ ಈ ಸರಕಾರಿ ಆಸ್ಪತ್ರೆ ನಡೆಯುತ್ತಿದೆ. ಬಡವರು ಹಾಗೂ ಕಾರ್ಮಿಕರು ಈ ಆಸ್ಪತ್ರೆಯನ್ನೇ ಅವಲಂಬಿಸಿದ್ದಾರೆ. ಗರ್ಭಿಣಿ ಮಹಿಳೆಯರ ಸಾಲಿನ ಪ್ರಮಾಣ ಅತ್ಯಂತ ಕಡಿಮೆ ಇರುವ ರಾಜ್ಯದ ಸರ್ಕಾರೀ ಆಸ್ಪತ್ರೆ ಇದಾಗಿದೆ. ಈ ಆಸ್ಪತ್ರೆಯಲ್ಲಿ ದೊರೆಯುವ ಸೇವೆಯು ಯಾವ ಖಾಸಗಿ ಆಸ್ಪತ್ರೆಗೂ ಕಡಿಮೆಯದಾಗಿಲ್ಲ. ಇಂಥ ಸರ್ಕಾರಿ ಆಸ್ಪತ್ರೆಯನ್ನು ಖಾಸಗೀಯವರಿಗೆ ಹಸ್ತಾಂತರಿಸುವ ಸರ್ಕಾರದ ಧೋರಣೆಯನ್ನು ಪ್ರತಿಭಟನೆಯಲ್ಲಿ ಭಾಗವಹಿಸಿದ ಮುಖಂಡರು ಖಂಡಿಸಿ ಮಾತನಾಡಿದರು.

ಪ್ರತಿಭಟನೆಯನ್ನು ಉದ್ದೇಶಿಸಿ ಖ್ಯಾತ ವೈದ್ಯ ಹಾಗೂ ಡಾ॥ಎ.ವಿ.ಬಾಳಿಗಾ ಸ್ಮಾರಕ ಆಸ್ಪತ್ರೆಯ ನಿರ್ದೇಶಕ ಡಾ॥ಪಿ.ವಿ.ಭಂಡಾರಿ, ಸಿಪಿಐ(ಎಂ) ಉಡುಪಿ ಜಿಲ್ಲಾ ಕಾರ್ಯದರ್ಶಿ ಬಾಲಕೃಷ್ಣ ಶೆಟ್ಟಿ ಮಾತನಾಡಿದರು. ಪಕ್ಷದ ಹಿರಿಯ ಮುಖಂಡ ಕೆ.ಶಂಕರ್, ಪಿ.ವಿಶ್ವನಾಥ ರೈ, ವಿಠಲ ಪೂಜಾರಿ, ಕರ್ನಾಟಕ ಕೋಮು ಸೌಹಾರ್ದ ವೇದಿಕೆಯ ಜಿ.ರಾಜಶೇಖರ್ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಅಕ್ರಮ ಮರಳು ಮಾಫಿಯಾ : ಚೇಲಾಗಳಂತೆ ವರ್ತಿಸುವ ಠಾಣಾಧಿಕಾರಿಗಳು



ಅಕ್ರಮ ಮರಳು ಮಾಫಿಯಾದ ವಿರುದ್ಧ ಕ್ರಮಕೈಗೊಳ್ಳಬೇಕಾಗಿದ್ದ ಪೊಲೀಸರು ಮಾಫಿಯಾದ ಪ್ರಭಾವಕ್ಕೊಳಗಾಗಿ ಅಮಾಯಕ ಹೋರಾಟಗಾರರ ಮೇಲೆ ಸುಳ್ಳು ಕೇಸು ದಾಖಲಿಸುವ ಮೂಲಕ ಮಾಫಿಯಾಗಳ ಚೇಲಾಗಳಂತೆ ವರ್ತಿಸುತ್ತಿರುವ ಭ್ರಷ್ಟ ಪೊಲೀಸರ ನಡೆ ಖಂಡನೀಯ ಎಂದು ಡಿವೈಎಫ್ಐನ ಜಿಲ್ಲಾ ಅಧ್ಯಕ್ಷರು, ಮಂಗಳೂರು ನಗರ ಪಾಲಿಕೆ ಸದಸ್ಯರು ಆಗಿರುವ ದಯಾನಂದ ಶೆಟ್ಟಿಯವರು ಹೇಳಿದರು.

ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿವೈಎಫ್ಐ), ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್ಎಫ್ಐ) ಮತ್ತು ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್ (ಸಿಐಟಿಯು) ನೇತೃತ್ವದಲ್ಲಿ ಅಕ್ಟೋಬರ್ 17ರಂದು ಮಂಗಳೂರು ನಗರದಲ್ಲಿ ಪ್ರತಿಭಟನೆ ನಡೆಸಿದರು.

ವಿದ್ಯಾರ್ಥಿ ಯುವಜನ ನಾಯಕರ ಮೇಲೆ ಸುಳ್ಳು ಕೇಸು ದಾಖಲಿಸಿರುವುದನ್ನು ಖಂಡಿಸಿ ಹಾಗೂ ಮಂಗಳೂರು ಗ್ರಾಮಾಂತರ, ಬಂದರು ಠಾಣೆಯ ತಪ್ಪಿತಸ್ಥ ಪೊಲೀಸ್ ಅಧಿಕಾರಿಗಳ ವಿರುದ್ಧ ಕ್ರಮಕೈಗೊಳ್ಳಲು ಒತ್ತಾಯಿಸಿ ನಡೆದ ಪ್ರತಿಭಟನೆಯನ್ನು ಉದ್ದೇಶಿಸಿ ದಯಾನಂದ ಶೆಟ್ಟಿರವರು ಮಾತನಾಡಿದರು.

ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ಮಾತನಾಡಿ "ಸಮಾಜದಲ್ಲಾಗುವ ಅನ್ಯಾಯ, ಅಕ್ರಮ, ಗೂಂಡಾಗಿರಿಗಳನ್ನು ನಿಯಂತ್ರಿಸಿ ಕೊಲೆಗಾರರು, ಸಮಾಜಘಾತುಕರನ್ನು ಬಂಧಿಸುವ ಮೂಲಕ ಸಮಾಜದ ಸ್ವಾಸ್ಥ್ಯವನ್ನು ಕಾಪಾಡುವುದು ಪೊಲೀಸರ ಹೊಣೆ. ಆದರೆ ಬಂದರು ಠಾಣಾ ಅಧಿಕಾರಿ ಶಾಂತರಾಮ್ ಕುಂದರ್ ಸುಳ್ಳು ಪ್ರಕರಣದ ಅಡಿಯಲ್ಲಿ ಅಮಾಯಕ ವಿದ್ಯಾರ್ಥಿಗಳನ್ನು ಬಂಧಿಸಿ, ಕೈಕೋಳ ತೊಡಿಸಿ ದೊಡ್ಡ ಸಾಧನೆ ಮಾಡಿದಂತೆ ಬೀಗುತ್ತಿರುವುದು ನೋಡಿದರೆ ಬಹುಶಃ ಇಂತಹ ಕೆಲಸಕ್ಕೆನೇ ಮುಖ್ಯಮಂತ್ರಿ ಪದಕ ಪಡೆದಿರುವುದೇ" ಎಂದು ಗೇಲಿ ಮಾಡಿದರು.

ಮುಂದುವರಿದು ಮಾತನಾಡುತ್ತಾ ಮಂಗಳೂರು ಗ್ರಾಮಾಂತರ ಠಾಣಾಧಿಕಾರಿ ಸುಧಾಕರ್ ಬಹುಶಃ ಅವರು ನೇಮಕವಾಗಿರುವುದು ಸರಕಾರದಿಂದಲೋ ಅಥವಾ ಅಕ್ರಮ ಮರಳು ಮಾಫಿಯಾದ ಚೇಲಾಗಳಿಂದಲೋ ಎಂಬ ಅನುಮಾನ ವ್ಯಕ್ತವಾಗುತ್ತಿದೆ. ಠಾಣೆಗೆ ತೆರಳಿದರೆ ನಟ ಸಾಯಿಕುಮಾರ್ ತರಹ ಡೈಲಾಗ್ ಹೊಡೆಯೋ ಮುಖಾಂತರ ಅಮಾಯಕರನ್ನು ಬೆದರಿಸುವುದೇ ಅವರ ಕಾಯಕ. ಹೊಟ್ಟೆಗೆ ಇವರು ಅನ್ನ ತಿನ್ನೋದರ ಬದಲು ಮರಳು ತಿಂದು ಬದುಕುವ ಹಾಗೆ ಮೇಲ್ನೋಟಕ್ಕೆ ಕಾಣುತ್ತಿದೆ ಎಂದು ಟೀಕಿಸಿದರು.

ಇಂತಹ ಭ್ರಷ್ಟ ಪೊಲೀಸ್ ಅಧಿಕಾರಿಗಳಿಂದ ಪೊಲೀಸ್ ಇಲಾಖೆಯ ಮಾನ ಹರಾಜುಗೊಳ್ಳುತ್ತಿದೆ. ಈ ಕೂಡಲೇ ನಗರದ ಪ್ರಾಮಾಣಿಕ, ಜನಸ್ನೇಹಿ ಪೊಲೀಸ್ ಆಯುಕ್ತರು ಮಂಗಳೂರು ಗ್ರಾಮಾಂತರ, ಬಂದರು ಠಾಣೆಯ ತಪ್ಪಿತಸ್ಥ ಭ್ರಷ್ಟ ಪೊಲೀಸ್ ಅಧಿಕಾರಿಗಳ ವಿರುದ್ಧ ಕ್ರಮಕೈಗೊಳ್ಳಬೇಕೆಂದು ಒತ್ತಾಯಿಸಿದರು.


ಪ್ರತಿಭಟನೆಯನ್ನು ಉದ್ದೇಶಿಸಿ ಡಿವೈಎಫ್ಐನ ಜಿಲ್ಲಾ ಕಾರ್ಯದರ್ಶಿ ಸಂತೋಷ್ ಬಜಾಲ್, ಎಸ್ಎಫ್ಐ ಜಿಲ್ಲಾ ಕಾರ್ಯದರ್ಶಿ ಚರಣ್ ಶೆಟ್ಟಿ ಮಾತನಾಡಿದರು. ಈ ವೇಳೆ ಡಿವೈಎಫ್ಐನ ಜಿಲ್ಲಾ ಮುಖಂಡರಾದ ನವೀನ್ ಕೊಂಚಾಡಿ, ರಫೀಕ್ ಹರೇಕಳ, ಸಿಐಟಿಯು ಮುಖಂಡರಾದ ಸಂತೋಷ್ ಶಕ್ತಿನಗರ, ಪ್ರೇಮನಾಥ್ ಜಲ್ಲಿಗುಡ್ಡೆ, ಜಯಂತಿ ಬಿ. ಶೆಟ್ಟಿ, ಎಸ್ಎಫ್ಐ ಜಿಲ್ಲಾ ಅಧ್ಯಕ್ಷರಾದ ನಿತಿನ್ ಕುತ್ತಾರ್ ಮುಂತಾದವರು ಉಪಸ್ಥಿತರಿದ್ದರು.

ಪ್ರತಿಭಟನೆಯ ನೇತೃತ್ವವನ್ನು ಡಿವೈಎಫ್ಐ ಮಂಗಳೂರು ನಗರ ದಕ್ಷಿಣ ಸಮಿತಿ ಕಾರ್ಯದರ್ಶಿ ಸಾದಿಕ್ ಕಣ್ಣೂರು, ಸಿಐಟಿಯು ಕಾರ್ಯದರ್ಶಿ ಯೋಗೀಶ್ ಜಪ್ಪಿನಮೊಗರು, ಎಸ್ಎಫ್ಐನ ಮಯೂರಿ ಬೋಳಾರ್ ವಹಿಸಿದ್ದರು.

ಸಂತೋಷ್ ಬಜಾಲ್

ದೆಹಲಿ ರಾಜಧಾನಿ ಪ್ರದೇಶದ ವಿದ್ಯಮಾನಗಳು:

ಮೋದಿ ಸರಕಾರದ ಸರ್ವಾಧಿಕಾರಶಾಹಿ ಹಸಿವಿನ ಪ್ರತೀಕ



ವ್ಯಂಗ್ಯಚಿತ್ರ: ---------------

ದಿಲ್ಲಿಯಲ್ಲಿ ಕೇಜ್ರಿವಾಲ್ ಸರಕಾರದ ಮೇಲೆ ನಡೆಯುತ್ತಿರುವ ದಾಳಿಗಳು ಅವರು ವೈಯಕ್ತಿಕ ನೆಲೆಯಲ್ಲಿ ಬಿಂಬಿಸುವಂತೆ ನರೇಂದ್ರ ಮೋದಿಯವರ ದ್ವೇಷ ರಾಜಕಾರಣಕ್ಕಿಂತ ಹೆಚ್ಚಾಗಿ, ಇದೊಂದು ಸರ್ವಾಧಿಕಾರಿ ಪ್ರವೃತ್ತಿ ತೋರಿಸುತ್ತಿರುವ ಕೇಂದ್ರ ಸರಕಾರ ಮತ್ತು ಆಡಳಿತ ಪಕ್ಷದಿಂದ ಪ್ರಜಾಸತ್ತಾತ್ಮಕ ಮತ್ತು ಒಕ್ಕೂಟ ವ್ಯವಸ್ಥೆಯ ಮೇಲಿನ ಅಪಾಯಕಾರಿ ದಾಳಿ ಎಂದೇ ಕಾಣಬೇಕು. ಪ್ರಜಾಪ್ರಭುತ್ವದ ಕತ್ತು ಹಿಸುಕಲು ಮೋದಿ ಸರಕಾರಕ್ಕೆ ಹೀಗೇ ಬಿಟ್ಟರೆ ಇನ್ನಷ್ಟು ಸರ್ವಾಧಿಕಾರಶಾಹೀ ದಾಳಿಗಳನ್ನು ನಡೆಸುವ ಅದರ ಹಸಿವು ಹೆಚ್ಚುವುದು ಖಂಡಿತ.



*** ಪ್ರಕಾಶ್ ಕಾರಟ್**

ರಾಷ್ಟ್ರ ರಾಜಧಾನಿ ಪ್ರದೇಶ ದೆಹಲಿಯಲ್ಲಿ ನಡೆಯುತ್ತಿರುವ ವಿದ್ಯಮಾನಗಳು ಹೇಸಿಗೆ ಹುಟ್ಟಿಸುವಂತಿವೆ. 2015ರ ಅಸೆಂಬ್ಲಿ ಚುನಾವಣೆಯ ನಂತರ ಆಮ್ ಆದ್ಮಿ ಪಕ್ಷದ (ಆಪ್) ಸರಕಾರ ರಚನೆಯಾದಾಗಿನಿಂದಲೂ ಕೇಂದ್ರ ಸರಕಾರವು ಚುನಾಯಿತ ಸರಕಾರದ ಕಾರ್ಯನಿರ್ವಹಣೆಗೆ ಅಡ್ಡಿಪಡಿಸಲು ಭಂಡ ಹಾಗೂ ಲೆಕ್ಕಾಚಾರದ ದಾಳಿಗಳನ್ನು ನಡೆಸುತ್ತಿದೆ. ಉಪ ರಾಜ್ಯಪಾಲರು ಮತ್ತು ಕೇಂದ್ರದ ವ್ಯಾಪ್ತಿಗೆ ಬರುವ ದೆಹಲಿ ಪೊಲೀಸರ ಮೂಲಕ ಅಧಿಕಾರದ ನಗ್ನ ದುರುಪಯೋಗವಾಗುತ್ತಿದ್ದು ರಾಜ್ಯ ಸರಕಾರ ಮತ್ತು ಚುನಾಯಿತ ಶಾಸಕಾಂಗ ಹೆಚ್ಚೂ ಕಮ್ಮಿ ಬದಿಗೆ ಸರಿದಂತಾಗಿದೆ.

ದೆಹಲಿ ಶಾಸನಸಭೆ ಮತ್ತು ಸರಕಾರ ರಚನೆಗೆ ಅವಕಾಶ ಕಲ್ಪಿಸಿದ ಸಂವಿಧಾನದ 69ನೇ ತಿದ್ದುಪಡಿಯು ಅಧಿಕಾರ ಹಂಚಿಕೆ ವೇಳೆ ಸಾರ್ವಜನಿಕ ಸುವ್ಯವಸ್ಥೆ, ಪೊಲೀಸ್ ಮತ್ತು ಭೂಮಿ– ಈ ಮೂರು ವಿಷಯಗಳನ್ನು ಕೇಂದ್ರದ ವ್ಯಾಪ್ತಿಗೆ ಬಿಟ್ಟುಕೊಟ್ಟಿದೆ. ಆದರೆ ಆಮ್‌ಆದ್ಮಿ ಪಕ್ಷ(ಆಪ್)ದ ಸರಕಾರದ 20 ತಿಂಗಳ ಅವಧಿಯಲ್ಲಿ, ರಾಜ್ಯ ಸರಕಾರದ ವ್ಯಾಪ್ತಿಗೆ ಬರುವ ಎಲ್ಲಾ ವಿಷಯಗಳಲ್ಲೂ ಕೇಂದ್ರದ ಅತಿಕ್ರಮಣ ನಡೆದಿರುವುದು ಸ್ಪಷ್ಟವಾಗಿದೆ.

ದೆಹಲಿ ವಿಧಾನಸಭೆ ಅನೇಕ ಕಾನೂನುಗಳನ್ನು ಅಂಗೀಕರಿಸಿದೆ. ಆದರೆ ಈ ರೀತಿ ಅಂಗೀಕರಿಸಲಾದ ಎಲ್ಲಾ 14 ಮಸೂದೆಗಳನ್ನು ಕೇಂದ್ರ ಗೃಹ ಸಚಿವಾಲಯ ವಾಪಸ್ ಕಳಿಸಿದೆ. ರಾಜ್ಯಪಾಲರ "ಪೂರ್ವಾನುಮತಿ" ಪಡೆಯುವಲ್ಲಿ ಸೂಕ್ತ ನಿಯಮಾವಳಿಗಳನ್ನು ಅನುಸರಿಸಲಾಗಿಲ್ಲ ಎಂಬ ನೆವ ಮುಂದೊಡ್ಡಿ ಈ ರೀತಿ ಮಾಡಲಾಗಿದೆ.

ಉಪರಾಜ್ಯಪಾಲ ನಜೀಬ್ ಜಂಗ್ ಕೇಂದ್ರದ ಮೋದಿ ಸರಕಾರದ ಏಜೆಂಟ್ ಆಗಿ ವರ್ತಿಸಿದ್ದಾರೆ. ಭ್ರಷ್ಟಾಚಾರ ವಿರೋಧಿ ದಳದ (ಎಸಿಬಿ) ಮುಖ್ಯಸ್ಥರನ್ನು 2015 ರ ಮೇ ತಿಂಗಳಲ್ಲಿ ತೆಗೆದು ಹಾಕಿ ಅವರ ಜಾಗಕ್ಕೆ ಬೇರೊಬ್ಬರನ್ನು ಆಯ್ಕೆ ಮಾಡುವಲ್ಲಿ ಮಾಡಿದ ಹಸ್ತಕ್ಷೇಪವು ಆಪ್ ಸರಕಾರದ ಕಾರ್ಯನಿರ್ವಾಹಕ ಅಧಿಕಾರವನ್ನು ತಟಸ್ಥ ಗೊಳಿಸಲು ಮೋದಿ ಸರಕಾರದ ಹುನ್ನಾರ ಎಷ್ಟಿದೆಯೆಂಬುದರ ಸ್ಪಷ್ಟ ಸೂಚನೆಯಾಗಿತ್ತು. ತದನಂತರ, ಅನಿಯಮಿತ ವಿದ್ಯುತ್ ಕಡಿತಕ್ಕಾಗಿ ಗ್ರಾಹಕರಿಗೆ ಪರಿಹಾರ ನೀಡಬೇಕೆಂದು ವಿದ್ಯುತ್ ವಿತರಣೆ ಕಂಪೆನಿಗಳಿಗೆ ನಿರ್ದೇಶನ ನೀಡುವ ಆಪ್ ಸರಕಾರದ ಆದೇಶವನ್ನು ಉಪರಾಜ್ಯಪಾಲರು ರದ್ದುಪಡಿಸಿದರು. ತೀರಾ ಇತ್ತೀಚೆಗೆ, ಕಾರ್ಮಿಕರ ಕನಿಷ್ಟ ವೇತನವನ್ನು ಏರಿಸುವ ಆಪ್ ಸರಕಾರದ ಆದೇಶವನ್ನು ನಜೀಬ್ ಜಂಗ್ ತಳ್ಳಿ ಹಾಕಿದರು.

ದುರದೃಷ್ಟವಶಾತ್, ದೆಹಲಿ ಹೈಕೋರ್ಟ್ 2016 ಆಗಸ್ಟ್‌ನಲ್ಲಿ ನೀಡಿದ ಪ್ರತಿಗಾಮಿ ಹಾಗೂ ತಪ್ಪಿನಿಂದ ಕೂಡಿದ ತೀರ್ಪು ದೆಹಲಿ ಸರಕಾರದ ಅಸ್ತಿತ್ವವನ್ನೇ ನಿರಾಕರಿಸಿದಂತಿತ್ತು. ರಾಷ್ಟ್ರ ರಾಜಧಾನಿ ಪ್ರದೇಶ ಒಂದು ರಾಜ್ಯವಲ್ಲ, ಆದರೆ 'ಕೇಂದ್ರಾಡಳಿತ ಪ್ರದೇಶವಾಗಿಯೇ ಮುಂದುವರಿದಿದೆ' ಎಂಬುದರ ಆಧಾರದಲ್ಲಿ ಉಪರಾಜ್ಯಪಾಲರು ರಾಜ್ಯದ ಚುನಾಯಿತ ಸರಕಾರದ 'ನೆರವು ಹಾಗೂ ಸಲಹೆ' ಮೇರೆಗೆ ಕಾರ್ಯನಿರ್ವಹಿಸಲು ಬಾಧ್ಯರಲ್ಲ ಎಂದು ಹೈಕೋರ್ಟ್ ತನ್ನ ತೀರ್ಪಿನಲ್ಲಿ ಹೇಳಿತ್ತು. ಅದು ನಾಗರಿಕ ಸೇವೆಗಳಿಗೂ ಕೇಂದ್ರದ ವ್ಯಾಪ್ತಿಯನ್ನು ವಿಸ್ತರಿಸಿತ್ತು.

ದೆಹಲಿ ಹೈಕೋರ್ಟ್ ತೀರ್ಪನ್ನು ಪ್ರಶ್ನಿಸಿ ರಾಜ್ಯ ಸರಕಾರ ಸಲ್ಲಿಸಿರುವ ಅರ್ಜಿಯನ್ನು ಸುಪ್ರೀಂಕೋರ್ಟ್ ವಿಚಾರಿಸುತ್ತಿದೆ. ಆದರೆ ಈಗಾಗಲೇ ಅನಾಹುತ ಸಂಭವಿಸಿಯಾಗಿದೆ. ಈ ತೀರ್ಪಿನಿಂದಾಗಿ ಉಪರಾಜ್ಯಪಾಲರು ಎಲ್ಲಾ ಅಧಿಕಾರಿಗಳ ಮೇಲೆ ಹತೋಟಿ ಹೊಂದಿದ್ದಾರೆ. ರಾಜ್ಯಪಾಲರ ಸಮ್ಮತಿ ಇಲ್ಲದ ಹೊರತು, ಮುಖ್ಯಮಂತ್ರಿ ಮತ್ತು ರಾಜ್ಯ ಸರಕಾರದ ಆದೇಶಗಳನ್ನು ಅಧಿಕಾರಿಗಳು ಪಾಲಿಸಬೇಕೆಂದಿಲ್ಲ ಎಂಬುದನ್ನು ಹೇಳಲು ಉಪರಾಜ್ಯಪಾಲರಿಗೆ ಇನ್ನಷ್ಟು ಧೈರ್ಯ ಬಂದಂತಾಗಿದೆ.

ದೆಹಲಿ ವಿಧಾನಸಭೆಯಲ್ಲಿ 70 ಶಾಸಕರ ಪೈಕಿ ಆಪ್ ಶಾಸಕರ ಸಂಖ್ಯೆ 67. ಕಳೆದ 20 ತಿಂಗಳ ಅವಧಿಯಲ್ಲಿ 14 ಆಪ್ ಶಾಸಕರನ್ನು ನಾನಾ ಆರೋಪಗಳ ಮೇಲೆ ಬಂಧಿಸಲಾಗಿದೆ ಮತ್ತು ಸೆರೆಮನೆಗೆ ತಳ್ಳಲಾಗಿದೆ. ದೊಂಬಿ, ಹಣ ಸುಲಿಗೆ, ಲೈಂಗಿಕ ಕಿರುಕುಳ, ಕೌಟುಂಬಿಕ ಕಿರುಕುಳ, ಭೂ ಕಬಳಿಕೆ ಮತ್ತು ವಂಚನೆ ಇವೇ ಮೊದಲಾದ ಆರೋಪಗಳನ್ನು ಅವರ ಮೇಲೆ ಹೊರಿಸಿ ದೆಹಲಿ ಪೊಲೀಸರು ಮೊಕದ್ದಮೆಗಳನ್ನು ದಾಖಲಿಸಿದ್ದಾರೆ. ಇದುವರೆಗೆ ಆಪ್ ಶಾಸಕರ ಪೈಕಿ 21 ಶೇಕಡ ಶಾಸಕರು ಕ್ರಿಮಿನಲ್ ಮೊಕದ್ದಮೆಗಳನ್ನು ಎದುರಿಸಿದ್ದಾರೆ ಮತ್ತು ಶಿಕ್ಷೆಗೆ ಗುರಿಯಾಗಿದ್ದಾರೆ. ದೇಶದ ಯಾವುದೇ ರಾಜ್ಯದ ಶಾಸಕಾಂಗದ ಇಷ್ಟು ಪ್ರಮಾಣದ ಶಾಸಕರು ಬಂಧಿತರಾಗಿದ್ದಿಲ್ಲ ಮತ್ತು ಜೈಲಿಗೆ ಹೋಗಿದ್ದಿಲ್ಲ.

ವೈಯಕ್ತಿಕವಾಗಿ ಪ್ರತಿಯೊಂದು ಪ್ರಕರಣದ ಗುಣಾವಗುಣ ಏನೇ ಆಗಿರಬಹುದು, ಆದರೆ ಇಷ್ಟೊಂದು ಸಂಖ್ಯೆಯ ಜನಪ್ರತಿನಿಧಿಗಳು ಕ್ರಿಮಿನಲ್ ಕೇಸ್‌ಗಳನ್ನು ಎದುರಿಸುವುದೆಂದರೆ ಅದು ಜನರ ನಂಬಿಕೆಯನ್ನೇ ಘಾಸಿಗೊಳಿಸುತ್ತದೆ. ಗುಜರಾತ್‌ನಲ್ಲಿ ಶಾಸಕ ಗುಲಾಬ್ ಸಿಂಗ್ ಬಂಧನದ ವಿಚಾರದಲ್ಲಿ ನ್ಯಾಯಾಲಯ ಪೊಲೀಸರನ್ನು ತರಾಟೆಗೆ ತೆಗೆದುಕೊಂಡಿದೆ. ತರಾತುರಿಯಲ್ಲಿ ಬಂಧಿಸಿದ್ದು ಸರಿಯಲ್ಲ ಎಂದ ಕೋರ್ಟ್, ಪೊಲೀಸರು ನ್ಯಾಯಾಲಯದಿಂದ ಮುಖ್ಯ ವಿಷಯಗಳನ್ನು ಬಚ್ಚಿಟ್ಟದ್ದಕ್ಕೂ ತರಾಟೆಗೆ ತೆಗೆದುಕೊಂಡಿತು.

ಮೋದಿ ಸರಕಾರದ ಈ ಪ್ರಜಾಪ್ರಭುತ್ವ–ವಿರೋಧಿ ಆಕ್ರಮಣದ ಮುಂದೆ, ಪ್ರತಿಪಕ್ಷಗಳು ಮೌನ ತಳೆದಿರುವುದು ಆಶ್ಚರ್ಯಕ್ಕೆ ಕಾರಣವಾಗಿದೆ. ಈ ವಿಚಾರದಲ್ಲಿ ಈ ಹಿಂದೆ ದೆಹಲಿಯಲ್ಲಿ ಸರಕಾರ ನಡೆಸಿದ್ದ ಕಾಂಗ್ರೆಸ್ ಪಕ್ಷ ದೊಡ್ಡ ಅಪರಾಧಿ ಆಗಿದೆ. ಕೇಂದ್ರ ಸರಕಾರದ ಪ್ರಜಾಪ್ರಭುತ್ವ–ವಿರೋಧಿ ಮಧ್ಯಪ್ರವೇಶಗಳನ್ನು ವಿರೋಧಿಸುವ ಬದಲು, ಆಪ್ ಸರಕಾರದ ಇಂದಿನ ಸ್ಥಿತಿಗೆ ಅದುವೇ ಹೊಣೆ ಎಂದು ಕಾಂಗ್ರೆಸ್ ಹೇಳುತ್ತಿದೆ.

ದೆಹಲಿ ಮುಖ್ಯಮಂತ್ರಿ ಹಾಗೂ ಆಪ್ ಮುಖ್ಯಸ್ಥ ಅರವಿಂದ ಕೇಜ್ರಿವಾಲ್ ಹೆಚ್ಚಾಗಿ ಕೇಂದ್ರದ ಮಧ್ಯಪ್ರವೇಶವನ್ನು ನರೇಂದ್ರ ಮೋದಿಯವರ ದ್ವೇಷ ರಾಜಕಾರಣ ಎಂದು ವೈಯಕ್ತಿಕ ನೆಲೆಯಲ್ಲಿಯೇ ಬಿಂಬಿಸಲು ಪ್ರಯತ್ನಿಸುತ್ತಿದ್ದಾರೆ. ಆದರೆ, ಇದೊಂದು ಸರ್ವಾಧಿಕಾರಿ ಪ್ರವೃತ್ತಿ ತೋರಿಸುತ್ತಿರುವ ಕೇಂದ್ರ ಸರಕಾರ ಮತ್ತು ಆಡಳಿತ ಪಕ್ಷದಿಂದ ಪ್ರಜಾಸತ್ತಾತ್ಮಕ ಮತ್ತು ಒಕ್ಕೂಟ ವ್ಯವಸ್ಥೆಯ ಮೇಲಿನ ಅಪಾಯಕಾರಿ ದಾಳಿ ಎಂದು ಪ್ರಮುಖವಾಗಿ ಬಿಂಬಿಸುವುದು ತುಂಬಾ ಮುಖ್ಯವಾಗಿದೆ. ಆಪ್ ಸರಕಾರದ ಕಡೆಯಿಂದ ಸಾಕಷ್ಟು ತಪ್ಪು–ಒಪ್ಪುಗಳು ನಡೆದಿವೆ, ಅವನ್ನು ಟೀಕಿಸಬಹುದು ಮತ್ತು ವಿರೋಧಿಸಬಹುದು. ಆದರೆ ಪ್ರಜಾಪ್ರಭುತ್ವ ಮತ್ತು ಒಕ್ಕೂಟ ವ್ಯವಸ್ಥೆ ಮೇಲಿನ ಸರ್ವಾಧಿಕಾರಶಾಹಿ ಆಕ್ರಮಣವನ್ನು ಎಲ್ಲರೂ ವಿರೋಧಿಸಬೇಕಾಗಿದೆ.

ಪ್ರಜಾಪ್ರಭುತ್ವದ ಕತ್ತು ಹಿಸುಕಲು ಮೋದಿ ಸರಕಾರಕ್ಕೆ ಹೀಗೇ ಬಿಟ್ಟರೆ ಇನ್ನಷ್ಟು ಸರ್ವಾಧಿಕಾರಶಾಹೀ ದಾಳಿಗಳನ್ನು ನಡೆಸುವ ಅದರ ಹಸಿವು ಹೆಚ್ಚುವುದು ಖಂಡಿತ.

ಅನು: ವಿಶ್ವ

ಹಮಾಲಿ ಕಾರ್ಮಿಕರ ಮಕ್ಕಳಿಗೆ ವಿದ್ಯಾರ್ಥಿ ವೇತನ ಚೆಕ್ ವಿತರಣೆ



ವ್ಯಾಪಾರ ವಹಿವಾಟಿನಲ್ಲಿ ಪ್ರಮುಖ ಪಾತ್ರ ವಹಿಸುವ ಶ್ರಮಜೀವಿ ಹಮಾಲಿ ಕಾರ್ಮಿಕರು ಬಹುತೇಕ ಸಾಮಾಜಿಕವಾಗಿ, ಆರ್ಥಿಕವಾಗಿ ಹಿಂದುಳಿದಿದ್ದಾರೆ, ಅಲ್ಪಸಂಖ್ಯಾತ, ದಲಿತ, ಹಿಂದುಳಿದ ಸಮುದಾಯಕ್ಕೆ ಸೇರಿದವರಾಗಿದ್ದು ಯಾವುದೇ ಸಾಮಾಜಿಕ ಭದ್ರತೆ, ಕಾನೂನಿನ ರಕ್ಷಣೆ ಇಲ್ಲದೆ ತಮ್ಮ ನಿತ್ಯ ಮಣಭಾರ ಹೊರುವ ಕೆಲಸದಿಂದ ಬರುವ ಅಲ್ಪಸ್ವಲ್ಪ ಕೂಲಿಯಲ್ಲಿಯೇ ಬದುಕು ಕಟ್ಟಿಕೊಂಡಿದ್ದಾರೆ. ಈ ನಿಟ್ಟಿನಲ್ಲಿ ರಾಜ್ಯ ಸರಕಾರದ ಮುಂದಿರುವ "ಕರ್ನಾಟಕ ಅಸಂಘಟಿತ ಕಾರ್ಮಿಕರ ಭವಿಷ್ಯ ನಿಧಿ ಯೋಜನೆ" ಕರಡು ಪ್ರಸ್ತಾವನೆಯನ್ನು ಬೆಳಗಾವಿಯಲ್ಲಿ ನಡೆಯುವ ವಿಧಾನ ಮಂಡಳ ಅಧಿವೇಶನದಲ್ಲಿಯೇ ಮಂಡಿಸಿ ಅಂಗೀಕರಿಸಬೇಕು ಎಂದು ಕರ್ನಾಟಕ ರಾಜ್ಯ ಹಮಾಲಿ ಕಾರ್ಮಿಕರ ಫೆಡರೇಶನ್ ರಾಜ್ಯ ಪ್ರಧಾನ ಕಾರ್ಯದರ್ಶಿ ಮಹೇಶ ಪತ್ತಾರ ಆಗ್ರಹಿಸಿದರು.

ಹುಬ್ಬಳ್ಳಿ ಎಪಿಎಂಸಿ ಶ್ರಮಿಕ ಭವನದಲ್ಲಿ ಅಕ್ಟೋಬರ್ 18ರಂದು ನಡೆದ ಹಮಾಲಿ ಕಾರ್ಮಿಕರ ಸಭೆಯಲ್ಲಿ ಹಮಾಲಿ ಕಾರ್ಮಿಕರ ಮಕ್ಕಳಿಗೆ "ಶಿಕ್ಷಣ ಸಹಾಯ" ವಿದ್ಯಾರ್ಥಿ ವೇತನ ಚೆಕ್ಕಗಳನ್ನು ವಿತರಿಸಿ ಮಾತನಾಡಿದ ಅವರು "ರಾಜ್ಯ ಹಮಾಲಿ ಫೆಡರೇಶನ್ ಬೆಂಗಳೂರಿನ ಸಿಂಫ್ವ ಟ್ರಸ್ಟ್ ಸಹಯೋಗದೊಂದಿಗೆ ಪ್ರಸ್ತುತ ಶೈಕ್ಷಣಿಕ ವರ್ಷದಲ್ಲಿ ರಾಜ್ಯದ ಉನ್ನತ ಶಿಕ್ಷಣ ಮಾಡುತ್ತಿರುವ 185 ವಿದ್ಯಾರ್ಥಿಗಳಿಗೆ ರೂ. 13.5 ಲಕ್ಷ ವಿದ್ಯಾರ್ಥಿ ವೇತನ ವಿತರಿಸಲಾಗಿದೆ. ಹಮಾಲಿ ಕಾರ್ಮಿಕರ ಮಕ್ಕಳು ಕೂಡಾ ಒಂದು ಒಳ್ಳೆ ಜೀವನವನ್ನು ರೂಪಿಸಿಕೊಳ್ಳಲು ಸಾಧ್ಯವಾಗುವ ನಿಟ್ಟಿನಲ್ಲಿ ಈ ನಮ್ಮ ಪ್ರಯತ್ನವಾಗಿದೆ" ಎಂದರು.

ಸಭೆಯ ಅಧ್ಯಕ್ಷತೆಯನ್ನು ಹನಮಂತ ಜಾಲಗಾರ ವಹಿಸಿದ್ದರು. ಬಸವಣ್ಣೆಪ್ಪ ನೀರಲಗಿ ಸ್ವಾಗತಿಸಿದರು. ಗುರುಸಿದ್ದಪ್ಪ ಅಂಬಿಗೇರ ವಂದಿಸಿದರು. ಈ ಸಂದರ್ಭದಲ್ಲಿ 14 ವಿದ್ಯಾರ್ಥಿಗಳಿಗೆ ಚೆಕ್ಕ್ ವಿತರಿಸಲಾಯಿತು. ಮುಖಂಡರಾದ ನಾಗಮ್ಮ ಹಿರೇಮನಿ, ದುರ್ಗಪ್ಪ ಚಿಕ್ಕತುಂಬಳ, ಸರದಾರಸಾಬ ಹಾಸೀಮನವರ. ಮಂಜುನಾಥ ಹುಜರಾತಿ, ಕತಾಲಸಾಬ ಮುಲ್ಲಾ, ಹುಸೇನಸಾಬ ನದಾಫ್, ಕರಿಯಪ್ಪ ಧಳವಾಯಿ ಮುಂತಾದವರು ಉಪಸ್ಥಿತರಿದ್ದರು.

ಗುರುಸಿದ್ದಪ್ಪ ಅಂಬಿಗೇರ

ಈ ವಾರ ಚರಿತ್ರೆಯಲ್ಲಿ

23–27 ಅಕ್ಟೋಬರ್ 1946

ಚಾರಿತ್ರಿಕ ಪುನ್ನಪ್ರ ವಾಯಲಾರ್ ಹೋರಾಟ

ಅಂಬಲಪುಳ ಮತ್ತು ಚೇರ್ತಾಲದ ಕಾರ್ಮಿಕರು ಟ್ರಾವಂಕೂರು ರಾಜನ ದಿವಾನರ ದುರಾಢಳಿತ, ಅಮೆರಿಕನ್ ಮಾದರಿ ಸರಕಾರದ ವಿರುದ್ಧ ಮತ್ತು ಸಾರ್ವತ್ರಿಕ ಮತದಾನದ ಹಕ್ಕಿಗಾಗಿ ನಡೆಸಿದ ಚಾರಿತ್ರಿಕ ಹೋರಾಟಕ್ಕೆ ಈ ವಾರ 70ನೇ ವಾರ್ಷಿಕೋತ್ಸವದ ಸಂಭ್ರಮ. ಇದು ಭಾರತದ ದುಡಿಯುವ ಜನತೆಯ ಸ್ವಾತಂತ್ರ್ಯ ಹೋರಾಟದ ಅಮೋಘ ಅಧ್ಯಾಯಗಳಲ್ಲಿ ಒಂದು. 250 ರಷ್ಟು ಕಮ್ಯುನಿಸ್ಟ್ ಹೋರಾಟಗಾರರು ತಮ್ಮ ಬಲಿದಾನ ಕೊಟ್ಟ ಹೋರಾಟ. ಸಾವಿರದಷ್ಟು ಜನ ಈ ಹೋರಾಟದಲ್ಲಿ ಮಡಿದರು ಎನ್ನಲಾಗಿದೆ. ಈ ಅಮೋಘ ಹೊರಾಟದ ಪ್ರಭಾವದಿಂದಾಗಿಯೇ ಆ ಮೇಲೆ ಟ್ರಾವಂಕೂರು ರಾಜ ಜೂನ್ 1947ರಲ್ಲಿ ಸ್ವಾತಂತ್ರ್ಯ ಘೋಷಣೆ ಮಾಡಿದರೂ, ಕೊನೆಗೆ ಜನತೆಯ ಒತ್ತಡಕ್ಕೆ ಮಣಿದು ಭಾರತ ಒಕ್ಕೂಟಕ್ಕೆ ಸೇರಬೇಕಾಯಿತು.

ಕರ್ನಾಟಕ ಪ್ರಾಂತ ರೈತ ಸಂಘ, ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ, ಸಿಐಟಿಯು, ಮುಂತಾದ 15ಕ್ಕೂ ಹೆಚ್ಚು ಸಂಘಟನೆಗಳು ಬಡವರು, ದಲಿತರ ಪರವಾಗಿ, ಭೂಮಿ ಹಾಗೂ ನಿವೇಶನ ಸಹಿತ ವಸತಿ ಪ್ರಶ್ನೆಗಾಗಿ ಹೋರಾಟವನ್ನು ತೀವ್ರ ಹಾಗೂ ವ್ಯಾಪಕಗೊಳಿಸಲು ನಿರ್ಧರಿಸಿವೆ. ಮುಂಬರುವ ನವೆಂಬರ್ 18ರಂದು ರಾಜ್ಯದಾದ್ಯಂತ ಎಲ್ಲಾ ತಾಲೂಕಾ ಕೇಂದ್ರಗಳಲ್ಲಿ ಸಾವಿರಾರು ಜನರನ್ನು ಅಣಿ ನೆರೆಸುವ ಮೂಲಕ ರಾಜ್ಯದಲ್ಲಿ ಕನಿಷ್ಟ ಒಂದು ಲಕ್ಷ ಜನರನ್ನು ಹೋರಾಟದಲ್ಲಿ ತೊಡಗಿಸಲು ಹಾಗೂ ಅವರಲ್ಲಿ ಸುಮಾರು 10 ಸಾವಿರ ಜನರನ್ನು ಜೈಲು ತುಂಬುವ ಚಳುವಳಿಯಲ್ಲಿ ಭಾಗಿಯಾಗುವಂತೆ ಕ್ರಮವಹಿಸಲು ನಿರ್ಧರಿಸಿವೆ. ಈ ಬೃಹತ್ ಜೈಲು ಭರೋ ಚಳುವಳಿ ಏಕೆ ಎಂದು ವಿವರಿಸುವ ಲೇಖನಗಳ ಸರಣಿಯಲ್ಲಿ ಮೊದಲ ಲೇಖನ.

ನವೆಂಬರ್ 18



ರೈತ-ಕಾರ್ಮಿಕರ ಬೃಹತ್ ಜೈಲ್ ಭರೊ ಏಕೆ ?

ಯು. ಬಸವರಾಜ್

ಬಹುರಾಷ್ಟ್ರೀಯ ಸಂಸ್ಥೆಗಳ ಪರವಾದ ಜಾಗತೀಕರಣದ ನೀತಿಗಳನ್ನು ಮತ್ತಷ್ಟು ವೇಗವಾಗಿ ಜಾರಿಗೊಳಿಸಲು, ದೇಶ ಹಾಗೂ ರಾಜ್ಯದಲ್ಲಿ ವ್ಯವಸಾಯ ಮತ್ತು ಭೂಮಿಯ ಪ್ರಶ್ನೆಯನ್ನು ಬಹುರಾಷ್ಟ್ರೀಯ ಸಂಸ್ಥೆಗಳ ಪರವಾಗಿ ಬದಲಾಯಿಸಲು, ಕೇಂದ್ರ ಹಾಗೂ ರಾಜ್ಯ ಸರಕಾರಗಳು ಗಂಭಿರವಾದ ಹೆಜ್ಜೆಗಳನ್ನಿಡುತ್ತಿವೆ. ಆ ಮೂಲಕ ದೇಶ ಹಾಗೂ ರಾಜ್ಯದಲ್ಲಿ ಭೂಮಿಯ ಪ್ರಶ್ನೆ ಮರಳಿ ಮುನ್ನೆಲೆಗೆ ಬರುತ್ತಿದೆ. ರಾಜ್ಯದಲ್ಲಿ ಭೂಮಿಯ ಪ್ರಶ್ನೆಯನ್ನು ಬಡವರು, ಉಳುವವರು ಮತ್ತು ದಲಿತರ ಪರವಾಗಿ ಇತ್ಯರ್ಥ ಪಡಿಸುವ ಗುರಿಯನ್ನು ಹೊಂದಿರುವ ಬಹುತೇಕ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು ಕೇಂದ್ರ ಹಾಗೂ ರಾಜ್ಯ ಸರಕಾರಗಳ ನಡೆಯನ್ನು ವಿರೋಧಿಸಿ, ಉಳುವವರ ಮತ್ತು ಬಡವರ ಪರವಾಗಿ ಇತ್ಯರ್ಥ ಪಡಿಸುವಂತೆ ಒತ್ತಾಯಿಸಿ ಚಳುವಳಿ ನಡೆಸಿವೆ.

ಕರ್ನಾಟಕ ಪ್ರಾಂತ ರೈತ ಸಂಘ ಮತ್ತು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘಗಳು ಇವುಗಳಲ್ಲಿ ಮುಂಚೂಣಿಯ ಸಂಘಟನೆಗಳಾಗಿವೆ. ಇವುಗಳು ಕಳೆದ ಏಳೆಂಟು ವರ್ಷಗಳಿಂದ ಬಡ-ರೈತರು, ಕೂಲಿಕಾರರು ಮತ್ತು ದಲಿತರ ಪರವಾಗಿ ಭೂ ಸುಧಾರಣಾ ಕಾನೂನು ತಿದ್ದುಪಡಿಯಾಗಬೇಕು. ಉಳುಮೆಯಲ್ಲಿ ಹಿತಾಸಕ್ತಿಯನ್ನು ಹೊಂದಿರುವ ದಲಿತರು ಸೇರಿದಂತಹ ಎಲ್ಲಾ ಬಡವರು ಸಾಗುವಳಿಯಲ್ಲಿ ತೊಡಗಿರುವ ಸರಕಾರಿ ಹಾಗೂ ಅರಣ್ಯ ಜಮೀನುಗಳಿಗೆ ಹಕ್ಕುಪತ್ರ ನೀಡಬೇಕು. ಜಾಗತೀಕರಣದ ಹಿನ್ನೆಲೆಯಲ್ಲಿ ನಿವೇಶನದ ಬೆಲೆಗಳು ಗಗನಕ್ಕೇರಿವೆ. ಅವುಗಳನ್ನು ಖರೀದಿಸಿ ವಾಸಕ್ಕೆ ಮನೆ ಕಟ್ಟಿಕೊಳ್ಳಲು ಇವರಿಗೆ ಸಾದ್ಯವಿಲ್ಲವಾದ್ದರಿಂದ ರಾಜ್ಯದ ಎಲ್ಲಾ ಬಡವರಿಗೆ ಉಚಿತವಾಗಿ ಹಿತ್ತಲು ಸಹಿತ ನಿವೇಶನದಲ್ಲಿ ಮನೆಯನ್ನು ಕಟ್ಟಿಸಿಕೊಡುವಂತೆ ಸರಕಾರದ ಮೇಲೆ ಒತ್ತಡ ಹೇರುತ್ತಾ ಬಂದಿವೆ. ಇವುಗಳ ಜೊತೆ ಇಂತಹದ್ದೇ ಪ್ರಶ್ನೆಗಳಿಗಾಗಿ, ಕರ್ನಾಟಕ ರಾಜ್ಯ ದೇವದಾಸಿ ಮಹಿಳೆಯರ ವಿಮೋಚನಾ ಸಂಘ, ದಲಿತ ಹಕ್ಕುಗಳ ಸಮಿತಿ–ಕರ್ನಾಟಕ, ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ, ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್, ಸಿಐಟಿಯುಗೆ ಸೇರ್ಪಡೆಗೊಂಡ ವಿವಿಧ ಕಾರ್ಮಿಕ ಸಂಘಗಳು ಚಳುವಳಿಯನ್ನು ನಡೆಸಿವೆ. ಅದೇ ರೀತಿ ಬೆಂಗಳೂರು, ಮಂಗಳೂರು, ಕಲಬುರಿಗಿ, ಹೊಸಪೇಟೆ, ಮುಂತಾದೆಡೆ ಅಸ್ಥಿತ್ವದಲ್ಲಿರುವ ನಿವೇಶನ ರಹಿತರ ಹೋರಾಟ ಸಮಿತಿಗಳು ದಶ ಸಾವಿರಗಟ್ಟಲೆ ಲೆಕ್ಕದಲ್ಲಿ ನಿವೇಶನಕ್ಕೆ ಅರ್ಜಿ ಸಲ್ಲಿಸಿವೆ. ಈ ಎಲ್ಲಾ ಸಂಘಗಳು ಇತರೇ ದಲಿತ ಹಾಗೂ ರೈತ ಮತ್ತು ಕೂಲಿಕಾರರ ಸಂಘಗಳ ಜೊತೆ ಹಲವು ಬಾರಿ ಜಂಟಿಯಾಗಿಯೂ ಪ್ರತಿಭಟನೆ ನಡೆಸಿವೆ.

ಕೇಂದ್ರ ಹಾಗೂ ರಾಜ್ಯ ಸರಕಾರಗಳು ಜನತೆಯ ಚಳುವಳಿಗೆ ಮನ್ನಣೆ ಕೊಡದೇ, ಈ ಕುರಿತು ಉದಾಸೀನ ಭಾವನೆಯನ್ನು ತೋರುತ್ತಲೇ, ತನ್ನ ಜಾಗತಿಕರಣದ ದಾಳಿಯನ್ನು ಮುಂದುವರೆಸುತ್ತಲೇ ಇರುವುದರಿಂದ, ಇದೀಗ ಕರ್ನಾಟಕ ಪ್ರಾಂತ ರೈತ ಸಂಘ, ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ, ಸಿಐಟಿಯು ಮತ್ತು ಅದಕ್ಕೆ ಸೇರ್ಪಡೆಗೊಂಡ ವಿವಿದ ಅಂಗನವಾಡಿ, ಬಿಸಿಯೂಟ, ಪಂಚಾಯತ್, ಹಮಾಲಿ, ಕಟ್ಟಡ ಮುಂತಾದ ಕಾರ್ಮಿಕ ಸಂಘಗಳು ಮತ್ತು ದಲಿತ ಹಕ್ಕುಗಳ ಸಮಿತಿ–ಕರ್ನಾಟಕ, ಕರ್ನಾಟಕ ರಾಜ್ಯ ದೇವದಾಸಿ ಮಹಿಳೆಯರ ವಿಮೋಚನಾ ಸಂಘ, ಕರ್ನಾಟಕ ರಾಜ್ಯ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿ, ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ, ಬಾರತ ವಿದ್ಯಾರ್ಥಿ ಫೆಡರೇಷನ್, ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ ಮುಂತಾದ 15ಕ್ಕೂ ಹೆಚ್ಚು ಸಂಘಟನೆಗಳು ಇತ್ತೀಚೆಗೆ ಬೆಂಗಳೂರಿನಲ್ಲಿ ಜಂಟಿ ಸಭೆ ನಡೆಸಿ ಬಡವರು, ದಲಿತರ ಪರವಾಗಿ, ಭೂಮಿ ಹಾಗೂ ನಿವೇಶನ ಸಹಿತ ವಸತಿ ಪ್ರಶ್ನೆಗಾಗಿ ಹೋರಾಟವನ್ನು ತೀವ್ರ ಹಾಗೂ ವ್ಯಾಪಕಗೊಳಿಸಲು ನಿರ್ಧರಿಸಿವೆ. ಮುಂಬರುವ ನವೆಂಬರ್ 18ರಂದು ರಾಜ್ಯದಾದ್ಯಂತ ಎಲ್ಲಾ ತಾಲೂಕಾ ಕೇಂದ್ರಗಳಲ್ಲಿ ಸಾವಿರಾರು ಜನರನ್ನು ಅಣಿ ನೆರೆಸುವ ಮೂಲಕ ರಾಜ್ಯದಲ್ಲಿ ಕನಿಷ್ಟ ಒಂದು ಲಕ್ಷ ಜನರನ್ನು ಹೋರಾಟದಲ್ಲಿ ತೊಡಗಿಸಲು ಹಾಗೂ ಅವರಲ್ಲಿ ಸುಮಾರು 10 ಸಾವಿರ ಜನರನ್ನು ಜೈಲು ತುಂಬುವ ಚಳುವಳಿಯಲ್ಲಿ ಭಾಗಿಯಾಗುವಂತೆ ಕ್ರಮವಹಿಸಲು ನಿರ್ಧರಿಸಿವೆ. ಅದೇ ರೀತಿ, ಇದರ ಜಾರಿಗಾಗಿ ಜಿಲ್ಲೆ ಮತ್ತು ತಾಲೂಕಾಗಳಲ್ಲಿ ಜಂಟಿ ಸಭೆ ಮತ್ತು ಸಮಾವೇಶಗಳನ್ನು ಸಂಘಟಿಸಲು ಮತ್ತು ಜನರ ನಡುವೆ ಪ್ರಚಾರ ಜಾಥಾಗಳನ್ನು ಸಂಘಟಿಸಲು ಕ್ರಮವಹಿಸಿವೆ. ಹೀಗಾಗಿ ಮುಂಬರುವ ದಿನಗಳಲ್ಲಿ ಭೂಮಿಯ ಪ್ರಶ್ನೆ ಮುನ್ನೆಲೆಗೆ ಬರಲಿದೆ.



ಗ್ರಾಮ, ಬೇಸಾಯಗಳಿಂದಾಚೆಗೆ ರೈತ–ಕೂಲಿಕಾರರನ್ನು ದೂಡುವ ಹುನ್ನಾರ

ಭೂಮಿ ಮತ್ತು ಬೇಸಾಯದ ಪ್ರಶ್ನೆಯನ್ನು ಬಹುರಾಷ್ಟ್ರೀಯ ಸಂಸ್ಥೆಗಳ ಪರವಾಗಿ ಇತ್ಯರ್ಥ ಪಡಿಸಿದಲ್ಲಿ ದೇಶ ಅಭಿವೃದ್ಧಿಯಾಗಲಿದೆ ಎಂಬ ಮಂತ್ರವನ್ನು ಜಪಿಸುತ್ತಾ, ಕೇಂದ್ರ ಹಾಗೂ ರಾಜ್ಯ ಸರಕಾರಗಳು ಕಳೆದ 1994 ರಿಂದ ಜಾರಿಗೆ ತರುತ್ತಿರುವ ಬಹುರಾಷ್ಟ್ರೀಯ ಸಂಸ್ಥೆಗಳ ಪರವಾಧ ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣದ ನೀತಿಗಳು ಕೃಷಿಯೊಳಗೆ ಗಂಭೀರವಾದ ಬಿಕ್ಕಟ್ಟನ್ನು ಉಂಟುಮಾಡಿವೆ. ಮುಖ್ಯವಾಗಿ, ಈ ನೀತಿಗಳಿಂದ ವ್ಯವಸಾಯದಲ್ಲಿ ಹೂಡಲಾಗುವ ಬೀಜ, ಗೊಬ್ಬರ, ಕ್ರಿಮಿನಾಶಕ, ಕೃಷಿ ಉಪಕರಣಗಳ ವ್ಯಾಪಕವಾದ ಬೆಲೆ ಏರಿಕೆಗಳು ಮತ್ತು ಸಾಲ ಹಾಗೂ ಅದರ ಬಡ್ಡಿಯ ದರ ಏರಿಕೆಯು ತಲಾ ಎಕರೆಯ ಬೆಳೆಗಳ ಉತ್ಪಾದನಾ ವೆಚ್ಚವನ್ನು ಅಗಾಧವಾಗಿ ಹೆಚ್ಚಿಸಿವೆ. ಅದೇ ಸಂದರ್ಭದಲ್ಲಿ ಪ್ರತಿನಿತ್ಯ ಏರುತ್ತಿರುವ ಅಗತ್ಯವಸ್ತುಗಳ ಬೆಲೆಗಳು ವ್ಯವಸಾಯದಲ್ಲಿ ತೊಡಗಿರುವ ಕುಟುಂಬಗಳ ಅಗತ್ಯ ಜೀವನ ವೆಚ್ಚವನ್ನು ಕೂಡಾ ದೊಡ್ಡ ಪ್ರಮಾಣದಲ್ಲಿ ಹೆಚ್ಚಿಸಿವೆ.

ಕೇಂದ್ರ ಹಾಗೂ ರಾಜ್ಯ ಸರಕಾರಗಳು ತಾವು ಕೃತಕವಾಗಿಯೇ ಉಂಟು ಮಾಡಿರುವ ಕೃಷಿ ಬಿಕ್ಕಟ್ಟನ್ನು, ರೈತರು ಹಾಗೂ ಬಹುತೇಕ ಗ್ರಾಮೀಣ ದುಡಿಯುವ ಜನತೆಯನ್ನು, ವ್ಯವಸಾಯ ಮತ್ತು ಗ್ರಾಮಗಳಾಚೆ ದೂಡುವ ಮೂಲಕ ಹಾಗೂ ವ್ಯವಸಾಯವನ್ನು ದೊಡ್ಡ ದೊಡ್ಡ ಕಂಪೆನಿಗಳಿಗೆ ವಹಿಸಿಕೊಡುವ ಮೂಲಕ ಪರಿಹರಿಸಲು ಕ್ರಮವಹಿಸುತ್ತಿವೆ. ಇದೆಲ್ಲಾ ಪೂರ್ವ ಯೋಜಿತವೇ ಆಗಿತ್ತು. ಕೃತಕವಾಗಿ ಕೃಷಿ ರಂಗದಲ್ಲಿ ಉಂಟು ಮಾಡಲಾದ ಬಿಕ್ಕಟ್ಟು ಬಹುರಾಷ್ಟ್ರೀಯ ಸಂಸ್ಥೆಗಳಿಗೆ ಕೃಷಿ ರಂಗವನ್ನು ವಹಿಸುವ ಹುನ್ನಾರದಿಂದಾಗಿಯೆ ಮಾಡಲಾಗುತ್ತಿತ್ತು

ಇದು ಹೀಗಿರುವಾಗಲೇ, ವ್ಯಾಪಕ ಸಹಾಯಧನ ಹೊಂದಿರುವ ಅತ್ಯಂತ ಆಧುನಿಕ ಬೇಸಾಯದಲ್ಲಿ ಉತ್ಪಾದಿತಗೊಳ್ಳುವ ಅಗ್ಗದರದ ವಿದೇಶಿ ಕೃಷಿ ಉತ್ಪನ್ನಗಳು, ವ್ಯಾಪಕವಾಗಿ ದೇಶೀಯ ಮಾರುಕಟ್ಟೆ ಪ್ರವೇಶಿಸಲು ಅವಕಾಶ ನೀಡಿರುವುದರಿಂದ, ಅಂತಹ ಅಗ್ಗದರದ ವಿದೇಶಿ ಕೃಷಿ ಉತ್ಪನ್ನಗಳ ಜೊತೆ ನಮ್ಮ ರೈತರು ಬೆಳೆದ ದುಬಾರಿ ಬೆಲೆಯ ಕೃಷಿ ಉತ್ಪನ್ನಗಳು ಸ್ಪರ್ಧಿಸಲಾಗದೇ ಸೋತು, ಕುಸಿದ ಬೆಲೆಗಳಿಗೆ ಮಾರಲ್ಪಡುವುದರಿಂದ ನಮ್ಮ ವ್ಯವಸಾಯ ಗಂಭೀರವಾದ ನಷ್ಟದಲ್ಲಿ ಮುಳುಗಿದೆ.

ಇದು, ದೇಶದಾದ್ಯಂತ ನಮ್ಮ ರೈತರಿಗೆ ತಮ್ಮ ಕುಟುಂಬದಲ್ಲಿ ಬೆಳೆಯುತ್ತಿರುವ ಸಾಲ ತೀರಿಸಲು ಮತ್ತು ಕೃಷಿಯನ್ನು ಲಾಭದಾಯಕವಾಗಿ ಮುನ್ನಡೆಸಲು ಬೇರೆ ಯಾವ ಅವಕಾಶಗಳು ಕಾಣದೇ ಹೋದುದರಿಂದ, ಅವರು ದೇಶದಾದ್ಯಂತ ದೊಡ್ಡ ಪ್ರಮಾಣದಲ್ಲಿ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ದೇಶದಲ್ಲಿ ಆತ್ಮಹತ್ಯೆ ಮಾಡಿಕೊಂಡಿರುವ ರೈತರ ಪ್ರಮಾಣ ಇದೀಗ 3.50ಲಕ್ಷವನ್ನು ದಾಟಿದೆ. ಪ್ರತಿ 26 ನಿಮಿಷಕ್ಕೊಬ್ಬ ರೈತ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾನೆ. ಸಾಲಕ್ಕೆ ಜಮೀನುಗಳನ್ನು ಮಾರಾಟ ಮಾಡಿ ಕೂಲಿಕಾರರ ಪಡೆಗೆ ಸೇರುವುದು ಇಲ್ಲವೇ ಬೀಳು ಬಿಡುವುದು ನಡೆದಿದೆ. ಅದೇ ರೀತಿ, ಕೃಷಿಯಲ್ಲಿ ಆದುನಿಕ ತಂತ್ರಜ್ಞಾನ ಪ್ರವೇಶಿಸುತ್ತಿರುವುದರಿಂದ ಕೂಲಿ ಕೆಲಸ ಗಣನೀಯವಾಗಿ ಕಡಿತಗೊಂಡಿದ್ದು ಅಲ್ಲಿನ ಆದಾಯ ಕೃಷಿ ಕೂಲಿಕಾರರಿಗೆ ಸಾಲದಾಗಿದೆ. ಹೊಟ್ಟೆ ಪಾಡಿಗಾಗಿ ಮತ್ತಿತರೇ ಉದ್ಯೋಗ ಹರಿಸಿ ನಡೆವ ವಲಸೆ ಬೆಳೆದಿದೆ.

ಈ ಕಾರಣದಿಂದ ಗ್ರಾಮೀಣ ಪ್ರದೇಶದಲ್ಲಿ ಒಂದೆಡೆ ಕೆಲವೆ ಕೆಲವು ಭಾರೀ ಭೂಮಾಲಕ ಬಂಡವಾಳದಾರರು ಮತ್ತು ಇನ್ನೊಂದೆಡೆ ಭಾರಿ ಪ್ರಮಾಣದ ಕಡು ಬಡವರ ಸಂಖ್ಯೆ ಬೆಳೆಯುತ್ತಿದೆ ಮತ್ತು ಅವರ ನಡುವಿನ ಅಂತರ ಅಗಾಧವಾಗಿ ಬೆಳೆದಿದೆ. ಇದರಿಂದಾಗಿ ಅಂದರೇ, ದಾರಿದ್ರ್ಯ ಮತ್ತು ನಿರುದ್ಯೋಗ ಬೆಳೆಯುತ್ತಿರುವುದರಿಂದ ಮತ್ತು ಆದಾಯದ ಕೊರತೆ ದಿನೇ ದಿನೇ ಹೆಚ್ಚುತ್ತಿರುವುದರಿಂದ, ಕೊಬ್ಬಿದ ಭೂಮಾಲಕ ಬಂಡವಾಳದಾರರ ದೌರ್ಜನ್ಯಗಳು ದಲಿತರು ಮತ್ತು ಮಹಿಳೆಯರ ಮೇಲೆ ವ್ಯಾಪಕಗೊಂಡಿವೆ.

ಹೀಗೆ ಕೇಂದ್ರ ಹಾಗೂ ರಾಜ್ಯ ಸರಕಾರಗಳು ಜಾಗತೀಕರಣ ನೀತಿಗಳ ಮೂಲಕ ತಾವು ಕೃತಕವಾಗಿಯೇ ಉಂಟು ಮಾಡಿರುವ ಕೃಷಿ ಬಿಕ್ಕಟ್ಟನ್ನು, ರೈತರು ಹಾಗೂ ಬಹುತೇಕ ಗ್ರಾಮೀಣ ದುಡಿಯುವ ಜನತೆಯನ್ನು, ವ್ಯವಸಾಯ ಮತ್ತು ಗ್ರಾಮಗಳಾಚೆ ದೂಡುವ ಮೂಲಕ ಹಾಗೂ ವ್ಯವಸಾಯವನ್ನು ದೊಡ್ಡ ದೊಡ್ಡ ಕಂಪೆನಿಗಳಿಗೆ ವಹಿಸಿಕೊಡುವ ಮೂಲಕ ಪರಿಹರಿಸಲು ಕ್ರಮವಹಿಸುತ್ತಿವೆ. ಇದೆಲ್ಲಾ ಪೂರ್ವ ಯೋಜಿತವೇ ಆಗಿತ್ತು. ಕೃತಕವಾಗಿ ಕೃಷಿ ರಂಗದಲ್ಲಿ ಉಂಟು ಮಾಡಲಾದ ಬಿಕ್ಕಟ್ಟು ಬಹುರಾಷ್ಟ್ರೀಯ ಸಂಸ್ಥೆಗಳಿಗೆ ಕೃಷಿ ರಂಗವನ್ನು ವಹಿಸುವ ಹುನ್ನಾರದಿಂದಾಗಿಯೆ ಮಾಡಲಾಗುತ್ತಿತ್ತು ಎಂಬುದು ಗುಟ್ಟಾಗಿದ್ದ ವಿಚಾರವೇನಾಗಿರಲಿಲ್ಲ.

ಕೇಂದ್ರ ಸರಕಾರದ ಈಚೆಗಿನ ಹೊಸದಾಳಿಗಳು

ಇದೀಗ ಮುಖ್ಯವಾಗಿ ಕೇಂದ್ರ ಸರಕಾರ, ಕೃಷಿಯಿಂದ ರೈತರು ಹಾಗೂ ಕೃಷಿಕೂಲಿಕಾರರನ್ನು ಮತ್ತಷ್ಟು ವೇಗವಾಗಿ ಹೊರದೂಡಲು ಇನ್ನೂ ಹಲವು ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. ಅದರಲ್ಲಿ ಒಂದನೆಯದು, ದೇಶದಾದ್ಯಂತ ವ್ಯಾಪಕವಾಗಿ ಬಲವಂತದ ಭೂಸ್ವಾಧೀನ ಮಾಡುವುದು. ಮುಂಬರುವ 20 ವರ್ಷಗಳಲ್ಲಿ ದೆಹಲಿ–ಅಹಮದಾಬಾದ್, ಅಹಮದಾಬಾದ್–ಮುಂಬೈ, ಮುಂಬೈ–ಬೆಂಗಳೂರು, ಬೆಂಗಳೂರು– ಚೆನ್ನೈ, ಚೆನ್ನೈ– ಕೊಲ್ಕತ್ತಾ, ಮತ್ತು ಕೊಲ್ಕತ್ತಾ– ದೆಹಲಿ ಕೈಗಾರಿಕಾ ಕಾರಿಡಾರ್‌ಗಳ ನಿರ್ಮಾಣಕ್ಕಾಗಿ, ಇದರ ಸಾರಿಗೆ ಸಂಪರ್ಕ ಮತ್ತು ನಗರ ನಿರ್ಮಾಣಕ್ಕಾಗಿ



ಚೆನ್ನೈ ಕಾರಿಡಾರ್ ವಿರೋಧಿಸಿ ಮಾಲೂರಿನಲ್ಲಿ ನಡೆದ ರೈತರ ಸಭೆ

ಅಪಾರ ಪ್ರಮಾಣದಲ್ಲಿ ಭೂಸ್ವಾಧೀನ ಮಾಡಲು ನಿರ್ಧರಿಸಿದೆ. ಅದರಲ್ಲಿ ದೆಹಲಿ–ಮುಂಬೈ ಕಾರಿಡಾರ ಒಂದರಲ್ಲಿಯೇ, ಸುಮಾರು 1.45ಲಕ್ಷ ಚ.ಕಿ.ಮೀ ಪ್ರದೇಶ (ಸುಮಾರು 3.50 ಕೋಟಿ ಎಕ–ರೆ) ಸ್ವಾಧೀನ ಮಾಡಲಾಗುವುದು ಎನ್ನಲಾಗಿದೆ. ಇದು ಸರಿ ಸುಮಾರು 10 ಸಾವಿರ ಗ್ರಾಮಗಳ ಭೂ ಪ್ರದೇಶದಷ್ಟಾಗಲಿದೆ. ಈ ಹಿಂದೆಯೇ ಕೇಂದ್ರ ಸರಕಾರ ದೇಶದ ಎಲ್ಲಾ ರಾಷ್ಟ್ರೀಯ ಹೆದ್ದಾರಿಗಳ ಮತ್ತು ರೈಲ್ವೇ ಲೈನುಗಳ ಇಕ್ಕೆಲಗಳಲ್ಲಿ (ಎರಡೂ ಕಡೆ)ತಲಾ ಒಂದು ಕಿ.ಮೀ ಆಚೆಯವರೆಗೂ ಭೂಸ್ವಾಧೀನ ಮಾಡುವ ಇಂಗಿತವನ್ನು ಭೂ ಸ್ವಾಧೀನ ಕಾಯ್ದೆಯ ತಿದ್ದುಪಡಿ ಸುಗ್ರೀವಾಜ್ಞೆಯಲ್ಲಿ ವ್ಯಕ್ತಪಡಿಸಿದ್ದನ್ನು ಇಲ್ಲಿ ಗಮನಿಸಬಹುದಾಗಿದೆ. ಅದೇ ರೀತಿ, ದೇಶದಾದ್ಯಂತ ಎಲ್ಲ ರಾಜ್ಯಗಳಲ್ಲಿರುವ ಸರಕಾರಿ ಜಮೀನುಗಳನ್ನು ಸರ್ವೇ ಮಾಡಿ ಅದನ್ನು ಅಭಿವೃದ್ಧಿ ಪಡಿಸಿ ಸಾಗುವಳಿಯಲ್ಲಿ ತೊಡಗಿರುವ ಬಡಪಾಯಿ ಕುಟುಂಬಗಳಿಂದ ಅವುಗಳನ್ನು ಬಿಡಿಸಿ ಅಂದರೇ ಬಡವರನ್ನು ಬಲವಂತವಾಗಿ ಒಕ್ಕಲೆಬ್ಬಿಸಿ ಕಾಯ್ದಿರಿಸಲು ಕೇಳಲಾಗಿತ್ತು. ಇಂತಹ ಜಮೀನು ಕೂಡಾ 1.5ಕೋಟಿ ಎಕರೆಗೂ ಅಧಿಕ ಎನ್ನಲಾಗಿದೆ.

ಅದೇ ರೀತಿ ದೇಶದಾದ್ಯಂತ ಕೃಷಿ ಜಮೀನುಗಳನ್ನು ದೊಡ್ಡ ಪ್ರಮಾಣದಲ್ಲಿ ಗುತ್ತಿಗೆಗೆ ಪಡೆದು ದೊಡ್ಡ ದೊಡ್ಡ ಕಂಪೆನಿಗಳು ಗುತ್ತಿಗೆ ಬೇಸಾಯದಲ್ಲಿ ತೊಡಗಲು ಅನುವಾಗುವಂತೆ ಭೂ ಸುದ–ಾರಣಾ ಕಾನೂನುಗಳಿಗೆ ತಿದ್ದುಪಡಿ ಮಾಡುವ ಪ್ರಯತ್ನವನ್ನು ಗಂಭೀರವಾಗಿ ನಡೆಸಿದೆ. ಇದು ಕೂಡಾ ಹಾಲಿ ಕೆಲ 2–3 ಎಕರೆಗಳಷ್ಟು ಗುತ್ತಿಗೆ ಬೇಸಾಯದಲ್ಲಿ ತೊಡಗಿರುವ ಕೋಟ್ಯಾಂತರ ಬಡ ರೈತರು, ಕೂಲಿಕಾರರಿಗೆ ಗುತ್ತಿಗೆ ಬೇಸಾಯದ ಭದ್ರತೆ ಒದಗಿಸದೇ ಅವರನ್ನು ನಿರ್ಧಾಕ್ಷಿಣ್ಯವಾಗಿ ವ್ಯವಸಾಯದಿಂದ ಹೊರದೂಡಲಿದೆ.

ಅಲ್ಲದೆ, ದೇಶದಾದ್ಯಂತ ಪರಿಸರ ಸಂರಕ್ಷಣೆ–ಯ ಮತ್ತು ಪಶ್ಚಿಮ ಘಟ್ಟ ಪ್ರದೇಶದ ಸೂಕ್ಷ್ಮ ಜೈವಿಕ ವಲಯದ ಸಂರಕ್ಷಣೆಯ ಹೆಸರಿನಲ್ಲಿ ಅರಣ್ಯವಾಸಿಗಳನ್ನು ದೊಡ್ಡ ಪ್ರಮಾಣದಲ್ಲಿ ಒಕ್ಕಲೆಬ್ಬಿಸುವ ಆ ವಲಯದಲ್ಲಿ ಬರುವ ನೂರಾರು ಗ್ರಾಮಗಳ ಅಭಿವೃದ್ಧಿಯನ್ನು ನಿರ್ಬಂಧಗೊಳಿಸಿ ತೆರವುಗೊಳಿಸಲು ಮುಂದಾಗುತ್ತಿದೆ. ದೇಶದಾದ್ಯಂತ ಅರಣ್ಯ ಭೂಮಿಸಾಗುವಳಿಯಲ್ಲಿ ತೊಡಗಿರುವ ಮತ್ತು ವಾಸಿಸುತ್ತಿರುವ ಹಾಗೂ ಅರಣ್ಯ ಹಕ್ಕುಗಳನ್ನು ಹೊಂದಿದ್ದ ಇತರೇ ಕೋಟ್ಯಾಂತರ ಅರಣ್ಯವಾಸಿಗಳಿಗೆ ಹಕ್ಕು ಪತ್ರ ನೀಡಲು ಮೂರು ತಲೆಮಾರುಗಳ ಅನುಭವ ಹೊಂದಿದ ದಾಖಲಾತಿ ನೀಡುವಂತೆ ಕೇಳಿ ಒಕ್ಕಲೆಬ್ಬಿಸುವ ಅಥವಾ ಅರಣ್ಯ ಹಕ್ಕು ನಿರಾಕರಿಸುವ ಪ್ರಯತ್ನ ನಡೆಸಿದೆ.


ರಾಜ್ಯ ಸರಕಾರದ ಈಚೆಗಿನ ಹೊಸ ದಾಳಿಗಳು :

ಕರ್ನಾಟಕ ರಾಜ್ಯ ಸರಕಾರವೂ ಕೂಡಾ ತಾನೇನೂ ಕಡಿಮೆ ಇಲ್ಲವೆಂದು ಹಲವು ಕ್ರಮಗಳಿಗೆ ಮುಂದಾಗಿದೆ. ಮೂಲ ಭೂ ಸುಧಾರಣಾ ಕಾಯ್ದೆ–1961 ಕ್ಕೆ ಭೂ ಸುಧಾರಣಾ ತಿದ್ದುಪಡಿ ಕಾಯ್ದೆ–2015–ರ ಹೆಸರಿನಲ್ಲಿ ತಿದ್ದುಪಡಿ ತಂದು, 25 ಲಕ್ಷಕ್ಕಿಂತಲೂ ಕಡಿಮೆ ಆದಾಯ ಹೊಂದಿರುವ ಎಲ್ಲರೂ, ಅದು ಕೃಷಿಯಲ್ಲಿ ಆಸಕ್ತಿ ಇಲ್ಲದ ಶ್ರೀಮಂತರೂ, ರಾಜಕಾರಣಿಗಳು, ಅಧಿಕಾರಿಗಳು ಮುಂತಾದವರ ಕುಟುಂಬಗಳು ಕೂಡಾ, ಸಾಲದಿಂದ ಬೇಸ್ತು ಬಿದ್ದ ಮತ್ತು ನಷ್ಟಭರಿತ ಬೇಸಾಯದಿಂದ ರೋಸಿ ಹೋದ ರೈತ ಕುಟುಂಬಗಳಿಂದ ಸಾವಿರಾರು ಎಕರೆ ಜಮೀನನ್ನು ಖರೀದಿಸಿ, ಆಸ್ತಿಯಾಗಿ ಹೊಂದಲು ಮತ್ತು ಅವರಲ್ಲಿನ ಕಪ್ಪು ಹಣವನ್ನು ಬಿಳಿಯಾಗಿ ಬದಲಿಸಿಕೊಳ್ಳಲು ಅವಕಾಶ ಮಾಡಿಕೊಟ್ಟಿದೆ. ಖಂಡಿತಾ, ಇದರಿಂದ ಬಸವಳಿದ ರೈತರ ಕೈಗಳಿಂದ ಈ ಜನಗಳ ಕೈಗೆ, ಕೃಷಿ ಭೂಮಿ ಕೆಲವೇ ದಿನಗಳಲ್ಲಿ ವ್ಯಾಪಕವಾಗಿ ವರ್ಗಾವಣೆಗೊಳ್ಳಲಿದೆ. ಮಾತ್ರವಲ್ಲ, ಮುಂದೆ ಅವು ಬಹುರಾಷ್ಟ್ರೀಯ ಸಂಸ್ಥೆಗಳ ಗುತ್ತಿಗೆ ಬೇಸಾಯಕ್ಕೆ ಸಿಗಲಿದೆ.

ಅದೇ ರೀತಿ, ಕನಿಷ್ಟ 500 ಎಕರೆವರೆಗೆ ಕೈಗಾರಿಕೆ ಮತ್ತಿತರೇ ಉದ್ದೇಶಗಳಿಗಾಗಿ, ಕಂಪೆನಿಗಳು ಭೂ ಸ್ವಾಧೀನ ಕಾಯ್ದೆ–2013 ರ ಕಾನೂನು ಮೀರಿ, ರೈತರ ಜಮೀನುಗಳನ್ನು ಬೇಕಾಬಿಟ್ಟಿ ದರದಲ್ಲಿ ಬಲವಂತವಾಗಿ ಖರೀದಿಸಲು ಅನುಕೂಲವಾಗುವಂತೆ ಕರ್ನಾಟಕ ಸರಕಾರ ಈಚೆಗೆ 2016ರ ಭೂ ಸ್ವಾಧೀನ ಆದೇಶವನ್ನು ಹೊರಡಿಸಿದೆ. ಇದು ದೊಡ್ಡ ದೊಡ್ಡ ಕಂಪೆನಿಗಳು, ತಮ್ಮ ಸಿಬ್ಬಂದಿಗಳ ಮೂಲಕ ಖರೀದಿಸಿ ದೊಡ್ಡ ಪ್ರಮಾಣದಲ್ಲಿ ಜಮೀನು ಹೊಂದಲು ಅವಕಾಶ ನೀಡಲಿದೆ. ಇದು ರೈತರಿಗೆ ಉತ್ತಮ ಮಾರುಕಟ್ಟೆ ಬೆಲೆ ಮತ್ತು ಅವರ ಮಕ್ಕಳಿಗೆ ಉದ್ಯೋಗ ನೀಡುವ ಅಂಶಗಳಿಂದ ಕಂಪೆನಿಗಳಿಗೆ ರಿಯಾಯಿತಿ ನೀಡಿ ನೆರವಾಗಲಿದೆ? ಅದೇ ರೀತಿ, ಇದೇ ಅಂಶಗಳಲ್ಲಿ ಭೂಮಿ ಕಳೆದು ಕೊಳ್ಳುವ ರೈತರಿಗೆ ಮತ್ತು ಅವರ ಕುಟುಂಬಗಳಿಗೆ ನಾಮ ಹಾಕಲಿದೆ.

ಕೇಂದ್ರ ಸರಕಾರಕ್ಕಿಂತ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ, ರಾಜ್ಯದ ಭೂಮಾಲಕ ಬಂಡವಾಳದಾರರಿಗೆ ಆಧುನಿಕ ಬೇಸಾಯದ ಮಾದರಿಗಳನ್ನೊದಗಿಸಲು, ರಾಜ್ಯದಲ್ಲಿ ವಿಶೇಷ ಕೃಷಿ ವಲಯಗಳನ್ನು (ವಿಶೇಷ ಆರ್ಥಿಕ ವಲಯಗಳಂತೆ) ಸಾವಿರಾರು ಎಕರೆಗಳ ಪ್ರದೇಶದಲ್ಲಿ ಸ್ಥಾಪಿಸುವುದಾಗಿ ರಾಜ್ಯ ಬಜೆಟ್‌ನಲ್ಲಿ ಘೋಷಿಸಿದೆ.

ಹಾಗೇನೇ, ಕಳೆದ 7–8 ದಶಕಗಳಿಂದ ಸರಕಾರದ ವಿವಿಧ ಹೆಸರಿನ ಕೆರೆ, ಹಳ್ಳಾ, ನದಿ ದಂಡೆ, ಗೋಮಾಳ, ಹುಲ್ಲುಗಾವಲು, ಕುದುರೆ ಕಾವಲು, ಅಮೃತ ಮಹಲು, ಈಚಲುವನ, ಅರಣ್ಯ, ಕುಮ್ಕಿ, ಪೈಸಾರಿ, ಗುಂಡು ತೋಪು ಜಮೀನುಗಳನ್ನು ಮತ್ತು ನಗರ ವ್ಯಾಪ್ತಿಯ ಬಂಜರು ಜಮೀನುಗಳನ್ನು ದಶ ಲಕ್ಷಾಂತರ ಬಡ ಹಾಗೂ ದಲಿತ ಕುಟುಂಬಗಳು ಅಭಿವೃದ್ಧಿ ಪಡಿಸಿವೆ. ಇವನ್ನು ವಿತರಿಸಲು ವಾಸ್ತವಿಕ ಗಣತಿ ನಡೆಸಿ, ಭೂ ಕಂದಾಯ ಕಾಯ್ದೆಗೆ ಅಗತ್ಯ ತಿದ್ದುಪಡಿ ತಂದು, ಹಕ್ಕುಪತ್ರಗಳನ್ನು ನೀಡುವಂತೆ ಸೂಕ್ತ ಕ್ರಮಗಳನ್ನು ಕೈಗೊಳಲು, ಕಳೆದ ಒಂದು ದಶಕದಿಂದ ಇವರು ಮತ್ತು ರೈತ–ಕೂಲಿಕಾರರ ಸಂಘಗಳು ರಾಜ್ಯ ಸರಕಾರವನ್ನು ಒತ್ತಾಯಿಸುತ್ತಿವೆ. ಆದರೆ, ಈ ಅವಧಿಯ ಎಲ್ಲಾ ಸರಕಾರಗಳು ಬಡವರಿಗೆ ಅವರು ಅಭಿವೃದ್ಧಿ ಪಡಿಸಿದ ಜಮೀನನ್ನು ನೀಡಲು ನಿರಾಕರಿಸಿವೆ. ವಿವಿಧ ನೆಪಗಳನ್ನು ಹೂಡಿ ಸುಮಾರು 40 ಲಕ್ಷ ಎಕರೆಯಷ್ಟಿರುವ ಬಡವರು ಅಭಿವೃದ್ಧಿ ಪಡಿಸಿದ ಈ ಜಮೀನುಗಳನ್ನು ವಾಪಾಸು ಪಡೆದು, ಭೂ ಬ್ಯಾಂಕಿಗೆ ಸೇರ್ಪಡೆ ಮಾಡುವ ಹುನ್ನಾರವನ್ನು ನಡೆಸಿವೆ. ಈ ಎಲ್ಲಾ ಬಡ ರೈತರನ್ನು ಭೂ ಕಬಳಿಕೆದಾರರೆಂದು ಹೆಸರಿಸಿ ಅವರು ಜಮೀನುಗಳನ್ನು ಬಿಡದೇ ಹೋದಲ್ಲಿ ಭೂಕಬಳಿಕೆ ನಿಷೇಧ ಕಾಯ್ದೆಯ ಪ್ರಕಾರ ಶಿಕ್ಷಿಸುವುದಾಗಿ ಈ ಸರಕಾರ ಬೆದರಿಸುತ್ತಿದೆ.



ಎಕ್ಸ್‌ಪ್ರೆಸ್ ಕಾರಿಡಾರ್ ರಸ್ತೆ ನಕ್ಷೆ

ಮುಂಬರುವ 20 ವರ್ಷಗಳಲ್ಲಿ ಪ್ರಮುಖ ಮಹಾನಗರಗಳ ಕಾರಿಡಾರ್‌ಗಳ ನಿರ್ಮಾಣಕ್ಕಾಗಿ, ಸುಮಾರು 3 ಕೋಟಿ ಎಕರೆ ಸ್ವಾಧೀನ ಮಾಡಲಾಗುವುದು. ಎಲ್ಲಾ ರಾಷ್ಟ್ರೀಯ ಹೆದ್ದಾರಿಗಳ ಮತ್ತು ರೈಲ್ವೇ ಲೈನುಗಳ ಇಕ್ಕೆಲಗಳಲ್ಲಿ (ಎರಡೂ ಕಡೆ) ತಲಾ ಒಂದು ಕಿ.ಮೀ ಆಚೆಯವರೆಗೂ ಭೂಸ್ವಾಧೀನ ಮಾಡುವ ಇಂಗಿತವನ್ನು ಭೂ ಸ್ವಾಧೀನ ಕಾಯ್ದೆಯ ತಿದ್ದುಪಡಿ ಸುಗ್ರೀವಾಜ್ಞೆಯಲ್ಲಿ ವ್ಯಕ್ತಪಡಿಸಿದೆ. ಎಲ್ಲ ರಾಜ್ಯಗಳಲ್ಲಿರುವ ಸರಕಾರಿ ಜಮೀನುಗಳನ್ನು ಸರ್ವೇ ಮಾಡಿ ಅದನ್ನು ಅಭಿವೃದ್ಧಿ ಪಡಿಸಿ ಸಾಗುವಳಿಯಲ್ಲಿ ತೊಡಗಿರುವ ಬಡಪಾಯಿ ಕುಟುಂಬಗಳಿಂದ ಅವುಗಳನ್ನು ಬಿಡಿಸಲಿವೆ. ಗುತ್ತಿಗೆ ಬೇಸಾಯದಲ್ಲಿ ತೊಡಗಿರುವ ಕೋಟ್ಯಾಂತರ ಬಡ ರೈತರು, ಕೂಲಿಕಾರರಿಗೆ ಗುತ್ತಿಗೆ ಬೇಸಾಯದ ಭದ್ರತೆ ಒದಗಿಸದೇ ಅವರನ್ನು ನಿರ್ಧಾಕ್ಷಿಣ್ಯವಾಗಿ ವ್ಯವಸಾಯದಿಂದ ಹೊರದೂಡಲಿದೆ.

1980 ದಶಕದ ಕೊನೆ ಭಾಗದಲ್ಲಿ ಮತ್ತು ನಂತರ ಬಂದ ಸರಕಾರಗಳು ಕಂದಾಯ ಇಲಾಖೆಗೆ ಸೇರಿದ ಸುಮಾರು 18 ಲಕ್ಷ ಎಕರೆ ಜಮೀನುಗಳನ್ನು, ಅಲ್ಲಿ ಆ ಜಮೀನುಗಳನ್ನು ಅಭಿವೃದ್ಧಿ ಪಡಿಸಿದ ಬಡವರನ್ನು ಗಮನಿಸದೆ, ಏಕಾಏಕಿ ಅರಣ್ಯ ಇಲಾಖೆಗೆ ವರ್ಗಾಯಿಸಿವೆ. ಅರಣ್ಯ ಇಲಾಖೆ ಆ ಜಮೀನು ತಮಗೆ ಸೇರಿದುದೆಂದು ಅಲ್ಲಿನ ಬಡವರನ್ನು ಬೆದರಿಸಿ ಒಕ್ಕಲೆಬ್ಬಿಸಿದೆ. ಇದೀಗ ಜನತೆಯ ಒತ್ತಾಯದ ಮೇರೆಗೆ ಅಂತಹ ಜಮೀನುಗಳನ್ನು ರಾಜ್ಯ ಸರಕಾರ ಅರಣ್ಯ ಇಲಾಖೆಯಿಂದ ಕಂದಾಯ ಇಲಾಖೆಗೆ ವಾಪಾಸು ಪಡೆಯಲು ನಿರ್ಧರಿಸಿ, ಸರ್ವೇ ಕಾರ್ಯ ನಡೆಸಿದೆಯಾದರೂ, ವಾಪಾಸು ಪಡೆಯುವ ಜಮೀನುಗಳನ್ನು ಸಾಗುವಳಿ ನಿರತರಿಗೆ ನೀಡುವ ಯಾವುದೇ ಮಾತುಗಳನ್ನು ಆಡುತ್ತಿಲ್ಲ. ಬದಲಿಗೆ, ಆ ಎಲ್ಲಾ ಜಮೀನುಗಳನ್ನು ಭೂ ಬ್ಯಾಂಕಿಗೆ ಸೇರ್ಪಡೆ ಮಾಡುವ ಸಂಭವಗಳೇ ಹೆಚ್ಚಾಗಿ ಕಂಡು ಬರುತ್ತಿವೆ.

ಅದೇ ರೀತಿ, ಕರ್ನಾಟಕದಲ್ಲಿ, ಸುಮಾರು 2.5ಲಕ್ಷ ಕುಟುಂಬಗಳು ಇತರೇ ಅರಣ್ಯ ವಾಸಿಗಳಾಗಿದ್ದು, ಅವರಿಗೆ ಹಕ್ಕುಪತ್ರ ಒದಗಿಸುವಲ್ಲಿ ಕಾನೂನಿನ ತೊ ಡಕಿದ್ದು ಅವರುಗಳೆಲ್ಲಾ ಆತಂಕಿತರಾಗಿದ್ದಾ–ರೆ ಮಾತ್ರವಲ್ಲ, ಅರಣ್ಯ ಇಲಾಖೆಯ ನಿರಂತರ ಕಿರುಕುಳಕ್ಕೊಳಗಾಗಿದ್ದಾರೆ.

ಚಳುವಳಿ ಹೂಡದೇ
ರೈತ–ಕೂಲಿಕಾರಿಗೆ ಉಳಿಗಾಲವಿಲ್ಲ !

ಕೇಂದ್ರ ಹಾಗೂ ಕರ್ನಾಟಕ ರಾಜ್ಯ ಸರಕಾರಗಳ ಈ ಎಲ್ಲಾ ಕ್ರಮಗಳು, ಬಹಳ ಸ್ಪಷ್ಟವಾಗಿ ರೈತರು ಮತ್ತು ವ್ಯವಸಾಯದ ಮೇಲೆ ಅವಲಂಬಿತರಾದ ಇತರರನ್ನು ದೊಡ್ಡ ಪ್ರಮಾಣದಲ್ಲಿ ಅಥವಾ ಬಹುತೇಕ ವ್ಯವಸಾಯ ಮತ್ತು ಗ್ರಾಮೀಣ ಪ್ರದೇಶದಾಚೆ ತಳ್ಳುವ ಹುನ್ನಾರವನ್ನೇ ಸ್ಪಷ್ಟ ಪಡಿಸುತ್ತಿವೆ. ಅದೇ ರೀತಿ, ಈ ಕ್ರಮಗಳು ಒಂದೆಡೆ, ಈ ರೀತಿ ದಿವಾಳಿಯಾಗಿ ಹೊರ ದೂಡಲ್ಪಡುವ ಕೋಟಿ ಕೋಟಿ ಬಡ ಕುಟುಂಬಗಳು, ಬೆಳೆಯುತ್ತಿರುವ ಜಾಗತಿಕ ಆರ್ಥಿಕ ಬಿಕ್ಕಟ್ಟಿನ ಕಾರಣದಿಂದಾಗಿ, ಇತರೆಡೆ ಕೂಡಾ ಉದ್ಯೋಗಾವಕಾಶಗಳ ತೀವ್ರ ಕೊರತೆಯನ್ನು ಎದುರಿಸಿ, ಬೀದಿಗೆ ತಳ್ಳಲ್ಪಟ್ಟು ದೇಶದ ದಟ್ಟ ದಾರಿದ್ರ್ಯವನ್ನು ಹೆಚ್ಚಿಸಲು ಕಾರಣವಾಗಲಿವೆ. ಇನ್ನೊಂದೆಡೆ, ಈ ಹುನ್ನಾರದ ಮುಂದುವರೆದ ಭಾಗವಾಗಿ ಬಹು ರಾಷ್ಟ್ರೀಯ ಸಂಸ್ಥೆಗಳು ದೇಶದ ಭೂ ಸಂಪನ್ಮೂಲ ಮತ್ತು ವ್ಯವಸಾಯದ ಮೇಲೆ ತಮ್ಮ ಒಡೆತನವನ್ನು ಸ್ಥಾಪಿಸಿ ದೇಶವನ್ನು ಕೊಳ್ಳೆಯೊಡೆಯಲು ನೆರವಾಗುತ್ತಿವೆ.

ಜಾಗತೀಕರಣದ ನೀತಿಗಳು ದೇಶದಲ್ಲಿ ಬಡತನವನ್ನು ನಿವಾರಿಸಲಿವೆ ಮತ್ತು ಭಾರೀ ಉದ್ಯೋಗಾವಕಾಶಗಳನ್ನು ನಿರ್ಮಿಸಲಿವೆಯೆಂಬ ಆಳುವ ವರ್ಗಗಳು ಮತ್ತು ಅವರ ರಾಜಕೀಯ ಪಕ್ಷಗಳು ಮತ್ತು ಅವರ ಬಾಲಬಡುಕ ಮಾಧ್ಯಮಗಳು ಮಾಡುತ್ತಿರುವ ವ್ಯಾಪಕ ಪ್ರಚಾರದಲ್ಲಿ ಹುರುಳಿಲ್ಲವೆಂಬುದನ್ನು ಇದು ಸ್ಪಷ್ಟ ಪಡಿಸುತ್ತದೆ. ಮಾತ್ರವಲ್ಲ, ಇರುವ ಉದ್ಯೋಗಗಳನ್ನು ಕಿತ್ತುಕೊಳ್ಳಲಿದೆಯೆಂಬುದನ್ನು ಸಾಬೀತು ಪಡಿಸುತ್ತದೆ.

ಹೀಗಾಗಿ, ವ್ಯವಸಾಯ ಹಾಗೂ ಭೂಮಿಯ ಮೇಲಿನ ಬಹುರಾಷ್ಟ್ರೀಯ ಸಂಸ್ಥೆಗಳ ಈ ದಾಳಿಯನ್ನು ಹಿಮ್ಮೆಟ್ಟಿಸದೇ ಮತ್ತು ತಮ್ಮ ಕುಟುಂಬಗಳು ಮತ್ತು ವ್ಯವಸಾಯವನ್ನು ರಕ್ಷಿಸಿಕೊಳ್ಳಲು ಮುಂಬರುವ ದಿನಗಳಲ್ಲಿ ಗಂಭೀರವಾದ ಚಳುವಳಿಗಳಲ್ಲಿ ತೊಡಗಿಸಿಕೊಳ್ಳದೇ ಹೋದಲ್ಲಿ, ಬಡವರಿಗೆ ಭೂಮಿ ಹಕ್ಕಿಗಾಗಿ, ಕಾನೂನು ತಿದ್ದುಪಡಿಮಾಡುವಲ್ಲಿ ಉದಾಸೀನ ಮಾಡುವ ಮತ್ತು ಬಹುರಾಷ್ಟ್ರೀಯ ಸಂಸ್ಥೆಗಳಿಗೆ ತರಾತುರಿಯಲ್ಲಿ ಎಲ್ಲಾ ಕಾನೂನುಗಳನ್ನು ಮಾಡುವ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಬಹುರಾಷ್ಟ್ರೀಯ ಸಂಸ್ಥೆಗಳ ಪರವಾದ ರಾಜಕೀಯವನ್ನು ಅರಿಯದೇ, ರೈತರು, ಕೂಲಿಕಾರರು, ಬಡ ಗುತ್ತಿಗೆ ಬೇಸಾಯಗಾರರು, ಸರಕಾರಿ ಬಗರ್ ಹುಕುಂ ಹಾಗೂ ಅರಣ್ಯ ಭೂಮಿ ಸಾಗುವಳಿದಾರರಿಗೆ ಉಳಿಗಾಲವಿಲ್ಲ !

ರಾಜ್ಯ ಸರಕಾರವೂ ಕೂಡಾ ಭೂ ಸು ಧಾರಣಾ ಕಾಯ್ದೆ–1961 ಕ್ಕೆ ಭೂ ಸುಧಾರಣಾ ತಿದ್ದುಪಡಿ ಕಾಯ್ದೆ–2015ರ ಹೆಸರಿನಲ್ಲಿ ತಿದ್ದುಪಡಿ ತಂದು, 25 ಲಕ್ಷಕ್ಕಿಂತಲೂ ಕಡಿಮೆ ಆದಾಯ ಹೊಂದಿರುವ ಎಲ್ಲರೂ, ರೈತ ಕುಟುಂಬಗಳಿಂದ ಸಾವಿರಾರು ಎಕರೆ ಜಮೀನನ್ನು ಖರೀದಿಸಲು ಅವಕಾಶ ಮಾಡಿಕೊಟ್ಟಿದೆ. ಕನಿಷ್ಟ 500 ಎಕರೆವರೆಗೆ ಕೈಗಾರಿಕೆ ಮತ್ತಿತರೇ ಉದ್ದೇಶಗಳಿಗಾಗಿ, ಕಂಪೆನಿಗಳು ಭೂ ಸ್ವಾಧೀನ ಕಾಯ್ದೆ–2013 ರ ಕಾನೂನು ಮೀರಿ, ರೈತರ ಜಮೀನುಗಳನ್ನು ಬೇಕಾಬಿಟ್ಟಿ ದರದಲ್ಲಿ ಬಲವಂತವಾಗಿ ಖರೀದಿಸಲು ಅನುಕೂಲವಾಗುವಂತೆ 2016ರ ಭೂ ಸ್ವಾಧೀನ ಆದೇಶವನ್ನು ಹೊರಡಿಸಿದೆ. ಸುಮಾರು 40 ಲಕ್ಷ ಎಕರೆಯಷ್ಟಿರುವ ಬಡವರು ಅಭಿವೃದ್ಧಿ ಪಡಿಸಿದ ಜಮೀನುಗಳನ್ನು ವಾಪಾಸು ಪಡೆದು, ಭೂ ಬ್ಯಾಂಕಿಗೆ ಸೇರ್ಪಡೆ ಮಾಡುವ ಹುನ್ನಾರವನ್ನು ನಡೆಸಿದೆ.

ಭೂಮಿ ಹಕ್ಕಿಗೆ ಕಾನೂನು ತಿದ್ದುಪಡಿಗಳು ಬೇಕು

ಹೆಚ್ ಆರ್. ನವೀನ್ ಕುಮಾರ್

ಬಡ ಬಗರ್‌ಹುಕುಂ ಸಾಗುವಳಿದಾರರಿಗೆ ಭೂಮಿ ಸಿಗಬೇಕಾದರೆ ಪ್ರಸ್ತುತ ಕಾನೂನಿಗೆ ತಿದ್ದುಪಡಿ ಮಾಡಲೇಬೇಕು. ಅದಕ್ಕಾಗಿ 'ಜೈಲು ಭರೋ'ದಂತಹ ನಿರ್ಣಾಯಕ ಹೋರಾಟಕ್ಕೆ ಮುಂದಾಗಬೇಕೆಂದು ಕರ್ನಾಟಕ ಪ್ರಾಂತ ರೈತ ಸಂಘ (ಕೆಪಿಆರ್‌ಎಸ್) ದ ನೇತೃತ್ವದಲ್ಲಿ ಇಂದು ಬೆಂಗಳೂರಿನ ಕಾನಿಷ್ಕ ಹೋಟೆಲ್‌ನಲ್ಲಿ ನಡೆದ "ಭೂಮಿಯ ಹಕ್ಕಿಗಿರುವ ಕಾನೂನಿನ ಸಮಸ್ಯೆಗಳು' ದುಂಡುಮೇಜಿನ ಸಭೆಯಲ್ಲಿ ಬಂದ ನಿರ್ಣಯ.



ದುಂಡುಮೇಜಿನ ಸಭೆಯನ್ನು ಉದ್ಘಾಟಿಸಿ ಮಾತನಾಡಿದ ಅಖಿಲ ಭಾರತ ಕಿಸಾನ್ ಸಭಾದ ಉಪಾಧ್ಯಕ್ಷರಾದ ಕೆ. ವರದರಾಜನ್ ಶೇಕಡ 72 ರಷ್ಟು ಜನ ಗ್ರಾಮೀಣ ಪ್ರದೇಶದಲ್ಲಿ ಬದುಕು ಸಾಗಿಸುತ್ತಿದ್ದು ಅವರೆಲ್ಲರೂ ಭೂಮಿಯನ್ನೇ ನಂಬಿಕೊಂಡಿದ್ದಾರೆ. ಹಿಂದಿನ ಕಾಂಗ್ರೆಸ್ ಸರ್ಕಾರ ಮತ್ತು ಈಗಿನ ಬಿಜೆಪಿ ಸರ್ಕಾರ ತರುತ್ತಿರುವ ನೀತಿಗಳು ಬಡ ರೈತರಿಂದ ಭೂಮಿಯನ್ನು ಕಿತ್ತುಕೊಳ್ಳಲು ಪೂರಕವಾಗಿವೆ ಮತ್ತು ಕೈಗಾರಿಕೆಗಳ ಉದ್ದೇಶಕ್ಕಾಗಿ ಖಾಸಗಿ ಬಹುರಾಷ್ಟ್ರೀಯ ಕಂಪನಿಗಳು ಅಗತ್ಯಕ್ಕಿಂತ ಹೆಚ್ಚುವರಿ ಭೂಮಿಯನ್ನು ಸ್ವಾಧಿನ ಪಡಿಸಿಕೊಂಡು ರೈತರನ್ನು ಕೃಷಿಯಿಂದ ಹೊರದಬ್ಬಲಾಗುತ್ತಿದೆ. ದೇಶದ ಶೇಕಡ 42 ರಷ್ಟು ರೈತರು ಕೃಷಿಯನ್ನು ಮುಂದುವರೆಸಲಾಗದ ಸಂಕಷ್ಟದ ಸ್ಥಿತಿಯಲ್ಲಿದ್ದಾರೆ. ಇದಕ್ಕೆ ಮುಖ್ಯವಾಗಿ ರೈತ ವಿರೋಧಿ ನೀತಿಗಳಿಂದ ಸರ್ಕಾರಗಳು ಯಾವಾಗ ಬೇಕಾದರೂ ಭೂಮಿಯನ್ನು ಕಿತ್ತುಕೊಳ್ಳಬಹುದೆಂಬ ಅಭದ್ರತೆ ಉಂಟಾಗಿದೆ. ಪ್ರಸ್ತುತ ಇಂತಹ ಕಾರ್ಷಿಕ ಬಿಕ್ಕಟ್ಟಿನ ಸಂದರ್ಭದಲ್ಲಿ ಎಲ್ಲ ರೈತ ಪರ ಮತ್ತು ಪ್ರಗತಿಪರ ಸಂಘಟನೆಗಳು ಒಟ್ಟಿಗೆ ಸೇರಿ ಚಳುವಳಿಗಳನ್ನು ನಡೆಸಬೇಕಾದ ಅನಿವಾರ್ಯತೆ ಇದೆ ಎಂದು ಹೇಳಿದರು.

ಕಂದಾಯ ಕಾಯ್ದೆಯ ಕಲಂ 94 ಎ ಮತ್ತು ಬಿ ಗೆ ತಿದ್ದುಪಡಿ ಬೇಕು

ಸಭೆಯಲ್ಲಿ ಮಾತನಾಡಿದ ವಿವಿಧ ಸಂಘಟನೆಗಳ ಮುಖಂಡರ ಒಟ್ಟು ಅಭಿಪ್ರಾಯದ ಭಾಗವಾಗಿ ರಾಜ್ಯದಲ್ಲಿ ಕಂದಾಯ ಕಾಯ್ದೆ 1964ಕ್ಕೆ ಕಲಂ 94, ಎ ಮತ್ತು ಬಿ ತಿದ್ದುಪಡಿ ತಂದು. ಅರ್ಜಿ ನಮೂನೆ 50 ಮತ್ತು 53ರಲ್ಲಿ 25.14 ಲಕ್ಷ ಅರ್ಜಿಗಳನ್ನು ಪಡೆಯಲಾಗಿತ್ತು. ಕಂದಾಯ ಕಾಯ್ದೆಯ ಕಲಂ 71ರ ಅಡಿಯಲ್ಲಿ ಬಲ ಪಂಥೀಯ ಚಿಂತಕರು, ನೂರು ಜಾನವಾರುಗಳಿಗೆ 30 ಎಕರೆ ಜಮೀನು ಕಾಯ್ದಿಡಬೇಕೆಂಬ ಕಾನೂನಿನ ಅಂಶವನ್ನು ಪ್ರಶ್ನಿಸಿ ಉಚ್ಚ ನ್ಯಾಯಾಲಯದಲ್ಲಿ W.P.No. 14048 / 2015 (KLR Res) D.D. 22.09.2005 ಅರ್ಜಿ ಸಲ್ಲಿಸಿರುವುದರಿಂದ ಉಚ್ಚ ನ್ಯಾಯಾಲಯದ ತೀರ್ಪಿನಂತೆ, ಶಾಸಕರ ನೇತೃತ್ವದ ಭೂ ಮಂಜೂರಾತಿ ಸಮಿತಿಗಳು ಬಡ ಉಳುಮೆದಾರರ 13.16 ಲಕ್ಷ ಅರ್ಜಿಗಳನ್ನು ತಿರಸ್ಕಾರ ಮಾಡಿವೆ. ಸರ್ಕಾರ ರಚಿಸಿದ 162 ಭೂ ಮಂಜುರಾತಿ ಸಮಿತಿಗೆ ಭೂ ಮಂಜೂರಾತಿಗೆ ಅರ್ಜಿ ಸಲ್ಲಿಸಿ ಮಂಜೂರಾತಿಗಾಗಿ ಕಾಯುತ್ತಿರುವ 4.60 ಲಕ್ಷ ಉಳುಮೆದಾರರಿಗೆ, ಭೂ ಮಂಜೂರಾತಿ ಮಾಡಿ ಕೊಡುತ್ತೇವೆಂದು, ಸರಕಾರದ ಪರವಾಗಿ ಕಂದಾಯ ಸಚಿವರು, ಕಾನೂನು ಸಚಿವರು ಹಾಗೂ ಮುಖ್ಯಮಂತ್ರಿಗಳು ವಿಧಾನ ಸಭೆಯಲ್ಲಿ ವಿಧಾನ ಪರಿಷತ್‌ನಲ್ಲಿ ಮತ್ತು ಮಾಧ್ಯಮಗಳಲ್ಲಿ ಹೇಳಿಕೆ ನೀಡುತ್ತಿದ್ದಾರೆ. ಉಳುಮೆದಾರರಿಗೆ ಭೂಮಿ ಮಂಜೂರು ಮಾಡಬಾರದು ಎಂಬ ತೀರ್ಪಿನ ಹಿನ್ನೆಲೆಯಲ್ಲಿ ಹಾಗೂ W.A.No. 1353/2006 (KLR Res) D.D. 18.11.2006 ಹೈಕೋರ್ಟಿನ ವಿಭಾಗೀಯ ಪೀಠ ಸರ್ಕಾರಿ ಭೂಮಿಯನ್ನು ಸರ್ವೆ ಮಾಡಬೇಕು ಹಾಗೂ ಜಾನುವಾರಗಳನು ಎಣಿ–ಕೆ ಮಾಡಬೇಕು. ಜಾನುವಾರುಗಳಿಗೆ ಮೀಸಲಿಟ್ಟು, ಉಳಿದ ಭೂಮಿಯನ್ನು ಅರ್ಜಿದಾರರಿಗೆ ಭೂಮಿ ಮಂಜೂರು ಮಾಡಬೇಕು, ಎನ್ನುವ ತೀರ್ಪಿನ ಹಿನ್ನೆಲೆಯಲ್ಲಿ, ಉಳುಮೆದಾರರಿಗೆ ಭೂಮಿ ಮಂಜೂರು ಮಾಡಲು ಸಾಧ್ಯವಾಗುತ್ತಿಲ್ಲ ಎಂಬುದನ್ನು ಅರ್ಥ ಮಾಡಿಕೊಬೇಕಿದೆ

ಬೆಂಗಳೂರು ನಗರ ಸುತ್ತಲೂ 18 ಕಿ.ಮೀಗಳ, ಮೈಸೂರು, ಹುಬ್ಬಳ್ಳಿ ಧಾರವಾಡ, ಕಲಬುರ್ಗಿ ಮತ್ತಿತರ ನಗರಗಳಿಗೆ 10.ಕಿ.ಮಿ.ಗಳ, ಪುರಸಭೆಗಳಿಗೆ 5 ಕಿ.ಮಿ. ವ್ಯಾಪ್ತಿಯಲ್ಲಿ ಉಳುಮೆ ಮಾಡಿದ ಬಡವರಿಗೆ ಭೂಮಿ ಮಂಜೂರು ಮಾಡಬಾರದೆಂದು, ಕಂದಾಯ ಕಾಯ್ದೆ ಕಲಂ 94ಎ ಮತ್ತು ಬಿ. ತಿದ್ದುಪಡಿ ಮಾಡುವಾಗ ಅಂಗೀಕರಿಸಿರುವುದು ಲಕ್ಷಾಂತರ ಬಡವರಿಗೆ ಅನ್ಯಾಯವಾಗಿದೆ. ಪಟ್ಟಣ, ನಗರಗಳ ಸುತ್ತಮುತ್ತಲೂ ಉಳುಮೆ ಮಾಡಿದ ಬಡವರಿಗೆ ಒಂದು ಎಕರೆ ಭೂಮಿ ಮಂಜೂರು ಮಾಡಲು ಸಾಧ್ಯವಾಗುತ್ತಿಲ್ಲವೆಂದು ತಾವೂ ಮನಗಂಡು ಕಂದಾಯ ಕಾಯ್ದೆಯ ಕಲಂ 94 ಎ ಮತ್ತು ಬಿ ಗೆ ತಿದ್ದುಪಡಿ ತಂದು ಪಟ್ಟಣ, ನಗರಗಳ ವ್ಯಾಪ್ತಿ ಕೈಬಿಡಬೇಕೆಂದು ಹಾಗೂ ನಗರ ಪಟ್ಟಣ ಸುತ್ತಲೂ ಇರುವ ಉಳುಮೆದಾರರಿಗೆ ಭೂ ಮಂಜುರಾತಿಗೆ ದಾರಿ ಸುಗಮ ಮಾಡಬೇಕಾಗಿದೆ.

ಹಾಗೇನೆ ರಾಜ್ಯದಲ್ಲಿ ಬಡವರು ಉಳುಮೆ ಮಾಡಿದ ಲಕ್ಷಾಂತರ ಅರ್ಜಿಗಳು ತಿರಸ್ಕಾರಗೊಂಡಿದ್ದು, ಸರಕಾರವು ದೇವರಾಜ ಅರಸುರವರ ಜನ್ಮ ಶತಮಾನೋತ್ಸವ ಆಚರಣೆ ಮಾಡಲಾಗುತ್ತಿದ್ದು "ಉಳುವವನೆ ಭೂಮಿ ಒಡೆ–ಯ" ಮತ್ತೊಮ್ಮೆ ಸಾಬೀತು ಪಡಿಸಲು ಸರಕಾರಿ ಜಮೀನನ್ನು ಬಡ ದಲಿತ ಉಳುಮೆದಾರರಿಗೆ ಮಂಜೂರಾತಿ ನೀಡಲು ಅವಕಾಶವಾಗುವಂತೆ, ಕಂದಾಯ ಕಾಯ್ದೆಗೆ ಮತ್ತೊಮ್ಮೆ ತಿದ್ದುಪಡಿ ಮಾಡಿ ಹೊಸದಾಗಿ ಅರ್ಜಿಗಳನ್ನು ಕರೆಯಬೇಕು.

ಭೂಕಬಳಿಕೆ ನಿಷೇಧ ಅಧಿನಿಯಮ 2011ರ ಕಲಂ 2(ಈ) (ಎಫ್) (ಜಿ) ತಿದ್ದುಪಡಿ ಬೇಕು

ಸಮಾಜ ಪರಿವರ್ತನಾ ಸಂಘಟನೆಯ ಎಸ್.ಆರ್. ಹಿರೇಮಠ ಹಾಗೂ ರಾಜ್ಯ ಸಭಾ ಸದಸ್ಯರಾದ ರಾಜೀವ ಚಂದ್ರಶೇಖರ ನೇತೃತ್ವದ 'ನಮ್ಮ ಬೆಂಗಳೂರು ಫೌಂಡೇಷನ್' ಹೈಕೋರ್ಟಿಗೆ ಅರ್ಜಿ ಸಲ್ಲಿಸಿ, ಭೂ ಕಬಳಿಕೆ ಮಾಡಿದ ಸರಕಾರಿ ಭೂಮಿಯನ್ನು ವಶಪಡಿಸಿಕೊಳ್ಳಬೇಕೆಂದು ಕೋರಿದ್ದಾರೆ. ಈ ಹಿನ್ನೆಲೆಯಲ್ಲಿ ಹೈಕೋರ್ಟ್ ಭೂ ಕಬಳಿಕೆದಾರರಿಗೆ ಸರಕಾರ ರಕ್ಷಣೆ ನೀಡುತ್ತಿದೆ–ಯೆಂದು, ತರಾಟೆಗೆ ತೆಗೆದುಕೊಂಡಿದೆ. ಅಧಿಕಾರಿಗಳು ತರಾತುರಿಯಲ್ಲಿ ಮುಖ್ಯಮಂತ್ರಿಗಳಿಂದ ಒಪ್ಪಿಗೆ ಪಡೆದು ಹೈಕೋರ್ಟ್‌ಗೆ ಹೊಟ್ಟೆ ಪಾಡಿಗಾಗಿ ಉಳುಮೆ ಮಾಡುವ ಉಳುಮೆದಾರರನ್ನು ಎತ್ತಂಗಡಿ ಮಾಡುತ್ತೇವೆಯೆಂದು ಅಫಿಡೆವಿಟ್ ಸಲ್ಲಿಸಿರುವದರಿಂದ ರಾಜ್ಯದ ಉಳುಮೆದಾರರಿಗೆ ತೆ–ಊಂದರೆಯಾಗಿತ್ತು. ಉಳುಮೆದಾರರಾದ ಕರ್ನಾಟಕ ಪ್ರಾಂತ ರೈತ ಸಂಘದ ಮಾರ್ಗದರ್ಶನದಲ್ಲಿ ಉಳುಮೆದಾರರ ಹೊಟ್ಟೆ ಪಾಡಿನ ಕಷ್ಟವನ್ನು ತೆ–ಊಡಿಕೊಂಡು ಹೈಕೋರ್ಟಿಗೆ ಲಕ್ಷಾಂತರ ಅರ್ಜಿಗಳನ್ನು ಉಳಿಮೆದಾರರಿಂದ ಸಲ್ಲಿಸಿರುವದು, ಹೈಕೋರ್ಟ್ ಬಡವರ ಪರವಾಗಿ ನಿಲುಮೆ ತಾಳಲು ಸಾಧ್ಯವಾಗಿದೆ ಎಂಬುದನ್ನು ನೆನಪಿಸಿಕೊಳ್ಳಬೇಕಾಗಿದೆ. ಸರ್ಕಾರದಿಂದ ಕೂಡ ಅಫಿಡವಿಟ್ ತಿದ್ದುಪಡಿ ಮಾಡಿ ಪುನಃ ಸಲ್ಲಿಸಲಾಯಿತು.

ಇತ್ತೀಚೆಗೆ ಭೂಕಬಳಿಕೆದಾರರನ್ನು ಶಿಕ್ಷಿಸಲು ಕರ್ನಾಟಕ ಭೂ ಕಬಳಿಕೆ ನಿಷೇಧ ಅಧಿನಿಯಮ 2011 (2014ರ ಕರ್ನಾಟಕ ಅಧಿನಿಯಮ ಸಂ–ಖ್ಯೆ 38) 2014ರ ಅಕ್ಟೋಬರ್ 20 ರಂದು ರಾಜ್ಯ ಪತ್ರದಲ್ಲಿ ಪ್ರಕಟಗೊಂಡಿದೆ. ಕರ್ನಾಟಕ ಭೂ ಕಬಳಿಕೆ ನಿಷೇಧ ಅಧಿನಿಯಮ 2011ರ ಕಲಂ 2 (ಈ) ಭೂಕಬಳಿಕೆದಾರ ಮತ್ತು (ಎಫ್) ಭೂಕಬಳಿಕೆ ಹಾಗೂ (ಜಿ) ಸ್ಥಳೀಯ ಪ್ರಾಧಿಕಾರ ಈ ಪರಿಭಾಷೆಯು ಬಡ ಉಳುಮೆದಾರರು ಕೂಡ ಭೂಕಬಳಿಕೆದಾರರು ಎಂದು ಅರ್ಥೈಸಲಾಗಿದೆ. ಇದರ ಪ್ರಕಾರ ರಾಜ್ಯದ ಸುಮಾರು 20 ಲಕ್ಷ ಬಡ ಉಳುಮೆದಾರರು ಕೂಡ ಭೂಗಳ್ಳರಾಗುತ್ತಾರೆ. ಆದ್ದರಿಂದ ಕರ್ನಾಟಕ ಭೂಕಬಳಿಕೆ ನಿಷೇಧ ಅಧಿನಿಯಮ 2011ರ ಕಲಂ 2(ಈ) ಭೂಕಬಳಿಕೆದಾರ, (ಎಫ್) ಭೂಕಬಳಿಕೆ ಮತ್ತು (ಜಿ) ಸ್ಥಳೀಯ ಪ್ರಾಧಿಕಾರ ಪರಿಭಾಷೆಯಲ್ಲಿ ತಿದ್ದುಪಡಿ ಮಾಡಿ ಬಡ ಉಳುಮೆದಾರರನ್ನೂ ರಕ್ಷಿಸಬೇಕು.

ರಾಜ್ಯದ ಎಲ್ಲಾ ಮನೆ ರಹಿತರಿಗೆ ವಸತಿ ನಿವೇಶನವನ್ನು ನೀಡಬೇಕೆಂದು ಒತ್ತಾಯಿಸಿ ನವೆಂಬರ್ 18 ರಂದು ರೈತ, ಕಾರ್ಮಿಕ, ಕೂಲಿಕಾರ, ದಲಿತ, ಆದಿವಾಸಿ, ಮಹಿಳೆ ಮತ್ತು ವಿದ್ಯಾರ್ಥಿ ಯುವಜನ ಸಂಘಟನೆ ಒಗ್ಗೂಡಿ ರಾಜ್ಯದ ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ ಪ್ರತಿಭಟನೆಗಳನ್ನು ನಡೆಸಲುವ ಮೂಲಕ ಜೈಲ್‌ಭರೋ ಚಳುವಳಿಯನ್ನು ನಡೆಸಬೇಕೆಂದು ತೀರ್ಮಾನಿಸಲಾಯಿತು.

ದುಂಡುಮೇಜಿನ ಸಭೆಯ ಅಧ್ಯಕ್ಷತೆಯನ್ನು ಕರ್ನಾಟಕ ಪ್ರಾಂತ ರೈತ ಸಂಘದ ಅಧ್ಯಕ್ಷರಾದ ಮರುತಿ ಮಾನ್ಪಡೆ ವಹಿಸಿದ್ದರು. ಸಭೆಯಲ್ಲಿ ಅಖಿಲ ಭಾರತ ಕಿಸಾನ್ ಸಭಾದ ಜಂಟಿ ಕಾರ್ಯದರ್ಶಿಗಳಾದ ವಿಜೂಕೃಷ್ಣನ್, ಕರ್ನಾಟಕ ರಾಜ್ಯ ರೈತ ಸಂಘದ ಅಧ್ಯಕ್ಷರಾದ ಕೆ.ಟಿ.ಗಂಗಾಧರ್, ಕರ್ನಾಟಕ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್‌ವಾದ) ಸಂಚಾಲಕರಾದ ಮಾವಳ್ಳಿ ಶಂಕರ್, ಕರ್ನಾಟಕ ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಯು.ಬಸವರಾಜು, ಮಾಜಿ ಶಾಸಕರೂ ಮತ್ತು ಕೆಪಿಆರ್‌ಎಸ್‌ನ ರಾಜ್ಯ ಉಪಾಧ್ಯಕ್ಷರಾದ ಜಿ.ವಿ.ಶ್ರೀರಾಮರೆಡ್ಡಿ, ರೈತ ಕೂಲಿಕಾರ ಸಂಘದ ಮುಖಂಡರಾದ ಶಿವಪ್ರಕಾಶ್, ಆದಿವಾಸಿ ಹಕ್ಕುಗಳ ಸಮಿತಿಯ ರಾಜ್ಯ ಸಂಚಾಲಕರಾದ ಎಸ್.ವೈ. ಗುರುಶಾಂತ್, ದಲಿತ ಹಕ್ಕುಗಳ ಸಮಿತಿಯ ಗೋಪಾಲಕೃಷ್ಣ ಅರಳಹಳ್ಳಿಯವರು ಮಾತನಾಡಿದರು. ಮತ್ತು ವಿವಿಧ ಜಿಲ್ಲೆಗಳಿಂದ ಪ್ರಾಂತ ರೈತ ಸಂಘದ ಪಧಾಧಿಕಾರಿಗಳು ಭಾಗವಹಿಸಿದ್ದರು. ಪ್ರಾರಂಬದಲ್ಲಿ ಕೆಪಿಆರ್‌ಎಸ್‌ನ ಉಪಾಧ್ಯಕ್ಷರಾದ ಶಾಂತಾರಾಮ್ ನಾಯಕ್ ಸ್ವಾಗತಿಸಿದರೆ ಯಾದವಶೆಟ್ಟಿ ವಂದಿಸಿದರು. ●

ಉ.ಕ: ನ. 18 ರಂದು ಜೈಲು ಭರೋಗೆ ಕರೆ



ಅಂಕೋಲಾ : ರಾಜ್ಯದಲ್ಲಿ ಈಗಾಗಲೇ ಸಲ್ಲಿಕೆಯಾಗಿರುವ ಎರಡೂವರೆ ಲಕ್ಷ ಅರಣ್ಯ ಅತಿಕ್ರಮಣದಾರರ ಅರ್ಜಿಯನ್ನು ಪರಿಶೀಲಿಸಿ ಕೂಡಲೇ ಹಕ್ಕುಪತ್ರ ವಿತರಿಸಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಸರ್ಕಾರ ಇದರ ಪ್ರತಿಫಲ ಅನುಭವಿಸಬೇಕಾಗುತ್ತದೆ ಎಂದು ಜಿ.ಸಿ. ಬಯ್ಯಾರೆಡ್ಡಿ ಅವರು ಎಚ್ಚರಿಸಿದರು. ತಾಲೂಕ ಪಂಚಾಯ್ತಿ ಸಭಾಭವನದಲ್ಲಿ 17 ಅಕ್ಟೋಬರ್ 20016 ಕೆಪಿಆರ್‌ಎಸ್ ಹಮ್ಮಿಕೊಂಡ ಅರಣ್ಯ ಅತಿಕ್ರಮಣದಾರರ ಸಭೆಯಲ್ಲಿ ರಾಜ್ಯ ಉಪಾಧ್ಯಕ್ಷರಾದ ಜಿ.ಸಿ. ಬಯ್ಯಾ–ರೆಡ್ಡಿ ಅವರು ಮಾತನಾಡುತ್ತಿದ್ದರು. ಚುನಾವಣೆ ಬಂದ ಸಂದರ್ಭದಲ್ಲಿ ಸರ್ಕಾರಗಳು ಅರಣ್ಯವಾಸಿಗಳಿಗೆ ಬೆರಳೆಣಿಕೆಯಷ್ಟು ಪಟ್ಟಾವನ್ನು ವಿತರಿಸಿ ಮತವನ್ನು ಸೆಳೆಯಲು ತಂತ್ರಗಾರಿಕೆ ಮಾಡುತ್ತವೆ. ದೇಶದಲ್ಲಿ ಸುಮಾರು 9 ಕೋಟಿ ಅರಣ್ಯವಾಸಿಗಳಿದ್ದಾರೆ. ಇವರು ಅರಣ್ಯ ಮತ್ತು ಅರಣ್ಯ ಉತ್ಪನ್ನಗಳನ್ನೇ ನಂಬಿ ಜೀವನ ಸಾಗುತ್ತಿದ್ದಾರೆ. ವಿವಿಧ ಯೋಜನೆಗಳಿಂದಾಗಿ ಈಗಾಗಲೇ ಅರಣ್ಯವಾಸಿಗಳು ತಮ್ಮ ಬದುಕನ್ನು ಕಳೆದುಕೊಂಡಿದ್ದಾರೆ. ಇನ್ನಾದರೂ ದೇಶಾದ್ಯಂತ ಇರುವ ಅರಣ್ಯವಾಸಿಗಳಿಗೆ ಪಟ್ಟಾ ವಿತರಿಸಬೇಕು ಎಂದರು.

ಕೆಪಿಆರ್‌ಎಸ್ ಜಿಲ್ಲಾ ಕಾರ್ಯದರ್ಶಿ ಶಾಂತಾರಾಮ ನಾಯಕ ಮಾತನಾಡಿ, ಸರ್ಕಾರದ ಕೆಲವು ತಪ್ಪು ನೀತಿಯಿಂದಾಗಿ ಇದುವರೆಗೂ ಅರಣ್ಯವಾಸಿಗಳು ಪಟ್ಟಾ ಪಡೆದುಕೊಳ್ಳಲು ಹರಸಾಹಸ ಪಡುತ್ತಿದ್ದಾ–ರೆ. ಮೂರು ತಲೆಮಾರಿನ ದಾಖಲೆಗಳನ್ನು ಒದಗಿಸುವಂತೆ ಹೇಳಿರುವುದು ಮೂರ್ಖತನವಾಗಿದೆ. ಇದನ್ನು ಸಾಬೀತುಪಡಿಸಿ ಪಟ್ಟಾ ಪಡೆಯಲು ಸಾಧ್ಯವಿಲ್ಲ. ಇಂತಹ ನೀತಿಯನ್ನು ಸರ್ಕಾರ ಕೈಬಿಡಬೇಕು ಎಂದರು.

ವಿವಿಧ ಗ್ರಾಮಗಳ ಅರಣ್ಯ ಅತಿಕ್ರಮಣ ಹೋರಾಟ ಸಮಿತಿಯ ಅಧ್ಯಕ್ಷರುಗಳಾದ ರಮೇಶ ನಾಯಕ ಹಿಲ್ಲೂರು, ದೇವಿ ಗೌಡ ಅಲಗೇರಿ, ಸುಧಾಕರ ಜಾಂಬವಳಿಕರ ಬೇಲೇಕೇರಿ, ಸಂತೋಷ ನಾಯ್ಕ, ವೆಂಕಟ್ರಮಣ ಗೌಡ, ದುಮ್ಮಣ್ಣ ನಾಯ್ಕ ಇತರರು ಉಪಸ್ಥಿತರಿದ್ದರು.

ನಮ್ಮ ಕಿರು–ಟ್ವೀಟ್

@SitaramYechury

ಮೋದಿ ಹೇಳಿದ 2 ಕೋಟಿ ಉದ್ಯೋಗ ಬಿಡಿ. 2015ರಲ್ಲಿ ಸೃಷ್ಟಿಯಾದ ಉದ್ಯೋಗಗಗಳು 1.35 ಲಕ್ಷ ಏಪ್ರಿಲ–ಜೂನ್ 2016 ಅವಧಿಯಲ್ಲಿ ಉದ್ಯೋಗ ನಷ್ಟವಾಗಿದೆ. ಇದೆಂತಹ ಜುಮ್ಲಾನೊಮಿಕ್ಸ್

– ಸೀತಾರಾ ಯೆಚುರಿ

ಗುಂಟೂರಿನಲ್ಲಿ ದುಡಿಯುವ ಮಹಿಳೆಯರ 11ನೇ ಅಖಿಲ ಭಾರತ ಸಮಾವೇಶ

ಸುನಂದ ಎಚ್.ಎಸ್.

ದುಡಿಯುವ ಮಹಿಳೆಯರ ಸಮನ್ವಯ ಸಮಿತಿಯ 11 ನೇ ಅಖಿಲ ಭಾರತ ಸಮಾವೇಶ ಆಂದ್ರದ ಗುಂಟೂರಿನಲ್ಲಿ ಸೆಪ್ಟಂಬರ್ 29–30 ರಂದು ನಡೆಯಿತು. ಗುಂಟೂರಿನ ರೆವಿನ್ಯೂ ಕಲ್ಯಾಣ ಭವನದಲ್ಲಿ ನಡೆದ ಸಮಾವೇಶದ ಧ್ವಜಾರೋಹಣ ಹಿರಿಯ ಸಂಗಾತಿ ಅಖಿಲಭಾರತ ಅಂಗನವಾಡಿ ನೌಕರರ ಸಂಘದ ಉಪಾಧ್ಯಕ್ಷರು ಹಾಗೂ ಸಿಐಟಿಯು ಅಖಿಲಭಾರತ ಮುಖಂಡರಾದ ಕಾಂ. ನೀಲಿಮಾ ಮೈತ್ರ ನಡೆಸಿದರು. 14 ರಾಜ್ಯಗಳಿಂದ ಬಂದ 196 ಪ್ರತಿನಿಧಿಗಳು ಸಿಐಟಿಯು ಯೂನಿಯನುಗಳಲ್ಲದೆ, ವಿಮೆ, ಬ್ಯಾಂಕೆ, ಕೇಂದ್ರ/ರಾಜ್ಯ ಸರಕಾರಿ ನೌಕರರು, ಮೆಡಿಕಲ್ ರೆಪ್ ಕ್ಷೇತ್ರಗಳ ಸೋದರ ಸಂಘಟನೆಗಳಳಿಂದಲೂ ಬಂದಿದ್ದರು. ಸಮಾವೇಶದ ಸ್ಥಳಕ್ಕೆ ಕಾ. ಆರತಿ ಗುಪ್ತ ಅವರ ಹೆಸರು ಇಡಲಾಗಿತ್ತು.



ಸಿಐಟಿಯು ಅಖಿಲಭಾರತ ಪ್ರಧಾನ ಕಾರ್ಯದರ್ಶಿ ಕಾಂ. ತಪನ್ ಸೇನ್ ರವರು ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದರು. ದೇಶದಲ್ಲಿ ಸಿಐಟಿಯು ಯೂನಿಯನುಗಳಲ್ಲಿ ಸಂಘಟಿತರಾದ ದುಡಿಯುತ್ತಿರುವ ಮಹಿಳೆಯರ ಸಂಖ್ಯೆಯಲ್ಲಿ ಹೆಚ್ಚಳ ಕಂಡಿದೆ. 1998 ರಲ್ಲಿ 7.7% ಇದ್ದ ಸಂಖ್ಯೆ 2016ರಲ್ಲಿ 32.3% ಕ್ಕೆ ಏರಿದೆ. ಸಂಖ್ಯೆ ಏರಿದೆ. ಆದರೆ ಸಮಸ್ಯೆ ಬಗೆಹರಿದಿದೆಯೇ ಎಂಬುದನ್ನು ನೋಡಬೇಕಿದೆ. ಈ ದಿನ ಅಸಂಘಟಿತ ಕ್ಷೇತ್ರದಲ್ಲಿ ಲಕ್ಷಾಂತರ ಮಹಿಳೆಯರು ಸ್ಕೀಂ ಕೆಲಸ ಅಲ್ಲದೆ ಬೇರೆ ಬೇರೆ ಕ್ಷೇತ್ರದಲ್ಲಿ ದುಡಿಯುತ್ತಿದ್ದಾರೆ. ಜಾಗತಿಕರಣ ಉದಾರಿಕರಣದಿಂದ ಇಂದು ಎಲ್ಲಾ ಮಹಿಳೆಯರು ದುಡಿಯಬೇಕಾದ ಸ್ಥಿತಿ ಇದೆ. ಜೊತೆಗೆ ಕೇಂದ್ರ ಸರ್ಕಾರದ ದುಡಿಯುವ ವರ್ಗದ ವಿರೋಧಿ ನೀತಿಗಳಿಂದ ಪೆನ್ಸನ್ ನೀತಿಯಲ್ಲಿ ತಂದ ಬದಲಾವಣೆಗಳಿಂದ ಲಕ್ಷಾಂತರ ಮಹಿಳೆಯರು ಕರ್ನಾಟಕದಂತಹ ಕಡೆ ಬೀದಿಗಿಳಿದು ಹೋರಾಟ ನಡೆಸಿದ್ದಾರೆ. ಅದಲ್ಲದೆ ಸಂಘಟನೆಯ ಒಳಗೆ ಬರದ ಬಹಳಷ್ಟು ಜನ ಇದ್ದಾರೆ. ತಲುಪದವರನ್ನು ತಲುಪುವ ಕೆಲಸ ಆಗಬೇಕಿದೆ. ಈ ದಿನ ಪ್ಲಾಂಟೇಶನ್‌ಗಳಲ್ಲಿ, ಪುಡ್ ಪ್ರೋಸೆಸಿಂಗ್ ನಲ್ಲಿ ಗುತ್ತಿಗೆ ಕಾರ್ಮಿಕರಾಗಿ, ಮಿನುಗಾರರಾಗಿ ಪುರುಷ ಮಹಿಳೆ ಒಂದೇ ಕಡೆ ದುಡಿಯುವ ಕ್ಷೇತ್ರಗಳಲ್ಲಿ ಮಹಿಳೆಯರ ಸಿಐಟಿಯು ಉಪಸಮಿತಿ ಮಾಡಬೇಕಿದೆ. ಇನ್ನು ಕೆಲವು ಕಡೆ ರಾತ್ರಿಪಾಳೀ ಕೆಲಸ, ಪ್ರತ್ಯೇಕ ಶೌಚಾಲಯದ ಸಮಸ್ಯೆಯ ಬೇಡಿಕೆ ಇಟ್ಟು ಸಿಐಟಿಯು ಹೋರಾಟ ನಡೆಸುವುದು. ಜೊತೆಗೆ ಮುನ್ಸಿಪಾಲಿಟಿಯಿಂದ ಹಿಡಿದು ವಿಮಾನ ಚಾಲನೆವರೆಗೂ ಎಲ್ಲಾ ವರ್ಗದಲ್ಲಿ ದುಡಿಯುವವರನ್ನು ಸಂಘಟಿಸಬೇಕು ಮತ್ತು ಅವರ ಪ್ರತ್ಯೇಕ ಸಮಸ್ಯೆಗಳಿಗೆ ಹೋರಾಟ ನಡೆಸಬೇಕಿದೆ ಎಂದರು.

ಅಖಿಲ ಭಾರತ ಸಂಚಾಲಕರಾದ ಹೇಮಲತಾ 3 ವರ್ಷಗಳ ಕರಡು ವರದಿ ಮಂಡಿಸಿದರು. ವರದಿ ಮೇಲೆ ಎಲ್ಲಾ ರಾಜ್ಯಗಳಿಂದ ಚರ್ಚೆ ನಡೆಸಿದರು. ಕರ್ನಾಟಕದಿಂದ ಕಾಂ. ಸುನಂದ ಹೆಚ್.ಎಸ್. ಕಾಂ. ಸೆಲ್ವಿ, ಕಾಂ. ಮಾಲಿನಿ ಮೇಸ್ತ ಮಾತನಾಡಿದರು. ಅಧ್ಯಕ್ಷೀಯ ಮಂಡಳಿಯಲ್ಲಿ ಕರ್ನಾಟಕದಿಂದ ಕಾಂ. ಯಮುನಾ ಗಾಂವ್ಕರ್, ಪರಿಚಯ ಪತ್ರ ಮಂಡಳಿಯಲ್ಲಿ ಕಾಂ. ಟಿ. ಲೀಲಾವತಿ, ನಿರ್ಣಯ ಮಂಡಳಿಯಲ್ಲಿ ಕಾಂ. ಸಿ.ಕುಮಾರಿ ಭಾಗವಹಿಸಿದ್ದರು.

ಚರ್ಚೆಗೆ ಉತ್ತರವಾಗಿ ಕಾ. ಹೇಮಲತಾರವರು ಮಾತನಾಡುತ್ತಾ ಸಿಐಟಿಯುನಲ್ಲಿಯೂ ಮಹಿಳಾ ಮುಖಂಡತ್ವವು ಹಿಂದಿಗಿಂತ ಹೆಚ್ಚಾಗಿದೆ. ಕರ್ನಾಟಕ, ಪಶ್ಚಿಮಬಂಗಾಳ, ಕೇರಳ ಅಂತಹ ಕಡೆಗಳಲ್ಲಿ ಜಿಲ್ಲಾ ಅಧ್ಯಕ್ಷರಾಗಿ, ಕಾರ್ಯದರ್ಶಿಯಾಗಿ, ಖಜಾಂಚಿಯಾಗಿ ಹಾಗೂ ತಾಲ್ಲೂಕುಗಳಲ್ಲಿ ಕೂಡ ಸಿಐಟಿಯು ಮುಖ್ಯ ಹುದ್ದೆಯಲ್ಲಿ ಇದ್ದಾರೆ. ಕರ್ನಾಟಕದಲ್ಲಿ ಸಿಐಟಿಯುನ ರಾಜ್ಯಾಧ್ಯಕ್ಷರಾಗಿ ಇದ್ದಾರೆ. ಹಾಗೂ ಸರ್ಕಾರದೊಟ್ಟಿಗೆ ಮಾತುಕತೆಗಳಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದಾರೆ.

ಸಮಾರೋಪದಲ್ಲಿ ಸಿಐಟಿಯು ಅಖಿಲ ಭಾರತ ಅಧ್ಯಕ್ಷರಾದ ಕಾಂ. ಎ.ಕೆ.ಪದ್ಮನಾಭನವರು 2006 ರಲ್ಲಿ ಅಂಗನವಾಡಿ ನೌಕರರ ದೊಡ್ಡ 10 ದಿನಗಳ ಹೋರಾಟ ಆಗಿ ಸರ್ಕಾರದೊಂದಿಗೆ ಮಾತುಕತೆ ನಡೆದಿದೆ. ಲಕ್ಷಾಂತರ ಮಹಿಳೆಯರನ್ನು ಬೀದಿಗಿಳಿಸಿ ಹೋರಾಟ ನಡೆಸಿದ್ದು ಮಹಿಳಾ ಸಂಗಾತಿಗಳೇ ಆಗಿದ್ದಾರೆ. ದುಡಿಯುವ ಮಹಿಳೆಯರ ಈ ಸಮಾವೇಶದಲ್ಲಿ ತೆಗೆದುಕೊಂಡ ನಿರ್ಣಯಗಳನ್ನು ಒರಿಸ್ಸಾದ ಪುರಿಯಲ್ಲಿ ನಡೆಯುವ ಸಿಐಟಿಯುನ ಅಖಿಲಭಾರತ ಸಮ್ಮೇಳನದಲ್ಲಿ ತೆಗೆದುಕೊಂಡು ಚರ್ಚೆ ಮಾಡಲಾಗುವುದು ಮತ್ತೆ ಎಲ್ಲಾ ರಾಜ್ಯದಲ್ಲೂ ಸಮನ್ವಯ ಸಮಿತಿ ರಚನೆಗೆ ಹೆಚ್ಚು ಒತ್ತು ಕೊಡಲಾಗುವದು. ಈ ದಿನ ಅಖಿಲ ಭಾರತ ಮಟ್ಟದಲ್ಲಿ ಮಹಿಳಾ ಪಧಾದಿಕಾರಿಗಳು ಇದ್ದಾರೆ. ದೇಶದಲ್ಲಿ ಪೋಸ್ಟಲ್‌ನಲ್ಲಿ ಇರುವ ಕಾಂ. ಸೀತಾಲಕ್ಷೀಯವರು ಅಖಿಲ ಭಾರತ ಮಹಿಳಾ ಪ್ರಧಾನ ಕಾರ್ಯದರ್ಶಿಯಾಗಿ ಇದ್ದಾರೆ ಎಂದರು.

ರಾಜ್ಯದಿಂದ ಒಟ್ಟು 19 ಜನ ಸಮಾವೇಶದಲ್ಲಿ ಭಾಗವಹಿಸಿದ್ದರು.. ಕಾ. ಎಸ್. ವರಲಕ್ಷ್ಮೀ, ಕಾ. ಸುನಂದ, ಕಾ. ಯಮುನಾ ಗಾಂವ್ಕರ್, ಕಾ. ಮಾಲಿನಿ ಮೇಸ್ತ, ಕಾ. ಗಂಗಾ ನಾಯ್ಕ, ಕಾ. ಟಿ.ಲಿಲಾವತಿ, ಕಾ. ಬಿ.ಎಸ್. ನಾಗರತ್ನ, ಕಾ. ಸಿ. ಕುಮಾರಿ, ಕಾ. ಪಾರ್ವತಮ್ಮ, ಕಾ. ಸೆಲ್ವಿ, ಕಾ. ಸೌಮ್ಯ, ಕಾ. ಸುಮಾ. ಕಾ. ಗೀತಾ ಚಕ್ರಸಾಲಿ, ಕಾ. ಪದ್ಮಾವತಿ ಶೆಟ್ಟಿ, ಕಾ. ಶಾಂತಾ ಘಂಟೆ, ಕಾ. ಆಶಾ, ಕಾ. ವಿಜಯಲಕ್ಷ್ಮೀ, ಕಾ. ಚಿತ್ರಾ, ಕಾ. ಶ್ರೀಮತಿ ಭಾಗವಹಿಸಿದ್ದರು. ●

ಜಾತಿಯತೆಯ ವಿಷ ಬೀಜ ಕಿತ್ತೊಗೆಯಿರಿ: ಬರಗೂರು

‘ಸಾಮಾಜಿಕ ಸ್ವಚ್ಛ ಭಾರತ ನಿರ್ಮಿಸುವ ಸಂಕಲ್ಪದ ಕೊರತೆ ನಮ್ಮಲ್ಲಿದೆ. ಇದರ ಪರಿಣಾಮವಾಗಿ ನಮ್ಮ ದೇಶದಲ್ಲಿ ಕೋಟ್ಯಾಂತರ ಜನ ಇನ್ನೂ ಮಲ ಎತ್ತುವ ಕೆಲಸದಲ್ಲಿ ತೊಡಗಿಕೊಂಡಿದ್ದಾರೆ’ ಎಂದು ಸಾಹಿತಿ, 82ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ನಿಯೋಜಿತ ಸಮ್ಮೇಳನಾಧ್ಯಕ್ಷ, ನಾಡೋಜ ಪ್ರೊ. ಬರಗೂರು ರಾಮಚಂದ್ರಪ್ಪ ಅವರು ವಿಷಾದಿಸಿದರು.



ಡಾ. ಬಿ.ಆರ್.ಅಂಬೇಡ್ಕರ್ ಅವರ 125ನೇ ಜನ್ಮಜಯಂತ್ರಿ ವರ್ಷಾಚರಣೆ ಅಂಗವಾಗಿ 17.10.2016ರಂದು ದಲಿತ ಹಕ್ಕುಗಳ ಸಮಿತಿ, ಕರ್ನಾಟಕ, ಬೆಂಗಳೂರು ದಕ್ಷಿಣ ಜಿಲ್ಲಾ ಸಮಿತಿಯು ಬೆಂಗಳೂರಿನ ನ್ಯಾಷನಲ್ ಕಾಲೇಜಿನಲ್ಲಿ ‘ಸ್ವಾತಂತ್ರ್ಯ–70’ ದಲಿತರ ಸ್ಥಿತಿ ಗತಿ ಮತ್ತು ನಾವು ನೀವು’ ಕುರಿತು ನಡೆದ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಅವರು ಮಾತನಾಡಿದರು.

‘ನಮಗೆ ಬೀದಿ ಸ್ವಚ್ಛಗೊಳಿಸುವ ‘ಸ್ವಚ್ಛ ಭಾರತ’ ಯೋಜನೆಗಿಂತ ಸಾಮಾಜಿಕ ಭಾರತದ ಸ್ವಚ್ಛತೆ ಅಗತ್ಯವಿದೆ. ತೋರಿಕೆಗಾಗಿ ಬೀದಿಗಳನ್ನು ಗುಡಿಸುವುದೇ ಎಲ್ಲೆಡೆ ರಾರಾಜಿಸುತ್ತಿದೆ. ದಲಿತರಿಗೆ ಸಂವಿಧಾನ ಎಲ್ಲಾ ರೀತಿಯ ಹಕ್ಕುಗಳನ್ನು ಮೀಸಲಾತಿಯನ್ನು ನೀಡಿದೆ. ಆದರೆ ಸಾಮಾಜಿಕ ವ್ಯವಸ್ಥೆ ಅದನ್ನು ಕಿತ್ತುಕೊಳ್ಳುತ್ತಿದೆ. ಅದಕ್ಕಾಗಿ ಅಂತರಂಗದ ಸ್ವಚ್ಛತೆ ಆಗಬೇಕಿದೆ ಅಂತಃರಂಗದೊಳಗೆ ನೆಲೆಸಿರುವ ಜಾತೀಯತೆಯ ವಿಷ ಬೀಜವನ್ನು ಕಿತ್ತೊಗೆಯದೆ, ಬೀದಿ ಭಾರತದ ಸ್ವಚ್ಛತೆಗೊಳಿಸಿದರೆ ಫಲ ನೀಡುವುದಿಲ್ಲ. ಪ್ರಗತಿಪರ ಹೋರಾಟಗಳಲ್ಲಿ ಜನರ ಒಳಗೊಳ್ಳುವಿಕೆ ಬಲಗೊಂಡರೆ ಮಾತ್ರ ಪ್ರಗತಿಪರ ಸಂಘಟನೆಗಳ ಹೋರಾಟಗಳಿಗೆ ಜಯ ಸಿಗಲಿದೆ’ ಎಂದು ಹೇಳಿದರು.

‘ದಲಿತರಿಗೆ ಸಂವಿಧಾನಬದ್ಧವಾಗಿ ಹಲವು ಹಕ್ಕುಗಳನ್ನು ನೀಡಲಾಗಿದೆ. ಇವುಗಳಿಂದ ಅಲ್ಪ ಸಲ್ಪ ಉಪಯೋಗವಾಗಿದ್ದರೂ, ಸಾಮಾಜಿಕ ಕಟ್ಟುಪಾಡುಗಳಿಂದ ದಲಿತರ ಬಾಳು ಹಸನಾಗಿಲ್ಲ. ಈ ಕಾರಣದಿಂದಲೇ ದಲಿತರಿಗೆ ಲಭ್ಯವಾಗಿರುವ ಸಂವಿಧಾನಬದ್ಧ ಹಕ್ಕುಗಳು ಪೂರ್ಣವಾಗಿ ಸಫಲತೆ ಕಂಡಿಲ್ಲ. ಸಮಾಜದಲ್ಲಿ ಆಳವಾಗಿ ಬೇರು ಬಿಟ್ಟಿರುವ ಜಾತಿ ವ್ಯವಸ್ಥೆ ಹಾಗೂ ಅಸ್ಪೃಶ್ಯತೆ ಆಚರಣೆಯಿಂದ ಸಮಸ್ಯೆಗಳು ಪರಿಹಾರ ಕಂಡಿಲ್ಲ’ ಎಂದರು.

ದಲಿತರಿಗೆ ಬೇಕಿರುವುದು ಮಠ, ದೇವಾಲಯಗಳಲ್ಲ :

‘ದಲಿತರಿಗೆ ನಿಜವಾಗಿಯೂ ಬೇಕಿರುವುದು ಭೂಮಿ, ಉದ್ಯೋಗವೇ ಹೊರತು, ಮಠ–ದೇಗುಲಗಳಲ್ಲ. ಹಾಗಾಗಿ ನಮ್ಮ ಹೋರಾಟಗಳು ಅವರಿಗೆ ಶಿಕ್ಷಣ, ಭೂಮಿ ಮತ್ತು ಉದ್ಯೋಗ ದೊರಕಿಸಿ ಕೊಡುವುದಾಗಿರಬೇಕು. ದಲಿತರ ಪರವಾಗಿ ಹೋರಾಟ ನಡೆಸುವವರು ಮೊದಲು ದಲಿತರಿಗೆ ಬೇಕಾಗಿರುವುದು ಏನು? ಎಂಬ ಪ್ರಶ್ನೆ ಹಾಕಿಕೊಳ್ಳಬೇಕು. ಆಳುವ ವರ್ಗವು ದಲಿತರನ್ನು ಭೂಮಿ, ಉದ್ಯೋಗದಿಂದ ವಂಚಿಸಿದೆ. ಮೀಸಲಾತಿಯಿಂದಲೇ ಸ್ವಲ್ಪ ಪ್ರಮಾಣದಲ್ಲಿ ಉದ್ಯೋಗ ಪಡೆಯಲು ಸಾಧ್ಯವಾಗಿದೆ. ದೇವಾಲಯ, ಮಠ ಕಟ್ಟುವುದರಿಂದ ಮೋಕ್ಷ ದೊರೆಯುವುದಿಲ್ಲ. ಹೀಗಾಗಿ ಶಿಕ್ಷಣ, ಉದ್ಯೋಗ ಹಾಗೂ ಭೂಮಿಯನ್ನು ಅವರಿಗೆ ಕೊಡಿಸುವುದು ಹೋರಾಟದ ಗುರಿಯಾಗಬೇಕು ಎಂದು ಬರಗೂರು ರಾಮಚಂದ್ರಪ್ಪರವರು ತಿಳಿಸಿದರು.

ನಿವೃತ್ತ ನ್ಯಾಯಮೂರ್ತಿ ನಾಗಮೋಹನ್ ದಾಸ್ ಅವರು ಮಾತನಾಡಿ ‘ಹಲವು ವರ್ಷಗಳಿಂದ ಜಾತಿಗೆ ಸೀಮಿತವಾಗಿದ್ದ ಅಂಬೇಡ್ಕರ್, ಅವರ 125ನೇ ಜಯಂತಿಯ ಸಂದರ್ಭದಲ್ಲಿ ವಿಶ್ವನಾಯಕರಾಗಿದ್ದಾರೆ. ಒಂದೊಂದು ಧರ್ಮಗಳಿಗೂ ಒಂದೊಂದು ಮಹಾಗ್ರಂಥಗಳಿವೆ. ಆದರೆ, ಭಾರತೀಯರಿಗೆ ಸಂವಿಧಾನವೇ ಮಹಾಗ್ರಂಥ. ಸಂವಿಧಾನದ ಆಶಯಗಳಿಂದಲೇ ಇಂದು ದಲಿತರು ಹಲವು ಕ್ಷೇತ್ರಗಳಲ್ಲಿ ಉತ್ತಮ ಸಾಧನೆ ಮಾಡಲು ಸಾಧ್ಯವಾಗಿದೆ. ಅನನ್ಯ ಹಾಗೂ ಸಾಮಾಜಿಕ ಬದಲಾವಣೆಗೆ ಕಾರಣವಾಗಿರುವ ಸಂವಿಧಾನ ಬರೆದಿರುವ ಅಂಬೇಡ್ಕರ್ ಆಶಯಗಳ ಈಡೇರಿಕೆಗೆ ಒತ್ತು ಸಿಗಬೇಕು. ಸಂವಿಧಾನ ಬರೆದಾತನನ್ನು ಒಂದು ಜಾತಿಗೆ ಸೀಮಿತ ಮಾಡದೆ ಸಮಾಜದ ನಾಯಕನನ್ನಾಗಿ ನೋಡಬೇಕಿದೆ. ಶಿಕ್ಷಣ ಕ್ಷೇತ್ರದಿಂದ, ಕೈಗಾರಿಕಾ ನೀತಿಯಿಂದ, ಕೃಷಿ ನೀತಿಯಿಂದ, ಆಡಳಿತದ ಎಲ್ಲಾ ಸ್ತರಗಳಿಂದಲೂ ಧರ್ಮವನ್ನು ಬೇರ್ಪಡಿಸಿದಾಗ ಮಾತ್ರ ನಿಜವಾದ ಜಾತ್ಯಾತೀತ ರಾಷ್ಟ್ರ ಆಗುತ್ತದೆ’ ಎಂದರು.

ದಲಿತ ಹಕ್ಕುಗಳ ಸಮಿತಿ ಸಮಿತಿ ರಾಜ್ಯ ಸಂಚಾಲಕ ಗೋಪಾಲಕೃಷ್ಣ ಅರಳಹಳ್ಳಿ ಮಾತನಾಡಿ, ‘2014ರಲ್ಲಿ ದೇಶದಲ್ಲಿ 40 ಸಾವಿರ ಮಂದಿ ದಲಿತರು ದೌರ್ಜನ್ಯಕ್ಕೆ ಒಳಗಾಗಿದ್ದಾರೆ. 2015ರಲ್ಲಿ ಈ ಸಂಖ್ಯೆ 32,560ಕ್ಕೆ ಬಂದಿದೆ. ಇದನ್ನೇ ಬಿಜೆಪಿ ದೊಡ್ಡ ಸಾಧನೆ ಎಂಬಂತೆ ತಮ್ಮ ಸರ್ಕಾರ ಬಂದ ಮೇಲೆ ದಲಿತರ ಮೇಲಿನ ದೌರ್ಜನ್ಯ ಕಡಿಮೆಯಾಗಿದೆ ಎಂದು ಬಿಂಬಿಸುತ್ತಿದೆ‘ ಎಂದು ಟೀಕಿಸಿದರು/

ದಲಿತ ಹಕ್ಕುಗಳ ಸಮಿತಿ ಸಹ ಸಂಚಾಲಕ ಪಿ.ನಾಗರಾಜ್ ಅವರು ಮಾತನಾಡಿ ‘ಜಾತಿ ವ್ಯವಸ್ಥೆಯನ್ನು, ಯುದ್ಧವನ್ನು ಸಮರ್ಥಿಸಿಕೊಳ್ಳುವ ಭಗವದ್ಗೀತೆಯನ್ನು ರಾಷ್ಟ್ರೀಯ ಗ್ರಂಥ ಎನ್ನುತ್ತಿದ್ದಾರೆ. ಇದು ನಮ್ಮ ವಿಪರ್ಯಾಸ’ ಎಂದರು.

ಕಾರ್ಯಕ್ರಮದಲ್ಲಿ ನ್ಯಾಷನಲ್ ಎಜುಕೇಷನ್ ಸೊಸೈಟಿಯ ಕಾರ್ಯದರ್ಶಿ ಪ್ರೋ.ಎನ್.ಎಸ್.ನಾಗರಾಜರೆಡ್ಡಿ, ಸಮುದಾಯ ಸಾಂಸ್ಕೃತಿಕ ಸಂಘಟನೆ ರಾಜ್ಯ ಕಾರ್ಯದರ್ಶಿ ಟಿ.ಸುರೇಂದ್ರರಾವ್, ಕಟ್ಟಡ ಇತರೆ ನಿರ್ಮಾಣ ಕಾರ್ಮಿಕರ ಸಂಘದ ಅಧ್ಯಕ್ಷ ಎಸ್.ಲಕ್ಷ್ಮಣಕುಮಾರ್, ಮತ್ತಿತರರು ಭಾಗವಹಿಸಿದ್ದರು. ●

ಕೇಳಿಸಿದ್ದು

ಈವರೆಗೆ ನನಗೆ ಸಿಕ್ಕಿರೋ ಪ್ರಶಸ್ತಿಗಳು
ಜೈಲುವಾಸ, ಗೋಲಿಬಾರ್, ವಿಚಾರಣೆ
ಇವೇ ಎಲ್ಲ. ಈ ಬಗ್ಗೆ ನನಗೆ ದುಃಖವಿಲ್ಲ,
ಬದಲಿಗೆ ಹೆಮ್ಮೆ ಇದೆ. ಈ ಎಲ್ಲ ಪ್ರಶಸ್ತಿಗಳು
ಸಿಕ್ಕಿರೋದು ನನ್ನ ಹೋರಾಟಕ್ಕೆ.

–ವರಲಕ್ಷ್ಮಿ, ಸಿಐಟಿಯು ರಾಜ್ಯಾಧ್ಯಕ್ಷೆ
@#ಸಹಿಷ್ಣುತೆಎಂಬುದುಗೆಲುವು

ಬ್ರಿಕ್ಸ್ ಶೃಂಗಸಭೆ: ಆಳುವ ಮಂದಿಯ ಹುಸಿ ರಾಷ್ಟ್ರಭಕ್ತಿ ನಿಜ ರಾಷ್ಟ್ರೀಯ ಹಿತಾಸಕ್ತಿಯನ್ನು ಹಿಂದಕ್ಕೆ ತಳ್ಳಿತೇ?

ಕಳೆದ ವಾರ ದೇಶದಲ್ಲಿ ನಿಜವಾದ ರಾಷ್ಟ್ರೀಯ ಹಿತಾಸಕ್ತಿ ಮತ್ತು ದೇಶಭಕ್ತಿಯ ಹೆಸರಲ್ಲಿ ಆಳುವ ಮಂದಿಯ, ಅದರಲ್ಲೂ ಮುಖ್ಯವಾಗಿ ಅವರ ಪ್ರಶ್ನಾತೀತ ಮುಖಂಡರ ಪ್ರತಿಷ್ಠೆಯ ನಡುವೆ ಸ್ಪರ್ಧೆ ಏರ್ಪಟ್ಟಂತಿತ್ತು ಎಂಬುದು ರಾಜತಾಂತ್ರಿಕ ವಲಯದ ಪರಿಣಿತರ ವಿಶ್ಲೇಷಣೆ. ಮೊದಲಿಗೆ ಉರಿ ಭಯೋತ್ಪಾದಬೆ, ಅದಕ್ಕೆ ಉತ್ತರವಾಗಿ ನಡೆದ ಭಾರತೀಯ ಸೇನೆಯ 'ಸರ್ಜಿಕಲ್' ಪ್ರಹಾರದ ಹಿನ್ನೆಲೆಯಲ್ಲಿ ಪಾಕಿಸ್ತಾನದಲ್ಲಿ ಈ ನವಂಬರಿನಲ್ಲಿ ನಡೆಯಬೇಕಾಗಿದ್ದ ಸಾರ್ಕ್ ಶೃಂಗ ಸಭೆಯನ್ನು ರದ್ದು ಮಾಡುವಲ್ಲಿ ತಮಗೆ ಯಶಸ್ಸು ಸಿಕ್ಕಿತು, ಇದೊಂದು ರಾಜತಾಂತ್ರಿಕ ಗೆಲುವು ಎಂದು ಬೆನ್ನು ತಟ್ಟಿ ಕೊಂಡ ಗುಂಗಿನಲ್ಲೇ ನಂತರ ಗೋವಾದಲ್ಲಿ ಭಾರತದ ಅಧ್ಯಕ್ಷತೆಯಲ್ಲಿ ನಡೆದಿರುವ ಬ್ರಿಕ್ಸ್‌ದೇಶಗಳ ಮುಖ್ಯಸ್ಥರ ಸೃಂಗಸಭೆಯಲ್ಲೂ ನಮ್ಮ ನೆರೆದೇಶದ ಟೀಕೆಗಳ ಸುರಿಮಳೆ ಮುಂದುವರೆಯಿತು.

ಈ ಭರದಲ್ಲಿ ಮುಖ್ಯ ಅಜೆಂಡಾ ಹಿಂದಕ್ಕೆ ಸರಿಯುವಂತಾಗಿದೆ. ಇದು ಈ ವರ್ಷವನ್ನು ಭಾರತದ ಮಟ್ಟಿಗೆ 'ಬಹುಪಕ್ಷೀಯ ರಾಜತಾಂತ್ರಿಕತೆ'ಯ ವಿಷಯದಲ್ಲಿ ವಿವಾದಾಸ್ಪದ ವರ್ಷವಾಗಿ ಮಾಡಿದೆ ಎಂದು ಭಾರತದ ನಿವೃತ್ತ ರಾಯಭಾರಿ ಭದ್ರಕುಮಾರ್ ತಮ್ಮ ವಿಶ್ಲೇಷಣೆಯಲ್ಲಿ ಅಭಿಪ್ರಾಯ ಪಟ್ಟಿದ್ದಾರೆ.


ಹಾಗೆ ನೋಡಿದರೆ ಸಾರ್ಕ್ ಸಭೆಯನ್ನು ರದ್ದು ಮಾಡಿಸಿದ್ದನ್ನು ರಾಜತಾಂತ್ರಿಕ ವಿಜಯ ಎನ್ನಬಹುದೇ ಎಂಬ ಪ್ರಶ್ನೆಯೂ ಎದ್ದಿದೆ. ಬಾಂಗ್ಲಾದೇಶ ಮತ್ತು ಶ್ರೀಲಂಕಾ ಕೂಡ ಈ ಸಭೆಯ ಮುಂದೂಡಿಕೆ ಕೇಳಿದ್ದರಂತೆ, ಆದರೆ ಭಾರತ ಬಯಸಿದಂತೆ "ಭಯೋತ್ಪಾದನೆ'ಯ ಕಾರಣಕ್ಕಾಗಿ ಅಲ್ಲ. ಅಫಘಾನಿಸ್ತಾನ ಕೂಡ. ನೇಪಾಳ ಸಭೆ ರದ್ದಾದುದಕ್ಕೆ ಖೇದ ವ್ಯಕ್ತಪಡಿಸಿದರೆ ಮಾಲ್ಡೀವ್ಸ್ ಮೌನವಾಗಿದೆ. ಈ ಹಿನ್ನೆಲೆಯಲ್ಲಿ ನಮ್ಮ ಆಳರಸರು ಹೇಳಿಕೊಳ್ಳುವ ರಾಜತಾಂತ್ರಿಕ ಯಶಸ್ಸು ಎಂತದ್ದು ಎಂಬುದು ಊಹೆಗೆ ಬಿಟ್ಟ ಸಂಗತಿ.

ಆದರೆ ಬ್ರಿಕ್ಸ್ ಶೃಂಗದಲ್ಲಿ ಇಂತಹ ರಾಜತಂತ್ರಿಕ ಯಶಸ್ಸೂ ಸಂದೇಹಾಸ್ಪದವಾಯಿತು. ಗೋವಾದಲ್ಲಿ ನಡೆದ ಶೃಂಗ ಸಭೆಯ ಅಧ್ಯಕ್ಷತೆ ವಹಿಸಿದ್ದ ಭಾರತದ ಪ್ರಧಾನಿಗಳು 'ಭಯೋತ್ಪಾದನೆಯ ತಾಯಿ ನೌಕೆ' ನಮ್ಮ ನೆರೆಯಲ್ಲೇ ಇದೆ ಎಂದೆಲ್ಲಾ ಹೇಳಿ ಸಭೆಯ ಹೇಳಿಕೆಯಲ್ಲಿ ಇವನ್ನೆಲ್ಲ ಒಳಗೊಳ್ಳಲಾಗುತ್ತದೆ ಎಂದು ನಿರೀಕ್ಷೆ ಇಟ್ಟುಕೊಂಡಿದ್ದರು. ಆದರೆ ಗೋವಾ ಘೋಷಣೆಯಲ್ಲಿ ಗಡಿಯಾಚೆಯ ಭಯೋತ್ಪಾದನೆ ಅಥವ ಪ್ರಭುತ್ವ–ಪ್ರಾಯೋಜಿತ ಭಯೋತ್ಪಾದನೆಯ ಬಗ್ಗೆ ಭಾರತದ ಮುಖಂಡರ ಅಭಿಪ್ರಾಯ ಬಿಂಬಿತವಾಗಲಿಲ್ಲ. ಈ ದಸ್ತಾವೇಜು ಅಂತರ್ರಾಷ್ಟ್ರೀಯ ಭಯೋತ್ಪಾದನೆಯ ಪಿಡುಗಿನ ಬಗ್ಗೆ ವಿಸ್ತಾರವಾಗಿ ಹೇಳಿದೆಯಾದರೂ ಪರೋಕ್ಷವಾಗಿಯಾದರೂ ಪಾಕಿಸ್ತಾನದ ಹೆಸರೇ ಬಂದಿಲ್ಲ ಎಂದು ಬೊಟ್ಟು ಮಾಡುತ್ತಿದ್ದಾರೆ ರಾಜತಾಂತ್ರಿಕ ವಲಯದ ಪರಿಣಿತರು. ಒಟ್ಟಿನಲ್ಲಿ ಭಾರತ ತನ್ನ ನೆರೆ ದೇಶವನ್ನು ಟೀಕಿಸುವ ಉಪ–ಅಜೆಂಡಾದ ಮೇಲೆಯೇ ಗಮನ ಕೇಂದ್ರೀಕರಿಸಿ ಮುಖ್ಯ ಅಜೆಂಡಾವನ್ನು ನಿರ್ಲಕ್ಷಿಸಿದರೆ, ಬ್ರಿಕ್ಸ್ ಶೃಂಗ ಸಭೆ ಇದು ತನ್ನ ಅಜೆಂಡಾಕ್ಕೆ ಅಸಂಬದ್ಧ ಎಂದು ಬದಿಗೆ ತಳ್ಳಿತು. ಇಂತಹ ರಸ್ತೆ ಅಪಘಾತ ಏಕೆ ಸಂಭವಿಸಿತು ಎಂದು ಭಾರತದ ರಾಜತಾಂತ್ರಿಕರು ವಿವರಿಸಬೇಕಾಗುತ್ತದೆ ಎಂದು ಭದ್ರಕುಮಾರ್ ಅಭಿಪ್ರಾಯ ಪಡುತ್ತಾರೆ.

ಇದನ್ನು ಸಾರ್ಕ್‌ಗಿಂತ ಭಿನ್ನವಾಗಿ ಬ್ರಿಕ್ಸ್ ಕೂಟದ ಜಾಗತಿಕ ಮಹತ್ವದ ಹಿನ್ನೆಲೆಯಲ್ಲಿ ನೋಡಬೇಕಾಗುತ್ತದೆ. ಬ್ರಿಕ್ಸ್ ಮೂಡಿಬಂದದ್ದು ಅಮೆರಿಕಾ ಮತ್ತು ಪಾಶ್ಚಿಮಾತ್ಯ ದೇಶಗಳ ಪ್ರಾಬಲ್ಯಕ್ಕೆ ಸವಾಲಾಗಿ, ಸೂಪರ್‌ಪವರ್ ರಾಜಕೀಯ ಇಳಿಮುಖಗೊಂಡು ಬಹುಪಕ್ಷೀಯತೆಯತ್ತ ಜಗತ್ತು ಸಾಗಲಾರಂಭಿಸಿದ ಸಂದರ್ಭದಲ್ಲಿ. ಈ ಕೂಟದ ಸದಸ್ಯ ರಾಷ್ಟ್ರಗಳಾದ ಬ್ರೆಝಿಲ್, ರಷ್ಯ, ಚೀನಾ, ಭಾರತ ಮತ್ತು ದಕ್ಷಿಣ ಆಫ್ರಿಕಾದ ಒಟ್ಟು ಜನಸಂಖ್ಯೆ ಇಡೀ ಜಗತ್ತಿನ ಜನಸಂಖ್ಯೆಯ 40% ದಷ್ಟಾಗುತ್ತದೆ, ಇವುಗಳ ಒಟ್ಟು ಜಿಡಿಪಿ ಜಗತ್ತಿನ ಒಟ್ಟು ಜಿಡಿಪಿಯ 20%ದಷ್ಟು, ಜಾಗತಿಕ ವ್ಯಾಪಾರದ 20%ದಷ್ಟು ಪಾಲು ಈ ದೇಶಗಳದ್ದು, ಮತ್ತು ಬಹಳ ಮಹತ್ವದ್ದೆಂದರೆ ಜಾಗತಿಕ ಆರ್ಥಿಕದ ಬೆಳವಣಿಗೆ ದರದಲ್ಲಿ ಈ ಐದು ದೇಶಗಳ ಪಾಲು 40%. ಈಗಾಗಲೇ ಪ್ರತ್ಯೇಕ ಬ್ರಿಕ್ಸ್ ಬ್ಯಾಂಕ್ ಮತ್ತು ಆಯಕಟ್ಟಿನ ಮೀಸಲು ನಿಧಿ ರಚನೆಗೊಂಡಿದೆ. ಅಲ್ಲದೆ ಈಗ ಈ ಕೂಟ ಅಂತರ್ರಾಷ್ಟ್ರೀಯ ರಾಜಕೀಯ ರಂಗದಲ್ಲೂ ಮುಖ್ಯ ಪಾತ್ರಧಾರಿಯಾಗುತ್ತಿದೆ. ಅಂತರ್ರಾಷ್ಟ್ರೀಯ ಕಾನೂನುಗಳನ್ನು ಮತ್ತು ವಿಶ್ವಸಂಸ್ಥೆಯ ಚಾರ್ಟರನ್ನು ಎತ್ತಿ ಹಿಡಿಯುವಲ್ಲಿಯೂ, ಅಮೆರಿಕಾದ ಹಸ್ತಕ್ಷೇಪದ ಧೋರಣೆಗಳನ್ನು ಪ್ರಶ್ನಿಸುವಲ್ಲಿಯೂ ಈ ಕೂಟದ ದನಿಗಳಿಗೆ ಹೆಚ್ಚಿನ ಮಹತ್ವ ನೀಡಲಾಗುತ್ತಿದೆ.

ಇಂತಹ ಒಂದು ಸಂಘಟನೆಯ ಶೃಂಗಸಭೆಯ ಅಧ್ಯಕ್ಷತೆ ಒಂದು ಉದೀಯಮಾನ ಶಕ್ತಿಯಾಗಿ, ವಿಶ್ವಸಂಸ್ಥೆಯ ಭದ್ರತಾ ಸಮಿತಿಯಲ್ಲಿ ಸದಸ್ಯತ್ವದ ಆಕಾಂಕ್ಷಿಯಾಗಿ ಮುಖಂಡತ್ವದ ಪಾತ್ರವನ್ನು ಪ್ರದರ್ಶಿಸುವ ಒಂದು ಅಪರೂಪದ ಅವಕಾಶವಾಗಿ ಭಾರತಕ್ಕೆ ದಕ್ಕಿತ್ತು. ಆದರೆ ಟೊಳ್ಳು ಬಡಾಯಿಯೇ ಮುಖ್ಯವಾಗಿ ಬಿಟ್ಟಿರುವ ಒಳ್ಳೆಯ ದಿನಗಳ ನೇತಾರರು ಅದನ್ನು ಕಳಕೊಳ್ಳುವಂತಾಗಿದೆ. **'ಸರ್ಜಿಕಲ್' ಪ್ರಹಾರ ಒಬ್ಬ ವಿಭಿನ್ನ , ಬಾಹುಬಲಿ ಮುಖಂಡನ ನೇತೃತ್ವದಲ್ಲಿ ಒಂದು 'ನವಭಾರತ' ಮೂಡಿಸಿರುವ ಘಟನೆ ಎಂದು ಪ್ರದರ್ಶಿಸುವ ಭರದಲ್ಲಿ ನಿಜವಾಗಿಯೂ ಜಾಗತಿಕ ರಂಗದಲ್ಲಿ ಒಂದು ಪ್ರಮುಖ ಶಕ್ತಿಯಾಗಿ ಮೂಡಿ ಬರುವ ಅವಕಾಶವನ್ನು ಕಳಕೊಳ್ಳಲಾಗಿದೆಯೇ**? ನಮ್ಮ ಪ್ರಧಾನ ಮಂತ್ರಿಗಳಿಗೆ ಈ ಬ್ರಿಕ್ಸ್ ಸಮಾರಂಭದ ಮೇಲೆ ಗಮನ ಕೇಂದ್ರೀಕರಿಸಬೇಕಾದುದರ ಅತ್ಯುನ್ನತ ಮಹತ್ವದ ಅರಿವು ಇರಲಿಲ್ಲವೇ, ಅದರಿಂದಾಗಿಯೇ ಭಾರತ–ಪಾಕಿಸ್ತಾನ ಸಂಬಂಧಗಳನ್ನು ಬ್ರಿಕ್ಸ್‌ನ ಮುಖ್ಯ ಅಜೆಂಡಾದೊಂದಿಗೆ ಬೆರೆಸಿ ಗೋಜಲುಗೊಳಿಸಿದರೇ ಎಂಬ ಸಂದೇಹವೂ ಕೆಲವು ವೀಕ್ಷಕರಿಗೆ ಬಂದಿದೆ.

ಅಂತೂ ಅಮೆರಿಕಾಕ್ಕೆ ಇದರಿಂದ ಸಂತೋಷವಾದಂತಿದೆ. ಏಕೆಂದರೆ ಈಗಾಗಲೇ ಬ್ರಿಕ್ಸ್‌ನ ಒಂದು ದೇಶ ಬ್ರೆಝೀಲ್‌ನಲ್ಲಿ ಅದು ತನ್ನ ಕೈಗೊಂಬೆ ಬಲಪಂಥೀಯ ಅಧ್ಯಕ್ಷರನ್ನು ಕೂರಿಸುವಲ್ಲಿ ಯಶಸ್ವಿಯಾಗಿದೆ. ಇನ್ನೊಂದು ದೇಶ ದಕ್ಷಿಣ ಆಫ್ರಿಕಾದಲ್ಲೂ ಅಂತಹುದೇ ಪ್ರಯತ್ನ ನಡೆಯುತ್ತಿದೆ ಎನ್ನಲಾಗಿದೆ.



ಸೋಲನ್ನು ಗೆಲುವೆನ್ನುವ ಮತ್ತೊಂದು ನಿದರ್ಶನ ತರಂಗಾಂತರ ಹರಾಜಿನಲ್ಲಿ ಕೇವಲ 11.6% ಗಳಿಕೆ

ಇತ್ತೀಚೆಗೆ ನಡೆದ ತರಂಗಾಂತರ (ಸ್ಪೆಕ್ಟ್ರಂ) ಹರಾಜಿನಲ್ಲಿ ನಿರೀಕ್ಷಿತ 5.6ಲಕ್ಷ ಕೋಟಿ ರೂ.ಗಳ ಬದಲು ಕೇವಲ 65,000 ಕೋಟಿಯಷ್ಟು ಮಾತ್ರವೇ ಹರಾಜಾಗಿದೆ. ಇದರಲ್ಲಿ ಸರಕಾರಕ್ಕೆ ಸಿಗುವುದು 32,000 ಲಕ್ಷ ಕೋಟಿ . ಪ್ರಸಕ್ತ ಬಜೆಟಿನಲ್ಲಿ 98,994.93 ಕೋಟಿ ರೂ. ರೆವಿನ್ಯೂ ಸಿಗುವ ಅಂದಾಜು ಮಾಡಲಾಗಿತ್ತು ಎಂಬುದನ್ನು ಇಲ್ಲಿ ಗಮನಿಸಬಹುದು.

ಆದರೂ ಇದೊಂದು ಯಶಸ್ವಿ ಹರಾಜು ಎಂದು ಸರಕಾರ ಹೇಳಿಕೊಂಡಿದೆ. ಇದುವರೆಗಿನ ಅತ್ಯಂತ ಪಾರದರ್ಶಕವಾಗಿ ನಡೆದ ಅತಿ ದೊಡ್ಡ ಹರಾಜು ಇದು ಎಂದು ಅದು ಬೆನ್ನು ತಟ್ಟಿಕೊಂಡಿದೆ. ಪಾರದರ್ಶಕತೆಯ ಬಗ್ಗೆ ಹೇಳುವುದಾದರೆ ಇದೇ ಸರಕಾರ 2015ರಲ್ಲಿ ನಡೆಸಿದ ಹರಾಜು ಪಾರದರ್ಶಕವಗಿರಲಿಲ್ಲ ಎಂದು ಭಾವಿಸಬೇಕೇ ಎಂದೊಬ್ಬರು ಪ್ರಶ್ನಿಸಿದ್ದಾರೆ. ಇನ್ನು 'ಅತಿದೊಡ್ಡ' ಎಂಬ ಬಗ್ಗೆ–ಹರಾಜಿಗೆ ಇಟ್ಟ ಪ್ರಮಾಣವೇ ಅತಿ ದೊಡ್ಡದಾಗಿರುವಾಗ ಹೀಗೆಂದು ಹೇಳಿಕೊಳ್ಳುವುದು ಅರ್ಥಹೀನ. ನಿಜಸಂಗತಿಯೆಂದರೆ ಇದೇ ಸರಕಾರ 2015ರಲ್ಲಿ ನಡೆಸಿದ ಹರಾಜಿನಲ್ಲಿ ಹರಾಜಾಗದೆ ಉಳಿದಿದ್ದ ಪ್ರಮಾಣ ಕೇವಲ 11%, ಈಭಾರಿ ಅದರ ಪ್ರಮಾಣ 60%. ಅದರಲ್ಲೂ ಬಹಳ ಬೆಲೆಬಾಳುವ 700 ಮೆಗಾಹರ್ಟ್ಝ್ ಏನೇನೂ ಮಾರಾಟವಾಗಿಲ್ಲ. ಈ ಬಗ್ಗೆ ಸರಕಾರಕ್ಕೆ ಬೇಸರವಿಲ್ಲವಾದರೆ ಹರಾಜಿನಲ್ಲಿ ಭಾಗವಹಿಸುವವರಿಗೆ ಆಕರ್ಷಕವಾಗಿಲ್ಲದ ತರಂಗಾಂತರವನ್ನು ತಿಳಿದೂ ತೀಳಿದೂ ಹರಾಜಿಗೆ ಇಡಲಾಗಿತ್ತೇ ಎಂಬ ಪ್ರಶ್ನೆಯನ್ನೂ ಕೆಲವರು ಎತ್ತಿದ್ದಾರೆ.

'ಕಾಲ್ ಡ್ರಾಪ್' ಅಂದರೆ ಕರೆಗಳು ಮಧ್ಯದಲ್ಲೇ ಕಡಿತಗೊಳ್ಳುವ ವಿದ್ಯಮಾನಕ್ಕೆ ತಮ್ಮ ಬಳಿ ಸಾಕಷ್ಟು ತರಂಗಾಂತರ ಇಲ್ಲದಿರುವುದೇ ಕಾರಣ ಎಂದು ದೊಡ್ಡ–ದೊಡ್ಡ ಮೊಬೈಲ್ ಸೇವಾ ಕಂಪನಿಗಳು ಸಬೂಬು ಕೊಡುತ್ತಿದ್ದವು. ಆದರೂ ತರಂಗಾಂತರವನ್ನು ಕೊಳ್ಳುವ ಅವಕಾಶ ಕೊಟ್ಟಾಗ ಅದನ್ನೇಕೆ ಅವು ಬಳಸಿಕೊಂಡಿಲ್ಲ ಎಂಬುದು ವಿಶ್ಲೇಷಕರನ್ನು ಕಾಡುವ ಮತ್ತೊಂದು ಪ್ರಶ್ನೆ.

ಈ ಹರಾಜು ನಿಜವಾಗಿ ವಿಫಲಗೊಂಡಿದೆ ಎಂಬುದರಲ್ಲಿ ಸಂದೇಹವಿಲ್ಲ. ಈ ವಿಫಲತೆ ಟೆಲಿಕಾಂ ವಲಯದಲ್ಲಿನ ಸಮಸ್ಯೆಗಳನ್ನು ತೋರಿಸಿದೆ ಎನ್ನುತ್ತಾರೆ ಈ ವಲಯದ ಆಳವಾದ ಅಧ್ಯಯನ ಮಾಡಿರುವ ಪ್ರಬೀರ್ ಪುರಕಾಯಸ್ಥ. ಮಾಧ್ಯಮಗಳನ್ನು ಬುಟ್ಟಿಗೆ ಹಾಕಿಕೊಂಡು ಸೋಲನ್ನು ಗೆಲವು ಎಂದು ಪ್ರದರ್ಶಿಸುವ 'ಒಳ್ಳೆಯ ದಿನ'ಗಳ ತಂತ್ರ ಇಲ್ಲಿಯೂ ಕಾಣಿಸುತ್ತಿದೆ. ಟೆಲಿಕಾಂ ವಲಯದಲ್ಲಿ ಎಲ್ಲವೂ ಸರಿಯಾಗಿಲ್ಲ ಎಂಬುದೇ ಈ ಬಾರಿಯ ತರಂಗಾಂತರ ಹರಾಜಿನ ಸಂದೇಶ ಎನ್ನುತ್ತಾರೆ ಪ್ರಬೀರ್.

ಭಾರತೀಯ ಸೇನೆ ವಿಶ್ವಸಂಸ್ಥೆಯ ನಿರ್ಣಯಗಳನ್ನು ಎಗ್ಗಿಲ್ಲದೆ ಉಲ್ಲಂಘಿಸುವ ಇಸ್ರೇಲೀ ಸೇನೆಯಲ್ಲ ಸ್ವಾಮಿ!

'ಸರ್ಜಿಕಲ್ ಸ್ಟ್ರೈಕ್' ಬಗ್ಗೆ ಎದೆ ಬಡಿದುಕೊಂಡದ್ದು ಸಾಕು ಎಂದು ಪ್ರಧಾನ ಮಂತ್ರಿಗಳು ಹೇಳಿದ ನಂತರವೂ ರಕ್ಷಣಾ ಮಂತ್ರಿಗಳು ಎದೆ ಬಡಿದುಕೊಳ್ಳುವದನ್ನು ನಿಲ್ಲಿಸಿಯೇ ಇಲ್ಲ. ಈ ವಾರ ಅವರು ಇದು ಆರೆಸ್ಸೆಸ್ ಬೋಧನೆಯ ಫಲ ಎಂದು ಇನ್ನೊಂದು ಬೊಬ್ಬೆ ಹಾಕಿದ್ದಾರೆ. ಮೋದಿ ಗಾಂಧಿ ನಾಡಿನವರು, ನನ್ನ ರಾಜ್ಯ ಗೋವಾದಲ್ಲಿ ಕ್ಷತ್ರಿಯ ಜಾತಿಯೇ ಇಲ್ಲ, ಆದರೂ ಈ 'ಪ್ರಹಾರ' ಹೇಗೆ ಸಾಧ್ಯವಾಯಿತು? ಏಕೆಂದರೆ ಅದನ್ನು ಮಾಡಿದ್ದು ನಮ್ಮ ಭಾರತೀಯ ಸೇನೆಯ ತರಬೇತಿ ಹೊಂದಿದ ಕಮಾಂಡೋಗಳು ಎಂಬದು ಯಾರಿಗಾದರೂ ತೋಚುವ ಸರಳ ಉತ್ತರ. ಆದರೆ ಅವರನ್ನು ತಮ್ಮ ಸ್ವಂತ ಸಾಮರ್ಥ್ಯದ ಅರಿವಿಲ್ಲದ ಹನುಮಂತರುಗಳು ಎಂದಿರುವ ರಕ್ಷಣಾ ಮಂತ್ರಿಗಳು ಅದನ್ನು ಹೇಗೆ ಒಪ್ಪಿಯಾರು? ಇದು ಆರೆಸ್ಸೆಸ್‌ನ ಉಪದೇಶಗಳ ಫಲ ಎಂದಿದ್ದಾರೆ ಅವರು! 1971ರಲ್ಲಿ ಬಲಿಷ್ಟ ಅಮೆರಿಕನ್ ಏಳನೇ ನೌಕಾಪಡೆ ಬಂಗಾಳ ಕೊಲ್ಲಿಯಲ್ಲಿ ಪಾಕಿಸ್ತಾನದ ಪರವಾಗಿ ನಿಂತಿದ್ದರೂ ಲೆಕ್ಕಿಸದೆ ಪಾಕಿಸ್ತಾನೀ ಸೇನೆ ಶರಣಾಗುವಂತೆ ಮಾಡಿ ಬಾಂಗ್ಲಾದೇಶದ ವಿಮೋಚನೆ ನಡೆಸಿದ್ದೂ ಆರೆಸ್ಸೆಸ್ ಉಪದೇಶಗಳಿಂದಲೇ ಏನು ಎಂದು ಅವರನ್ನು ಕೇಳುವುದು ಬಹುಶಃ ಅರ್ಥಹೀನ.



ವ್ಯಂಗ್ಯಚಿತ್ರ: ಮುಂಜುಲ್, ಡಿಎನ್‌ಎ

ಅದಿರಲಿ, ಈ ವಾರ ಈ ಎದೆ ಬಡಿದುಕೊಳ್ಳುವ ಮಂತ್ರಿಯನ್ನು ಹಾಗೆ ಬಡಿದುಕೊಳ್ಳಬೇಡಿ ಎಂದು ಹೇಳಿದ ಮಹಾ ಮುಖಂಡರೇ ಆ ಕೆಲಸ ಮಾಡಿರುವುದು ವಿಶೇಷ. ಈ ಮೂಲಕ ಅವರ ಈ 'ಕರೆ'ಯೂ ಅವರ ಈ ಹಿಂದಿನ ದಿವ್ಯಮೌನಗಳ ಇನ್ನೊಂದು ರೂಪ ಎಂದು ಸಾಬೀತಾಗಿದೆ.

ಅತ್ತ ಅವರ ವಿದೇಶಾಂಗ ಕಾರ್ಯದರ್ಶಿಗಳು ವಿದೇಶಾಂಗ ವ್ಯವಹಾರಗಳ ಸಂಸದೀಯ ಸಮಿತಿಯ ಮುಂದೆ 'ಸರ್ಜಿಕಲ್ ಸ್ಟ್ರೈಕ್' ಎಂಬ ಪದವನ್ನೇ ಬಳಸದೆ ಇದು ಭಾರತೀಯ ಸೇನೆ ಗಡಿಯಾಚೆ ನಡೆಸಿದ ಮೊದಲ ಕಾರ್ಯಾಚರಣೆಯೇನಲ್ಲ, ಅದರೆ ಹೊಸ ವ್ಯೂಹದ ಅಡಿಯಲ್ಲಿ ಮೊದಲ ಬಾರಿಗೆ ಸಾರ್ವಜನಿಕವಾಗಿ ಪ್ರಕಟಿಸಲಾಯಿತು ಎನ್ನುತ್ತಿರುವಾಗಲೇ ಸ್ವತಃ ಪ್ರಧಾನ ಮಂತ್ರಿಗಳು ಹಿಮಾಚಲ ಪ್ರದೇಶದಲ್ಲಿ ರ್‍ಯಾಲಿಯೊಂದರಲ್ಲಿ ಮಾತಾಡುತ್ತ ಭಾರತೀಯ ಸೇನೆಯ 'ಸರ್ಜಿಕಲ್' ಪ್ರಹಾರಗಳನ್ನು ಕುಖ್ಯಾತ ಇಸ್ರೇಲಿ 'ಸಾಧನೆ'ಗಳಿಗೆ ಹೋಲಿಸಿದರು ಎಂದು ವರದಿಯಾಗಿದೆ. ಅವರಿಗೂ ಅಮೆರಿಕಾದ ಬಲಿಷ್ಟ ಏಳನೇ ನೌಕಾಪಡೆಯನ್ನೂ ಲೆಕ್ಕಿಸದೆ ಬಾಂಗ್ಲಾದೇಶದ ವಿಮೋಚನೆಗೆ ನೆರವಾದ್ದು ಧೈರ್ಯದ ಕೆಲಸ ಎಂದು ಅನಿಸಿದಂತಿಲ್ಲ.

ಇರಲಿ, ಪ್ರಧಾನಿಗಳು ಈ ಪ್ರಹಾರದ ರಾಜಕೀಯ ಪ್ರಯೋಜನ ಗಿಟ್ಟಿಸುವ ಹವಣಿಕೆಯ ಭರದಲ್ಲಿ ಈ ಇಸ್ರೇಲಿ 'ಧೀರ' ಕಾರ್ಯಾಚರಣೆಗಳು ವಿದೇಶಿ ಆಕ್ರಮಣದಿಂದ ತಮ್ಮ ತಾಯ್ನಾಡಿನ ವಿಮೋಚನೆಗಾಗಿ ಹೋರಾಟ ನಡೆಸುತ್ತಿರುವ ಜನತೆಯ ವಿರುದ್ಧ ಎಂಬುದನ್ನು ಮರೆತೇ ಬಿಟ್ಟಿದ್ದಾರೆ ಎಂದು ಪತ್ರಕರ್ತ ಸಿದ್ಧಾರ್ಥ ವರದರಾಜನ್ ಟಿಪ್ಪಣಿ ಮಾಡಿದ್ದಾರೆ.


ಅವರು ಹೇಳಿರುವಂತೆ, ಇಸ್ರೇಲ್ ಭಾರತವಲ್ಲ, ಪಾಕಿಸ್ತಾನ ಆಕ್ರಮಿತ ಕಾಶ್ಮೀರ ಪ್ಯಾಲೆಸ್ಟೈನ್ ಅಲ್ಲ, ಭಾರತೀಯ ಸೇನೆ ವಿಶ್ವಸಂಸ್ಥೆಯ ಕಾನೂನುಗಳನ್ನು, ನಿರ್ಣಯಗಳನ್ನು ಎಗ್ಗಿಲ್ಲದೆ ಉಲ್ಲಂಘಿಸುವ ಇಸ್ರೇಲ್ ಸೇನೆಯಲ್ಲ. ಬಹುಶಃ ಇದನ್ನು ಆರೆಸ್ಸೆಸ್ ಇವರೆಲ್ಲರಿಗೆ ತಿಳಿಸಿರಲಿಕ್ಕಿಲ್ಲ!

ಜಾಗತಿಕ ಹಸಿವಿನ ಸೂಚ್ಯಂಕದಲ್ಲಿ ಭಾರತದ ಸ್ಥಾನ 118 ದೇಶಗಳಲ್ಲಿ 97ನೇಯದ್ದು –ಸುದ್ದಿ 1


ಅಯೋಧ್ಯೆಯಲ್ಲಿ ರಾಮಾಯಣ ಮ್ಯೂಸಿಯಂ ಸ್ಥಾಪಿಸಲು 25 ಎಕ್ರೆ ಭೂಮಿಯ ಸರ್ವೆ ಮಾಡಲು ಕೆಂದ್ರ ಪ್ರವಾಸೋದ್ಯಮ ಮಂತ್ರಿಗಳು ಅಕ್ಟೋಬರ್ 18ರಂದು ಅಯೋಧ್ಯೆಗೆ ಧಾವಿಸಿದ್ದಾರೆ. ಸುದ್ದಿ 2

"ನಾವು ಈ ಲೋಲಿಪೋಪ್‌ನಿಂದ ಸಂತುಷ್ಟರಾಗುವುದಿಲ್ಲ .ನಾನು ಹೋದಲ್ಲೆಲ್ಲ ಸಂತರು ಕೇಳುತ್ತಾರೆ–ರಾಮಮಂದಿರ ಯಾವಾಗ ಕಟ್ಟುತ್ತೀರಾ ಅಂತ" ಎಂದು ಬಿಜೆಪಿ ಮುಖಂಡ, ರಾಮಂದಿರ ಚಳುವಳಿಯ ನೇತಾರ ವಿನಯ್ ಕಟಿಯಾರ್ ಹೇಳಿದ್ದಾರೆ. ಕೇಂದ್ರ ಮಂತ್ರಿ ಉಮಾಭಾರತಿ ಕೂಡ ವಿವಾದಿತ ಸ್ಥಳದಲ್ಲಿರಾಮಮಂದಿರ ಕಟ್ಟಬೇಕೆಂದು ಹೇಳಿದ್ದಾರೆ. ಬಿಜೆಪಿ ಎಂಪಿ ಸುಬ್ರಮಣ್ಯ ಸ್ವಾಮಿಯವರಂತೂ ರಾಮಮಂದಿರಾಭಾಗದಲ್ಲಿ ಉತ್ತರಪ್ರದೇಶ ವಿಧಾನಸಭಾ ಚುನಾವಣೆಗಳಲ್ಲಿ ಗೆಲುವು ತರಯತ್ತದೆ ಎಂದಿದ್ದಾರೆ –ಸುದ್ದಿ 3

ಜಾಗತಿಕ ಹಸಿವಿನ ಸೂಚ್ಯಂಕ: ಭಾರತದ ಸ್ಥಾನ 118 ದೇಶಗಳಲ್ಲಿ 97ನೇಯದ್ದು



ವ್ಯಂಗ್ಯಚಿತ್ರ: ಸಂದೀಪ್ ಅಧ್ವರ್ಯು, ಟೈಮ್ಸ್ ಆಫ್ ಇಂಡಿಯಾ



ಕೆ.ಎಂ.ನಾಗರಾಜ್

ಅಸಮಾನತೆಯ ಪ್ರಶ್ನೆ ವಿಶ್ವ ಬ್ಯಾಂಕ್ ಮತ್ತು ಐಎಂಎಫ್ ಗಮನವನ್ನೂ ಸೆಳೆಯುತ್ತಿದೆ!

ವಿಶ್ವಸಂಸ್ಥೆ ನಿಗದಿಪಡಿಸಿರುವಂತೆ 'ಸಹಸ್ರಮಾನದ ಅಭಿವೃದ್ಧಿ ಗುರಿಗಳನ್ನು 2030ರ ವೇ:ಳೆಗೆ ಈಡೇರಿಸಿಕೊಳ್ಳಲಾಗದಿದ್ದರೂ ವಿಶ್ವದ ಮೂರನೇ ಎರಡರಷ್ಟು ದೇಶಗಳು ಸಮಾನತೆಯನ್ನು ತಗ್ಗಿಸುವ ನಿಟ್ಟಿನಲ್ಲಿ ಸಾಗಿವೆ ಎಂದು ವಿಶ್ವಬ್ಯಾಂಕ್ ಮತ್ತು ಐಎಂಎಫ್ ಪರಿಣಿತರ 'ಆಶಾಭಾವನೆ'ಗೆ ವ್ಯತಿರಿಕ್ತವಾದ ಪರಿಸ್ತಿತಿಯನ್ನೇ ಮೂರನೇ ಜಗತ್ತಿನ ದೇಶಗಳು ಎದುರಿಸಬೇಕಾಗಬಹುದು ಎನ್ನುತ್ತಾರೆ **ಪ್ರೊ. ಪ್ರಭಾತ್ ಪಟ್ನಾಯಕ್**. ಏಕೆಂದರೆ ಈ ಎರಡು ಜಾಗತಿಕ ಸಂಸ್ಥೆಗಳ ಗರಡಿಯ 'ಆರ್ಥಿಕ ಸಲಹೆಗಾರರು' ಭಾರತದಂತಹ ದೇಶಗಳಿಗೆ ಬಡತನ ಮತ್ತು ಅಸಮಾನತೆಗಳನ್ನು ಹೆಚ್ಚಿಸುವ ಅದೇ ಹಳೆಯ ಶರತ್ತುಗಳನ್ನೇ ಸಲಹೆ ಮಾಡುವ ಚಾಳಿ ಮುಂದುವರೆಸಿವೆ. ಇದನ್ನು ಪರಿಶೀಲಿಸಿರುವ ಪ್ರೊ.ಪ್ರಭಾತ್ ಪಟ್ನಾಯಕ್‌ಅವರ Focus on Inequality ಲೇಖನದ ಭಾವಾನುವಾದ ನಮ್ಮ ಓದುಗರಿಗಾಗಿ.

ವಿಶ್ವ ಬ್ಯಾಂಕ್ ಮತ್ತು ಐಎಂಎಫ್ ಮುಖ್ಯಸ್ಥರು ವಿಶ್ವದಲ್ಲಿರುವ ಬಡತನ ಮತ್ತು ಅಸಮಾನತೆಗಳ ಬಗ್ಗೆ ಇತ್ತೀಚೆಗೆ ಪ್ರಸ್ತಾಪ ಮಾಡುತ್ತಿದ್ದಾರೆ. ಅವರ ಮಾತುಗಳು ಮತ್ತು ಪ್ರಕಟಣೆಗಳಲ್ಲಿ ವ್ಯಕ್ತವಾಗುವ ನಿಲುವುಗಳು ಪ್ರಗತಿಪರವಾಗಿ ಕಾಣುತ್ತವೆ. ಆದರೆ, ಆಚರಣೆಯ ಪ್ರಶ್ನೆ ಬಂದಾಗ, ಅವು ತಮ್ಮಿಂದ ಸಾಲ ಪಡೆಯುವ ದೇಶಗಳ ಮೇಲೆ ಬಡತನ ಮತ್ತು ಅಸಮಾನತೆಗಳನ್ನು ಹೆಚ್ಚಿಸುವ ಅದೇ ಹಳೆಯ ಶರತ್ತುಗಳನ್ನೇ ಹೇರುವ ಚಾಳಿ ಮುಂದುವರೆಸಿವೆ.

ಬಡತನ ನಿವಾರಣೆ ಮತ್ತು ಬಡವ-ಬಲ್ಲಿದರ ನಡುವಿನ ಅಸಮತೆಗಳನ್ನು ತಗ್ಗಿಸುವ ನಿಟ್ಟಿನಲ್ಲಿ ವಿಶ್ವ ಬ್ಯಾಂಕ್ Poverty and Shared Prosperity ಎಂಬ ಹೊತ್ತಿಗೆ ಪ್ರಕಟಿಸಿದೆ..ಅದರಲ್ಲಿರುವ ಕೆಲವು ಗಮನಾರ್ಹ ಅಂಶಗಳು ಹೀಗಿವೆ:

ಜಾಗತಿಕ ಅರ್ಥವ್ಯವಸ್ಥೆಯ ಮಂದ ಬೆಳವಣಿಗೆಯು ಬಡತನ ನಿವಾರಣೆಗ 'ಅಡ್ಡಿಯಾಗಿದೆ. 'ಸುಸ್ಥಿರ ಅಭಿವೃದ್ಧಿಯ' ಮೂಲಕ 2030ರ ವೇಳೆಗೆ ಬಡತನವನ್ನು ಸಂಪೂರ್ಣವಾಗಿ ತೊಡೆದು ಹಾಕುವ ವಿಶ್ವ ಸಂಸ್ಥೆಯು ನಿಗದಿಪಡಿಸಿದ ಸಹಸ್ರಮಾನದ ಅಭಿವೃದ್ಧಿಯ ಗುರಿಗಳನ್ನು ಸಾಧಿಸಬೇಕೆಂದಾದರೆ ವರಮಾನಗಳಲ್ಲಿರುವ ಅಸಮತೆಯನ್ನು ತಗ್ಗಿಸಬೇಕಾಗುತ್ತದೆ. ಅದಕ್ಕೆ ಪೂರಕವಾಗಿ, ಮೊದಲಿಗೆ, ಒಟ್ಟು ವರಮಾನದಲ್ಲಿ, ತಳದಲ್ಲಿರುವ ಜನ ಸಂಖ್ಯೆಯ ಶೇ.40 ಮಂದಿಯ ವರಮಾನದ ಪಾಲನ್ನು ಹೆಚ್ಚಿಸಬೇಕಾಗುತ್ತದೆ.

ಒಟ್ಟು ವರಮಾನದಲ್ಲಿ, ತಳದಲ್ಲಿರುವ ಶೇ.40 ಮಂದಿಯ ಪಾಲು ಹೆಚ್ಚಾಗುವುದು ಎಂದರೆ ವರಮಾನಗಳ ಅಸಮಾನತೆ ಕಡಿಮೆಯಾಗುತ್ತದೆ ಎಂದೇನೂ ಅರ್ಥೈಸಲಾಗುವುದಿಲ್ಲ. ಏಕೆಂದರೆ, ಒಟ್ಟು ವರಮಾನದಲ್ಲಿ ಶೇ.40 ಮಂದಿಯ ಪಾಲು ಹೆಚ್ಚಿದಾಗಲೂ ಬಡವ-ಬಲ್ಲಿದರ ನಡುವಿನ ಅಂತರವೂ ಹೆಚ್ಚಾಗಬಹುದು. ಉದಾಹರಣೆಗೆ, ತಳದಲ್ಲಿರುವ ಶೇ.40 ಮಂದಿಯ ಪಾಲು 20ರಿಂದ 25ಕ್ಕೆ ಏರಿದರೆ, ಮತ್ತು ಅದೇ ಸಮಯದಲ್ಲಿ ತುತ್ತತುದಿಯಲ್ಲಿರುವ ಜನಸಂಖ್ಯೆಯ ಶೇ.10 ಮಂದಿಯ ವರಮಾನದ ಪಾಲು 30ರಿಂದ 50ಕ್ಕೆ ಏರಿದರೆ, ಈ ಎರಡು ಗುಂಪುಗಳ ವರಮಾನಗಳ ನಡುವಿನ ಅಂತರವೂ ಜಾಸ್ತಿಯಾಗಿರುತ್ತದೆ. ಅಂದರೆ, ತಳದಲ್ಲಿರುವವರ ವರಮಾನ ಏರಿದರೂ ಅಸಮಾನತೆ ಕಡಿಮೆಯಾಗುವುದಿಲ್ಲ. Gini Coefficient ನಂತಹ ಮಾಪಕ ಬಳಕೆ ಮಾಡಿಕೊಂಡು ವರಮಾನಗಳ ಅಂತರ ಕಡಿಮೆ ಮಾಡಲು ಸೂಕ್ತ ಕ್ರಮಗಳನ್ನು ಅನುಸರಿಸುವುದರ ಬದಲಾಗಿ, ತಳದಲ್ಲಿರುವವರ ವರಮಾನ ಏರಿಕೆಯ ಮೇಲಷ್ಟೇ ಗಮನ ಹರಿಸುತ್ತಿವೆ, ವಿಶ್ವ ಬ್ಯಾಂಕಿನ ಪ್ರಭಾವಕ್ಕೆ ಒಳಗಾಗಿರುವ ಸುಸ್ಥಿರ ಅಭಿವೃದ್ಧಿಯ ಗುರಿಗಳು. ವಿಶ್ವ ಬ್ಯಾಂಕ್ ಹಿಡಿದು ಹೋಗುತ್ತಿರುವುದರ ಈ ಜಾಡಿನ 'ಕುರಿತು Poverty and Shared Prosperity ವಿವರ ನೀಡುತ್ತದೆ.

ಒಟ್ಟು ವರಮಾನದಲ್ಲಿ, ತಳದಲ್ಲಿರುವ ಜನ ಸಂಖ್ಯೆಯ ಶೇ.40 ಮಂದಿಯ ಪಾಲು ಹೆಚ್ಚಬೇಕು ಎನ್ನುವುದಾದರೆ, ಇಡೀ ಜನ ಸಂಖ್ಯೆಯ ತಲಾ ವರಮಾನದ ಪಾಲು ಏರುವುದಕ್ಕಿಂತಲೂ ವೇಗವಾಗಿ ಈ ಶೇ.40ಮಂದಿಯ ತಲಾ ವರಮಾನದ ಪಾಲು ಏರಬೇಕಾಗುತ್ತದೆ. ಇಡೀಜನ ಸಂಖ್ಯೆಯ ತಲಾ ವರಮಾನದ ಪಾಲು ಏರಿದ ದರಕ್ಕಿಂತಲೂ ವೇಗವಾಗಿ ಶೇ.40ಮಂದಿಯ ತಲಾ ವರಮಾನದ ಪಾಲಿನ ದರ ಏರಿದರೆ, ಆ ದರಗಳ ನಡುವಿನ ವ್ಯತ್ಯಾಸವನ್ನು 'ಸಮೃದ್ಧಿಯ ಹಂಚಿಕೆಯ ಸಂಭಾವನೆ'(shared prosperity premium) ಎಂದು ಆಡಂಬರದ ಮಾತುಗಳಲ್ಲಿ ವಿಶ್ವ ಬ್ಯಾಂಕ್ ತನ್ನ ದಾಸ್ತಾವೇಜಿನಲ್ಲಿ ಬಣ್ಣಿಸಿದೆ. 2008-2013ರ ಅವಧಿಗೆ ಸಂಬಂಧಿಸಿದಂತೆ ಕೆಲವು ದೇಶಗಳ ಅಂಕಿ ಅಂಶಗಳನ್ನು ಪರಿಶೀಲನೆಗೊಳಪಡಿಸಿದ ವಿಶ್ವ ಬ್ಯಾಂಕ್, ಆ ಪೈಕಿ ಮೂರನೆಯ ಎರಡರಷ್ಟು ದೇಶಗಳ ಸಮೃದ್ಧಿಯ ಸಂಭಾವನೆ ಧನಾತ್ಮಕವಾಗಿದೆ ಎಂದು ಹರ್ಷ ವ್ಯಕ್ತಪಡಿಸಿದೆ.

ಬಡತನ ಕಡಿಮೆಮಾಡುವ ನಿಟ್ಟಿನಲ್ಲಿ ಅತ್ಯುತ್ತಮ ಕೆಲಸಮಾಡಿರುವ ಐದು ದೇಶಗಳೆಂದರೆ ಬ್ರೆಜಿಲ್, ಕಾಂಬೋಡಿಯಾ, ಮಾಲಿ, ಟಾನ್‌ಜೇನಿಯಾ ಮತ್ತು ಪೆರು ಎಂದು ವಿಶ್ವ ಬ್ಯಾಂಕ್ ಗುರುತಿಸಿದೆ.

ಈ ಐದು ದೇಶಗಳಲ್ಲಿ, ಗಾತ್ರದಲ್ಲಿ ಅತಿ ದೊಡ್ಡದಾದ ಬ್ರೆಜಿಲ್ ಅನುಸರಿಸಿದ ಮಾದರಿ ಅತ್ಯಂತ ಮಹತ್ವಪೂರ್ಣದ್ದಾಗಿದೆ. ಕನಿಷ್ಠ ಕೂಲಿಯ ಏರಿಕೆ, ರಕ್ಷಣೆ ಇಲ್ಲದ ಕಾರ್ಮಿಕರಿಗೆ ಹಕ್ಕುಗಳು ಲಭ್ಯವಾಗುವಂತೆ ಮಾಡಿರುವುದು, ಕಾರ್ಮಿಕರ ಸಾಮೂಹಿಕ ಚೌಕಾಸಿಯ ಹಕ್ಕುಗಳನ್ನು ಬಲಪಡಿಸಿರುವುದು ಮುಂತಾದ ಕಾರ್ಯಕ್ರಮಗಳ ಮೂಲಕ (ಇದನ್ನೇ ವಿಶ್ವ ಬ್ಯಾಂಕಿನ ಪರಿಭಾಷೆಯಲ್ಲಿ ಹೇಳುವುದಾದರೆ – shared prosperity premiumಮೂಲಕ–ಅಥವಾ – ಸಮೃದ್ಧಿಯಲ್ಲಿ ಹೆಚ್ಚಿನ ಪಾಲನ್ನು ಹಂಚುವ ಮೂಲಕ) ಸಮಾನತೆಯತ್ತ ಸಾಗುವ ನಿಟ್ಟಿನಲ್ಲಿ ಬ್ರೆಜಿಲ್ ಹೆಚ್ಚಿನ ಮಟ್ಟದ ಪ್ರಗತಿ ಸಾಧಿಸಿದೆ ಎಂಬುದನ್ನು ವಿಶ್ವ ಬ್ಯಾಂಕಿನ ತಗ್ಗಲು 2008ರ ಬಿಕ್ಕಟ್ಟು ಕಾರಣವಾಗಿತ್ತೆಂಬುದನ್ನು ವಿಶ್ವ ಬ್ಯಾಂಕ್ ಗಮನಿಸಿದೆ. 1930ರ ದಶಕದಲ್ಲಿ ಅಮೆರಿಕದಲ್ಲಿ ಆಗಿದ್ದಂತೆ, ಬಿಕ್ಕಟ್ಟಿನಿಂದಾಗಿ ವ್ಯವಹಾರಸ್ಥರು ನಷ್ಟ ಅನುಭವಿಸಿದುದರಿಂದ ವರಮಾನಗಳ ಅಸಮತೆ ಕಡಿಮೆಯಾಯಿತು. ಆದರೆ, 2008-2013ರ ಅವಧಿಯಲ್ಲಿ ಮೂಲ ಸರಕುಗಳ ಬೆಲೆಗಳು ಸ್ಥಿರವಾಗಿದ್ದವು. ನಂತರ, ಬೆಲೆಗಳು ಕುಸಿಯುಲು ಆರಂಭಿಸಿವೆ. ಆದ್ದರಿಂದ, 2008-2013ರ ಅವಧಿಯಲ್ಲಿ ಕಂಡು ಬಂದ ವರಮಾನಗಳ ಅಸಮತೆಯ ಇಳಿಕೆಯು ನಂತರದ ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಈ ಎಲ್ಲ ಸಾಧನೆಗಳು ಲೂಲಾ ಡಿ ಸಿಲ್ವಾ ಮತ್ತು ದಿಲ್ಮಾ ರೂಸೆಫ್ ಬ್ರೆಜಿಲ್‌ನ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಮತ್ತು ವರ್ಕರ್ಸ್ ಪಾರ್ಟಿಯ ನೇತೃತ್ವದಲ್ಲಿ ಆಗಿವೆ. ಇತ್ತೀಚೆಗೆ ದಿಲ್ಮಾ ರೂಸೆಫ್ ಅವರನ್ನು, ಅತ್ಯಂತ ಕ್ಷುಲ್ಲಕ ಕಾರಣವೊಂದರ ಮೇಲೆ, ಅಮೆರಿಕ ಬೆಂಬಲಿತ ಪಾರ್ಲಿಮೆಂಟರಿ ಕ್ಷಿಪ್ರಕ್ರಾಂತಿಯ ಮೂಲಕ, ಅಧ್ಯಕ್ಷ ಪದವಿಯಿಂದ ಪದಚ್ಯುತಗೊಳಿಸಲಾಗಿದೆ ಎಂಬುದನ್ನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳಬಹುದು. ಎಂಎನ್‌ಸಿಗಳು ಮತ್ತು ದೇಶೀಯ ಕಾರ್ಪೊರೇಟ್‌ಗಳ ಬಗ್ಗೆ ಮೃದು ಧೋರಣೆ ಹೊಂದಿರುವ, ಕಾರ್ಮಿಕರಿಗೆ ಶತ್ರುವಿನಂತಿರುವ, ಚುನಾಯಿತನಲ್ಲದ ಒಬ್ಬ ವ್ಯಕ್ತಿಯನ್ನು ದಿಲ್ಮಾ ರೂಸೆಫ್ ಅವರ ಸ್ಥಾನದಲ್ಲಿ ಕೂರಿಸಲಾಗಿದೆ.

ಮೂರನೆಯ ಎರಡರಷ್ಟು ದೇಶಗಳ 'ಸಮೃದ್ಧಿಯ ಹಂಚಿಕೆಯಲ್ಲಿ ದೊರೆತ ಸಂಭಾವನೆ ಅಥವ ಅಧಿಮೌಲ್ಯ' ಧನಾತ್ಮಕವಾಗಿದೆ ಎಂದು 'ಆಶಾಭಾವನೆ' ವ್ಯಕ್ತಪಡಿರುವ ವಿಶ್ವ ಬ್ಯಾಂಕ್, ಜಿಡಿಪಿಯ ಪ್ರಸಕ್ತ ಬೆಳವಣಿಗೆ ದರದಲ್ಲಿ, 2030ರ ವೇಳೆಗೆ ಬಡತನ ತೊಡೆದು ಹಾಕುವ ಸಹಸ್ರಮಾನದ ಅಭಿವೃದ್ಧಿಯ ಗುರಿ ಸಾಧಿಸಲು ಆಗುವುದಿಲ್ಲ ಎಂದೂ ಹೇಳಿದೆ. ಇಲ್ಲಿ. ವಿಶ್ವಬ್ಯಾಂಕ್ ವ್ಯಕ್ತಪಡಿಸಿರುವ 'ಆಶಾಭಾವನೆ'ಯೂ ಅನೇಕ ತಪ್ಪು ಕಾರಣಗಳಿಂದ ಕೂಡಿದೆ.

ಮೊದಲನೆಯದು, ಒಟ್ಟು 195 ದೇಶಗಳ ಪೈಕಿ ವಿಶ್ವ ಬ್ಯಾಂಕ್ ಅಧ್ಯಯನಕ್ಕೆ ಕೇವಲ 83 ದೇಶಗಳನ್ನು ಆರಿಸಿಕೊಂಡಿರುವುದು ಉಳಿದ ದೇಶಗಳ ಪರಿಸ್ಥಿತಿ ಹೀನಾಯವಾಗಿರುವ ಕಾರಣದಿಂದ ಎಂಬ ಅನುಮಾನವಿದೆ ಮತ್ತು ಈ 83 ದೇಶಗಳ ಪರಿಸ್ಥಿತಿ ನಗಣ್ಯ ಎನ್ನುವಷ್ಟು ಧನಾತ್ಮಕವಾಗಿದೆ.

ಎರಡನೆಯದಾಗಿ, ಈ ದೇಶಗಳಿಗೆ ಸಂಬಂಧಿಸಿದ ವರಮಾನದ ಅಂಕಿ ಅಂಶಗಳು ಸ್ವಲ್ಪವೂ ನಂಬಲರ್ಹವಲ್ಲ. ಸ್ಯಾಂಪಲ್ ಸರ್ವೆಗಳ ಮೂಲಕ ಅಂಕಿ ಅಂಶಗಳನ್ನು ಕಾಲ ಬದ್ಧವಾಗಿ ಸಂಗ್ರಹಿಸುವ ಒಂದು ಒಳ್ಳೆಯ ವ್ಯವಸ್ಥೆ ಹೊಂದಿರುವ ಭಾರತದಲ್ಲೇ ವರಮಾನಗಳಿಗೆ ಸಂಬಂಧಿಸಿದ ನಿಖರ ಅಂಕಿ ಅಂಶಗಳು ಲಭ್ಯವಿಲ್ಲ. ಜೊತೆಗೆ, ವರಮಾನವು ಒಳಗೊಳ್ಳಬಹುದಾದ ಅಂಶಗಳ ಬಗ್ಗೆ ಇರುವ ಪರಿಕಲ್ಪನೆಯು, ವೆಚ್ಚಗಳ ಬಗ್ಗೆ ಇರುವ ಪರಿಕಲ್ಪನೆಯಷ್ಟು ಸ್ಪಷ್ಟವಾಗಿಲ್ಲ.

ಹಾನಿಕರ ಪರಿಣಾಮಗಳು

ಮೂರನೆಯದಾಗಿ, ಬಂಡವಾಳಶಾಹಿಯ ಜಾಗತಿಕ ಬಿಕ್ಕಟ್ಟು ವರಮಾನಗಳ ಹಂಚಿಕೆಯ ಮೇಲೆ ಪ್ರತಿಕೂಲ ಪರಿಣಾಮ ಬೀರುವ ಸಾಧ್ಯತೆ ಇದೆ. ಮೇಲ್ನೋಟದಲ್ಲಿ ಈ ಹೇಳಿಕೆಯು ಅಸಂಬದ್ಧವಾಗಿ ಕಾಣಬಹುದು. ಏಕೆಂದ-ರೆ, ಬಹಳ ಮಂದಿಯ ವಾದ ಅದಕ್ಕೆ ತದ್ವಿರುದ್ಧವಾಗಿದೆ. 2008-2013ರ ಅವಧಿಯಲ್ಲಿ ವರಮಾನಗಳ ಅಸಮತೆ ವರ್ಷಗಳಲ್ಲಿ ಇರುತ್ತದೆಂದು ನಿರೀಕ್ಷಿಸಲಾಗದು. ಏಕೆಂದರೆ, ಮೂಲ ಸರಕುಗಳ ಬೆಲೆ ಇಳಿಕೆಯ ಹೊರೆಯನ್ನು ಎಂಎನ್‌ಸಿಗಳು ಸಣ್ಣ ಉತ್ಪಾದಕರಿಗೆ ವರ್ಗಾಯಿಸುತ್ತವೆ. ಸಿರಿವಂತರಲ್ಲದ ಸಣ್ಣ ಉತ್ಪಾದಕರು ತಮ್ಮ ಮೇಲೆ ಬೀಳುವ ಹೊರೆಯನ್ನು ತಮ್ಮ ಬಳಿ ಕೆಲಸ ಮಾಡುವವರಿಗೆ ವರ್ಗಾಯಿಸುತ್ತಾರೆ. ಹಾಗಾಗಿ, **ಬಂಡವಾಳಶಾಹಿಯ ಬಿಕ್ಕಟ್ಟು ಒಂದು ಹೊಸ ಹಂತ ತಲುಪುತ್ತಿದ್ದಂತೆಯೇ ಅಸಮತೆ ಕಡಿಮೆ ಮಾಡುವ ಮೂಲಕ ಬಡತನ 'ತೊಡೆದು ಹಾಕಬಹುದೆಂಬ ಆಶಾಭಾವನೆಯೂ ಮಾಯವಾಗುತ್ತದೆ.**

ನಾಲ್ಕನೆಯದಾಗಿ, ಬಿಕ್ಕಟ್ಟಿನ ಜೊತೆಯಲಿ ಕೆಲವು ಅಡ್ಡ ಪರಿಣಾಮಗಳು ಅನಿವಾರ್ಯವಾಗಿ ಒದಗಿ ಬರುತ್ತವೆ. ಬಂಡವಾಳಶಾಹಿಯ ಪ್ರಸಕ್ತ ಬಿಕ್ಕಟ್ಟಿನ ಪರಿಣಾಮವಾಗಿ ತೈಲ, ಖನಿಜಗಳು ಮತ್ತು ಇತರ ಮೂಲ ಸರಕುಗಳ ಬೆಲೆ ಕುಸಿತದಿಂದಾಗಿ, ಬ್ರೆಜಿಲ್ ಹಾಗೂ ಲ್ಯಾಟಿನ್ ಅಮೆರಿಕದ ಅನೇಕ ದೇಶಗಳ ಆರ್ಥಿಕ ಪರಿಸ್ಥಿತಿ ಹದಗೆಟ್ಟಿದೆ. ಬಹಳ ವರ್ಷಗಳಿಂದಲೂ ಅಲ್ಲಿ ಅಧಿಕಾರ ನಡೆಸುತ್ತಿದ್ದ ಎಡ ಒಲವಿನ ಸರ್ಕಾರಗಳು ದಾರಿ ಕಾಣದಂತಾಗಿವೆ. ಬಲಪಂಥೀಯ ಶಕ್ತಿಗಳು ಗಮನಾರ್ಹ ರೀತಿಯಲ್ಲಿ ಹೊರಹೊಮ್ಮುತ್ತಿವೆ. ಜನತೆ ಎದುರಿಸುತ್ತಿರುವ ಸಂಕಷ್ಟಗಳನ್ನು ಬಂಡವಾಳವಾಗಿ ಬಳಸಿಕೊಂಡ ಬಲಪಂಥೀಯ ಶಕ್ತಿಗಳು, ಎಡ ಸರ್ಕಾರಗಳ ಬೆಂಬಲಿಗರನ್ನು ತಮ್ಮ ತೆಕ್ಕೆಗೆ ಬೀಳಿಸಿಕೊಳ್ಳುತ್ತಿವೆ. ಅದಕ್ಕೆ ಪೂರಕವಾಗಿ, ಅಮೆರಿಕದಂತಹ ಸಾಮ್ರಾಜ್ಯಶಾಹಿಗಳು ಎಡ ಸರ್ಕಾರಗಳ ಮೇಲೆ ಆರ್ಥಿಕ ಗೆರಿಲ್ಲಾ ಯುದ್ಧ ನಡೆಸುತ್ತವೆ. ಎಡ ಸರ್ಕಾರಗಳಿಗೆ ಸಿಗುತ್ತಿರುವ ಬೆಂಬಲದಲ್ಲಿ ಕೊಂಚ ಕುಸಿತ ಕಂಡರೆ, ತತ್‌ಕ್ಷಣದಲ್ಲಿ ಅಲ್ಲೊಂದು ಬಲಪಂಥೀಯ ಸರ್ಕಾರವನ್ನು ಪ್ರತಿಸ್ಥಾಪಿಸಲು ಸಾಮ್ರಾಜ್ಯಶಾಹಿಗಳಿಗೆ ಅಷ್ಟೇ ನೆಪ ಸಾಕು. ಅರ್ಜೆಂಟಿನಾ ಮತ್ತು ಬ್ರೆಜಿಲ್ ದೇಶಗಳಲ್ಲಿ ಆದದ್ದು ಇದೇ. ವೆನಿಜ್ಯುವೆಲಾದಲ್ಲಿ ಆಗಬಹುದಾದದ್ದು ಇದೇ.

ಲ್ಯಾಟಿನ್ ಅಮೆರಿಕದ ದೇಶಗಳಲ್ಲಿ ಮಾತ್ರವಲ್ಲದೆ ಬೇರೆ ದೇಶಗಳಲ್ಲಿಯೂ ಇದೇ ವಿಧಾನದ ಮೂಲಕ ಅಧಿಕಾರ ಹಿಡಿಯುವ **ಬಲಪಂಥೀಯ ಸರ್ಕಾರಗಳು, ಯಾವ ಕ್ರಮಗಳು ಅಸಮತೆಯ ಇಳಿಕೆಗೆ ವಿರೋಧವಾಗಿವೆ ಎಂದು ವಿಶ್ವ ಬ್ಯಾಂಕ್ ಪರಿಗಣಿಸುತ್ತದೋ; ಅದೇ ಕ್ರಮಗಳನ್ನು ಜಾರಿ ಮಾಡುತ್ತವೆ.** ಅಂದರೆ, ಬಲಪಂಥೀಯ ಸರ್ಕಾರಗಳು ಕಾರ್ಮಿಕರ ಹಕ್ಕುಗಳು ಮತ್ತು ಅವರ ಜೀವನದ ಮಟ್ಟಗಳ ಮೇಲೆ ದಾಳಿ ಮಾಡಿ ಬಂಡವಾಳಶಾಹಿಗಳಿಗೆ ನೆರವಾಗುತ್ತವೆ.

ಈ ಅಂಶವನ್ನು ಪುಷ್ಟೀಕರಿಸಲು ಬಹಳ ದೂರ ನೋಡಬೇಕಾಗಿಲ್ಲ. ಮುಂದೆ ಏನು ಗತಿಕಾದಿದೆ ಎಂಬುದನ್ನು ಮೋದಿ ಸರ್ಕಾರದಿಂದ ಪಡೆದ ಅನುಭವಗಳು ಹೇಳುತ್ತವೆ. ಕನಿಷ್ಠ ಕೂಲಿ ಏರಿಸುವ ಮೂಲಕ ಅಸಮತೆಗಳ ಪ್ರಮಾಣ ಇಳಿಸಬಹುದು ಎಂಬ ವಿಶ್ವ ಬ್ಯಾಂಕಿನ ಖಚಿತ ಅಭಿಪ್ರಾಯವನ್ನು ಮೋದಿ ಸರ್ಕಾರ ಧಿಕ್ಕರಿಸಿದೆ. ಕೇಂದ್ರ ಸರ್ಕಾರವೇ ನೇಮಿಸಿದ ವೇತನ ಆಯೋಗದ ಶಿಫಾರಸಿನಂತೆ ಕನಿಷ್ಠ ಕೂಲಿ ನಿಗದಿಪಡಿಸುವಂತೆ ಒತ್ತಾಯಿಸಿ ಟ್ರೇಡ್ ಯೂನಿಯನ್‌ಗಳು ಸೆಪ್ಟೆಂಬರ್ 2ರಂದು ಹೂಡಿದ್ದ ಮುಷ್ಕರದ ಈ ಹಕ್ಕೊತ್ತಾಯವನ್ನು ಮೋದಿ ಸರ್ಕಾರ ತಿರಸ್ಕರಿಸಿದೆ. ಈ ಸರ್ಕಾರದ 'ಅಜೆಂಡಾದಲ್ಲಿ ಬಹಳ ಮುಖ್ಯವಾಗಿರುವ ಅಂಶವೆಂದರೆ ಕಾರ್ಮಿಕರನ್ನು ಮನ ಬಂದಂತೆ ವಜಾ ಮಾಡುವ ಹಕ್ಕನ್ನು ಮಾಲಿಕರಿಗೆ ಕೊಡುವ ಶ್ರಮ ಮಾರುಕಟ್ಟೆ ಸುಧಾರಣೆಗಳು.ಈ ಸುಧಾರಣೆಗಳು ಟ್ರೇಡ್ ಯೂನಿಯನ್ ಹಕ್ಕುಗಳು ಮತ್ತು ಸಾಮೂಹಿಕ ಚೌಕಾಸಿಯ ಹಕ್ಕುಗಳು ಇಲ್ಲದಂತೆ ಮಾಡುತ್ತವೆ, ಇದೇ ಈ ಹಕ್ಕುಗಳನ್ನೇ ಬಡತನ ಮತ್ತು ಅಸಮತೆಗಳ ವಿರುದ್ಧದ ಅಸ್ತ್ರಗಳೆಂದು ವಿಶ್ವಬ್ಯಾಂಕ್ ತನ್ನ ಅಧ್ಯಯನದಲ್ಲಿ ಬಣ್ಣಿಸಿದೆ. ಆದರೂ,ಇದೇ ವಿಶ್ವ ಬ್ಯಾಂಕಿನ ಗರಡಿಯಿಂದ ಬಂದಿರುವ ಆರ್ಥಿಕ ಸಲಹೆಗಾರರ ಮುತುವರ್ಜಿಯಲ್ಲಿಯೇ ಇಂತಹ ಸುಧಾರಣೆಗಳು ಜಾರಿಯಾಗುತ್ತಿವೆ. ಇದೊಂದು ಇಬ್ಬಂದಿತನ.

ಬಡತನ ನಿವಾರಿಸಲು ಬ್ರೆಜಿಲ್‌ನ ವರ್ಕರ್ಸ್ ಪಾರ್ಟಿಯ ನೇತೃತ್ವದಲ್ಲಿ ಜಾರಿಗೊಳಿಸಿದ ವರಮಾನದ ವರ್ಗಾವಣೆಯ ಸ್ಕೀಂಗಳನ್ನು ವಿಶ್ವ ಬ್ಯಾಂಕ್ ಶ್ಲಾಘಿಸಿದೆ. ನಮ್ಮ ದೇಶದಲ್ಲಿ, ಎಡ ಪಕ್ಷಗಳ ಒತ್ತಾಯದ ಮೇರೆಗೆ ಜಾರಿಗೆ ತಂದಿರುವ ಉದ್ಯೋಗ ಖಾತ್ರಿ ಯೋಜನೆಯ ಬಗ್ಗೆ ತಿರಸ್ಕಾರ ಹೊಂದಿರುವ ಈಗಿನ ಸರ್ಕಾರಅದನ್ನು ಮೊಟಕುಗೊಳಿಸುತ್ತಿದೆ.

ವಿರುದ್ಧ ದಿಕ್ಕಿನಲ್ಲಿ ಚಲನೆ

ಸಂಕ್ಷಿಪ್ತವಾಗಿ ಹೇಳುವುದಾದರೆ, ಬಡತನ ನಿವಾರಿಸಲು ಮತ್ತು ವರಮಾನಗಳ ಅಸಮತೆ ಕಡಿಮೆ ಮಾಡಲು ಯಾವ ದಿಕ್ಕಿನಲ್ಲಿ ಸಾಗುವುದು ಅಗತ್ಯವೆಂದು ವಿಶ್ವಬ್ಯಾಂಕ್ ಹೇಳುತ್ತಿದೆಯೋ, ನಾವು ಆ ದಿಕ್ಕಿಗೆ ವಿರುದ್ಧವಾಗಿ ಸಾಗುತ್ತಿದ್ದೇವೆ. ಮತ್ತು ಅಸಮಾನತೆಗಳು ಹೆಚ್ಚುತ್ತಿರುವ ಸನ್ನಿವೇಶದಲ್ಲಿ ಹಾಗೆ ಮಾಡುತ್ತಿರುವುದೇ ಒಂದು ವಿಶೇಷ ಮತ್ತು ವಿಪರ್ಯಾಸ.

ಒಟ್ಟು ವರಮಾನದಲ್ಲಿ, ತಳದಲ್ಲಿರುವ ಶೇ.40ಮಂದಿಯ ವರಮಾನಗಳು–ಗ್ರಾಮೀಣ ಮತ್ತು ಪಟ್ಟಣ ಎರಡು ಪ್ರದೇಶಗಳಲ್ಲೂ– ಇಳಿಯುತ್ತಿವೆ ಎಂಬುದನ್ನು ರಾಷ್ಟ್ರೀಯ ಸ್ಯಾಂಪಲ್ ಸರ್ವೆಯ ಅಂಕಿ ಅಂಶಗಳು ಧೃಢಪಡಿಸುತ್ತವೆ. ವಿಶ್ವ ಬ್ಯಾಂಕ್ ಅಳತೆಮಾಡುವ ರೀತಿಯಲ್ಲಿ ನೋಡಿದರೆ, ಪಟ್ಟಣಗಳಲ್ಲಿರುವ ಈ ಗುಂಪಿನ ಜನರ ವರಮಾನದ ಇಳಿಕೆಯು ಗ್ರಾಮೀಣ ಪ್ರದೇಶಗಳಲ್ಲಿರುವವರ ವರಮಾನದ ಇಳಿಕೆಗಿಂತಲೂ ಹೆಚ್ಚಿನ ಪ್ರಮಾಣದಲ್ಲಿದೆ. ಆದರೆ, ಉದ್ಯೋಗ ಖಾತ್ರಿ ಯೋಜನೆಯನ್ನು ಜಾರಿ ಮಾಡಿದ ನಂತರವೂ ಗ್ರಾಮೀಣ ಪ್ರದೇಶಗಳಲ್ಲಿ ವರಮಾನದ ಅಸಮತೆ ಹೆಚ್ಚುತ್ತಿರುವುದು ಕಣ್ಣುಕುಕ್ಕುವಂತಿದೆ. ಇಂತಹ ಸನ್ನಿವೇಶದಲ್ಲಿ, ಉದ್ಯೋಗ ಖಾತ್ರಿ ಯೋಜನೆಯನ್ನು ಮತ್ತಷ್ಟು ದುರ್ಬಲಗೊಳಿಸಿದರೆ ವರಮಾನಗಳ ಅಸಮತೆಯ ಪರಿಸ್ಥಿತಿ ಏನಾಗಬಹುದು ಎಂಬುದನ್ನು ಊಹಿಸಬಹುದು. ನವ-ಉದಾರ ಬಂಡವಾಳಶಾಹಿಯ ಬಿಕ್ಕಟ್ಟಿನ ಪರಿಣಾಮಗಳು ಅದರ (ನವ-ಉದಾರ ಬಂಡವಾಳಶಾಹಿಯ) ಮೇಲೆ ಒಂದರ ಮೇಲೆ ಇನ್ನೊಂದರಂತೆ ತಗುಲಿಕೊಳ್ಳುತ್ತಿದ್ದಂತೆಯೇ, ವಿಶ್ವ ಬ್ಯಾಕ್‌ನ 'ಆಶಾಭಾವನೆ'ಗಳಿಗೆ ವ್ಯತಿರಿಕ್ತವಾದ ಅಂತ್ಯ ಪರಿಣಾಮವನ್ನು ಎದುರಿಸಲು ಇಡೀ ಮೂರನೆಯ ಜಗತ್ತು ಸಿದ್ಧವಾಗಿರಬೇಕಾಗುತ್ತದೆ. •

ತೆಲಂಗಾಣದಲ್ಲಿ 'ಮಹಾಜನ ಪಾದಯಾತ್ರೆ' ಆರಂಭ: ಸಾಮಾಜಿಕ ನ್ಯಾಯದೊಂದಿಗೆ ಹೊಸ ರಾಜ್ಯದ ಸಮಗ್ರ ಅಭಿವೃದ್ಧಿಯ ಬೇಡಿಕೆ



ಸಿಪಿಐ(ಎಂ) ತೆಲಂಗಾಣ ರಾಜ್ಯಸಮಿತಿ ಯೋಜಿಸಿರುವ 'ಮಹಾಜನ ಪಾದಯಾತ್ರೆ'ಗೆ ಡಾ. ಅಂಬೇಡ್ಕರ್ ಅವರ ಮೊಮ್ಮಗ ಪ್ರಕಾಶ ಅಂಬೇಡ್ಕರ್ ಅವರು ಅಕ್ಟೋಬರ್ 17 ರಂದು ಇಬ್ರಾಹಿಂ ಪಟ್ಟಣದಲ್ಲಿ ಚಾಲನೆ ನೀಡಿದರು. ಈ ಪಾದಯಾತ್ರೆಯನ್ನು ವಂಚಿತ ಜನಸಮುದಾಯಗಳಿಗ ಸಾಮಾಜಿಕ ನ್ಯಾಯ ಒದಗಿಸುವದರೊಂದಿಗೆ ಹೊಸ ರಾಜ್ಯದ ಸಮಗ್ರ ಅಭಿವೃದ್ಧಿಯ ಬೇಡಿಕೆಯನ್ನು ಬೆಂಬಲಿಸಿ ಸಂಘಟಿಸಲಾಗಿತ್ತು.

ಉದ್ಘಾಟನಾ ಸಭೆಯಲ್ಲಿ ವಿವಿಧ ಜನವಿಭಾಗಗಳ, ಅದರಲ್ಲೂ ಅಂಚಿಗೆ ತಳ್ಳಲ್ಪಟ್ಟ ಸಮುದಾಯಗಳ ಜನರು ಡಾ.ಅಂಬೇಡ್ಕರ್ ಪ್ರತಿಮೆಯ ಬಳಿ ನೆರೆದು ನೀಲಿ ಮತ್ತು ಕೆಂಪು ಬಾವುಟಗಳ ಐಕ್ಯತೆಯ ಘೋಷಣೆಗಳನ್ನು ಎತ್ತಿದರು.

"ರಾಜ್ಯ ಮತ್ತು ಕೇಂದ್ರ ಸರಕಾರಗಳು ಅಧಿಕಾರದ ವಿಕೇಂದ್ರೀಕರಣನ್ನು ವಂಚಿತ ಜನಸಮುದಾಯದ ಜನರಿಗೆ ಸಾಮಾಜಿಕ ಮತ್ತು ಆರ್ಥಿಕ ನ್ಯಾಯವನ್ನು ಖಾತ್ರಿ ಪಡಿಸುವ ನಿಟ್ಟಿನಲ್ಲಿ ತಮ್ಮ ಅಭಿವೃದ್ಧೀ ಮಾದರಿಯಲ್ಲಿ ಬದಲಾವಣೆಯನ್ನು ತರಬೇಕು. ಪ್ರಸ್ತುತ ಸಣ್ಣ ನೀರಾವರಿ ಯೋಜನೆಗಳು, ಸಣ್ಣ ನಗರಗಳ ಅಭಿವೃದ್ಧಿ ಮತ್ತು ಕೃಷಿ ಸಂಬಂದೀ ಕೈಗಾರಿಕೆಗಳ ಸ್ಥಾಪನೆ ಇಂದಿನ ಅಗತ್ಯಗಳಾಗಿವೆ. ಸಿಪಿಐ(ಎಂ) ಅಂತಹ ಒಂದು ಪರ್ಯಾಯ ಪ್ರಚಾರಕಾರ್ಯ ನಡೆಸಿದೆ, ಇದು ತೆಲಂಗಾಣಾ ರಾಜ್ಯದ ಹೊಸ ಯುಗರಂಭವಾಗಿದೆ ಎಂದು ಪ್ರಕಾಶ ಅಂಬೇಡ್ಕರ್ ಈ ಸಂದರ್ಭದಲ್ಲಿ ಹೇಳಿದರು.

ಪರಿಶಿಷ್ಟ ಜಾತಿ ಮತ್ತು ಪಂಗಡ ಹಾಗೂ ಅಲ್ಪಸಂಖ್ಯಾತರನ್ನು ಹೊರಗಿಟ್ಟು ಯಾವ ಸಮಗ್ರ ಅಭಿವೃದ್ಧಿಯೂ ಸಾಧ್ಯವಿಲ್ಲ. ಸಾಮಾಜಿಕ ನ್ಯಾಯ ಒದಗಿಸದೇ ತೆಲಂಗಾಣಾ ಮುಖ್ಯ ಮಂತ್ರಿಗಳ 'ಸುವರ್ಣ ತೆಲಂಗಾಣಾ' ಪರಿಕಲ್ಪನೆ ಸಾಕಾರವಾಗದು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯರಾದ ಬಿ.ವಿ.ರಾಘವಲು ಹೇಳೀದರು



ಪಾದಯಾತ್ರೆಯು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ತಮ್ಮಿನೇನಿ ವೀರಭದ್ರಂ ನೇತೃತ್ವದಲ್ಲಿ ಮುಂದಿನ ಐದು ತಿಂಗಳು ಹಲವು ತಂಡಗಳಾಗಿ 31 ಜಿಲ್ಲೆಗಳನ್ನು ಒಳಗೊಂಡು 4000 ಕಿ.ಮಿ ದೂರ ಸಂಚರಿಸಿ ಮನೆ ಮನೆಗಳಲ್ಲಿ ಪ್ರಚಾರ ನಡೆಸಲಿದೆ. ಟಿಆರ್‌ಎಸ್ ಪಕ್ಷ ತನ್ನ ಅಧಿಕಾರವನ್ನು ಬಳಸಿ ಪಾದಯಾತ್ರೆಗೆ ಅನುಮತಿ ನೀಡದೇ, ತಂಡದ ಸದಸ್ಯರನ್ನು ಬಂಧಿಸುವದು, ಮತ್ತು ಪಾದಯಾತ್ರೆ ಮೇಲೆ ಜನರನ್ನು ಬಿಟ್ಟು ಧಾಳಿ ನಡೆಸುವದು ಮುಂತಾದ ತೊಡಕುಗಳನ್ನು ಉಂಟುಮಾಡುವ ಪ್ರಯತ್ನ ಮಾಡಲಿದೆ, ಆದರೆ ಸಿಪಿಐ(ಎಂ) ಇಂತಹ ಪ್ರಯತ್ನಗಳಿಗೆಲ್ಲ ಹೆದರದು ಮತ್ತು ತನ್ನ ಚಳುವಳಿಯನ್ನು ಪ್ರಜಾಸತ್ತಾತ್ಮಕವಾಗಿಯೇ ರಕ್ಷಿಸಿಕೊಳ್ಳುವುದು ಎಂದು ಸಿಪಿಯ(ಎಂ) ಮುಖಂಡರು ಸಾರಿದ್ದಾರೆ.

ಉದ್ಘಾಟನಾ ಸಭೆಯಲ್ಲಿ ಸಿಪಿಐ(ಎಂ) ಆಂಧ್ರಪ್ರದೇಶ ರಾಜ್ಯ ಕಾರ್ಯದರ್ಶಿ ಪಿ.ಮಧು, ಸಿಪಿಐ ತೆಲಂಗಾಣ ರಾಜ್ಯ ಕಾರ್ಯದರ್ಶಿ ಚಢಾ ವೆಂಕಟ ರೆಡ್ಡಿ, ಹೈದರಾಬಾದ್ ಕೇಂದ್ರೀಯ ವಿಶ್ವ ವಿದ್ಯಾಲಯದ ಪ್ರೊ. ಕೃಷ್ಣ, ರಾಜ್ಯ ಮಾಲಾ ಮಹಾನಾಡು ಅಧ್ಯಕ್ಷ ಅದ್ದಂಕಿ ದಯಾಕರ್, ಎಂಆರ್‌ಪಿಎಸ್ ರಾಜ್ಯ ಮುಖಂಡ ಬಾಬು ಮಾದಿಗ, ಮಾಜಿ ಸಂಸದ ರವಿಂದರ್ ನಾಯಕ್, ಶಿಕ್ಷಕರ ಜಂಟಿ ಕ್ರಿಯಾಸಮಿತಿಯ ಮುಖಂಡ ರವಿಚಂದ್ರ, ಎಂಸಿಪಿಐ ಕಾರ್ಯದರ್ಶಿ ಶ್ರೀನಿವಾಸ ರೆಡ್ಡಿ, ಅಲ್ಪಸಂಖ್ಯಾತ ಸೆಲ್‌ನ ಅಧ್ಯಕ್ಷ ಖಾದ್ರಿ, ಸಿನೆಮಾ ನಟ ಮಾದಾಲ ರವಿ ಮತ್ತು ಹಿರಿಯ ಸಿಪಿಐ(ಎಂ) ಮುಖಂಡರಾದ ಮಲ್ಲು ಸ್ವರಾಜ್ಯಂ ಭಾಗವಹಿಸಿದರು.

ತೂತುಕುಡಿ ಬಂದರು ನೌಕರರು ಅನಿರ್ದಿಷ್ಟ ಮುಷ್ಕರಕ್ಕೆ ಸಿದ್ಧರಾಗುತ್ತಿದ್ದಾರೆ


ವಿಓಸಿ ಬಂದರಿನ ಕಾರ್ಮಿಕ ಸಂಘಟನೆ ಮತ್ತು ನೌಕರರು ತೂತುಕುಡಿಯ 400 ಕೋಟಿ ರೂ ನಿಧಿಯನ್ನು ಪ್ರಸ್ತಾಪಿತ ಹೊಸ ಇನಾಯಂ ಬಂದರಿಗೆ ವರ್ಗಾಯಿಸುವದಕ್ಕೆ ತೀವ್ರ ವಿರೋಧ ವ್ಯಕ್ತ ಪಡಿಸುತ್ತಿದ್ದಾರೆ.

ಇತ್ತೀಚೆಗೆ ಕೇದ್ರ ಸರಕಾರ ಕನ್ಯಾಕುಮಾರಿ ಜಿಲ್ಲೆಯ, ಕೇರಳ ಗಡಿ ಬಾಗದಲ್ಲಿರುವ ಇನಾಯಂ ಭಂದರಿಗೆ ವಿಶೇಷ ಉದ್ದೇಶ ವಾಹಕ(ಎಸ್‌ಪಿವಿ) ನಿಧಿಯಿಂದ ಮೊದಲ ಹಂತದ 6,575 ಕೋಟಿ ಮಂಜೂರು ಮಾಡುವದರ ಮೂಲಕ ಪ್ರಸ್ತಾಪಕ್ಕೆ ಸ್ಪಷ್ಟ ಒಪ್ಪಿಗೆ ನೀಡಿದೆ. ಆರಂಭದ ಹಂತದಲ್ಲಿ ಮಂಜೂರು ಮಾಡಲಾದ ನಿಧಿಯಲ್ಲಿ 3,185 ಕೋಟಿಯನ್ನು ಹಿನ್ನೀರಿನ ನಿರ್ಮಾಣಕಾರ್ಯಕ್ಕಾಗಿ ಬಳಸಲಾಗುವದು. ಈ ಉದ್ದೇಶಕ್ಕಾಗಿ 1000 ಕೋಟಿ ರೂ. ಅನ್ನು ಈಗಿರುವ ಮುಖ್ಯ ಬಂದರುಗಳಾದ ತೂತುಕುಡಿ ಮತ್ತು ಎನ್ನೋರ ಬಂದರಿನಿಂದ ತಲಾ 400 ಕೋಟಿ ಹಾಗೂ ಚನ್ನೈ ಬಂದರಿನಿಂದ 200 ಕೋಟಿ ರೂಪಾಯನ್ನು ಪಡೆಯಲು ಸೂಚಿಸಲಾಗಿದೆ.

ತೂತುಕುಡಿ ಬಂದರಿನಲ್ಲಿ ಪಿಂಚಣಿ ಮತ್ತು ಪಿ.ಫ್‌ಗೆ ಸಂಭಂದ ಪಟ್ಟಂತೆ ಈಗಾಗಲೇ 450 ಕೋಟಿ ರೂ.ಕೊರತೆ ಇದೆ. ಅಷ್ಟೇ ಅಲ್ಲದೇ, ವಿವಿಧ ಅಭಿವೃದ್ಧಿ ಕಾರ್ಯಗಳಾದ ಹೂಳೆತ್ತುವದು, ಹೊಸ ಉಪಕರಣಗಳ ಖರೀದಿ, ಹೊಸ ಬೋಟ್‌ಗಳು ಮತ್ತು ಮೂಲಭೂತ ಸೌಕರ್ಯಗಳ ಕೆಲಸಗಳು ಕಳೆದ 2 ವರ್ಷಗಳಿಂದ ಸಮರ್ಪಕ ಹಣದ 'ಕೊರತೆಯಿಂದಾಗಿ ಬಾಕಿ ಉಳಿದುಕೊಂಡಿದೆ, ಹೀಗಿರುವಾಗ ತೂತುಕುಡಿಯ 400 ಕೋಟಿ ರೂ ನಿಧಿಯನ್ನು ಇನಾಯಂಗೆ ವರ್ಗಾಯಿಸಿದರೆ ತೂತುಕುಡಿಯ ಅಭಿವೃದ್ಧಿ ಕಾರ್ಯ ಹಾಗೆಯೇ ಉಳಿದುಬಿಡುತ್ತದೆ ಎಂದು ಸಿಐಟಿಯುವಿನ ರಾಜ್ಯ ಕಾರ್ಯದರ್ಶಿಗಳಾದ ಆರ್ ರಸೆಲ್ ಹೇಳುತ್ತಾರೆ.

ಕಳೆದ 2ವರ್ಷಗಳಿಂದ ನಡೆಯುತ್ತಿರುವ ತೂತುಕುಡಿಯ ಹೊರ ಬಂದರು ಯೋಜನೆಯನ್ನು ನಿಲ್ಲಿಸಿ ಬಿಡಬೇಕೆಂದು ಕೇಂದ್ರ ಸರಕಾರ ಬಾಯ್ಮಾತಿನ ಮೂಲಕ ಸೂಚನೆಯನ್ನು ನೀಡಿದೆ ಎನ್ನಲಾಗಿದೆ. ಇದರ ಆರಂಭಿಕ ಹಂತಕ್ಕೆ 7000 ಕೋಟಿರೂ. ಮಂಜೂರು ಮಾಡಲಾಗಿತ್ತು. ಆದರೆ ಈಗ ಇಲ್ಲಿಯವರೆಗೆ ಮಾಡಿದ ಎಲ್ಲ ಕೆಲಸ ಮತ್ತು ಖರ್ಚುಮಾಡಿದ ಹಣ ವ್ಯರ್ಥವಾಗಲಿದೆ. ಇವನ್ನೆಲ್ಲ ಹಡಗು ರಾಜ್ಯ ಮಂತ್ರಿ ರಾಧಾಕೃಷ್ಣನ್‌ಅವರಪ್ರಯೋಜನಕ್ಕಾಗಿ ಮಾಡಲಾಗುತ್ತಿದೆ. ಇನಾಯಮ್ ಬಂದರು ಅವರ ಕ್ಷೇತ್ರದ ಪರಿಮಿತಿಯಲ್ಲಿ ಬರುತ್ತದೆ.

ಆದರೆ ಇದಕ್ಕೆ ಇತರ ಬಂದರುಗಳ ಅಭಿವೃದ್ಧಿಯನ್ನೇಕೆ ಮೊಟಕು ಮಾಡಬೇಕು, ಅಥವ ಈಗಾಗಲೇ ಮಾಡಿರುವ ಕೆಲಸಗಳನ್ನು ವ್ಯರ್ಥಗೊಳಿಸಬೇಕುಎಂಬುದು ಇಲಿನ ಬಂದರು ಕಾರ್ಮಿಕರ ಪ್ರಶ್ನೆ. ಸಪ್ಟಂಬರ್ 23ರಂದು ಈಕುರಿತು ಬೃಹತ್ ಪ್ರತಿಭಟನೆ ನಡೆದಿದೆ. ಅವರೀಗ ಈ ಅನ್ಯಾಯದ ವಿರುದ್ಧ ಅನಿರ್ದಿಷ್ಟ ಮುಷ್ಕರಕ್ಕೆ ಸಿದ್ಧವಾಗುತ್ತಿದ್ದಾರೆ.



ತ್ರಿಪುರಾ ಮುಖ್ಯಮಂತ್ರಿಗಳ ನಿವಾಸದ ಮೇಲೆ ಬಿಜೆಪಿ ದಾಳಿಯ ಕುತಂತ್ರದ ವಿರುದ್ಧ ಬೃಹತ್ ಪ್ರತಿಭಟನೆ

ಅಕ್ಟೋಬರ್ 16ರಂದು ತ್ರಿಪುರಾದ ರಾಜಧಾನಿ ಅಗರ್ತಲಾ ಒಂದು ಬೃಹತ್ ಪ್ರತಿಭಟನೆಯನ್ನು ಕಂಡಿತು. ರಾಜ್ಯ ಬಿಜೆಪಿ ಅಧ್ಯಕ್ಷ ಬಿಪ್ಲಬ್ ದೆಬ್ ಮೇಲೆ ದಾಳಿ ನಡೆದಿದೆ ಎಂದು ಬಿಜೆಪಿ ಕಾರ್ಯಕರ್ತರು ಮುಖ್ಯಮಂತ್ರಿಗಳ ನಿವಾಸದ ಮೇಲೆ ದಾಳಿ ಮಾಡುವ ವಿಫಲ ಪ್ರಯತ್ನ ನಡೆಸಿದರು. ನಂತರ ಇದು ಸ್ವತಃ ಬಿಜೆಪಿ ಅಧ್ಯಕ್ಷ ಸೃಷ್ಟಿಸಿದ ಸುಳ್ಳು ಎಂದು ಬಯಲಾದಾಗ ಆಕ್ರೋಶಗೊಂಡ ಅಗರ್ತಲಾದ ಜನ ಬೀದಿಗಳಿದು ಬಿಜೆಪಿ ಮುಖಂಡರ ವಿರುದ್ಧ ಪ್ರತಿಭಟನೆ ನಡೆಸಿದರು.

ರಾಜ್ಯದಲ್ಲಿ ದುರ್ಗಾ ಮೂರ್ತಿಗಳ ವಿಸರ್ಜನೆಯ ಶರದ್ ಉತ್ಸವ ಮತ್ತು ಮೊಹರ್‍ರಂ ಒಟ್ಟಿಗೇ ಶಾಂತಿಯುತವಾಗಿ ನೆರವೇರಿದ್ದರಿಂದ ಕುಪಿತಗೊಂಡ ಬಿಜೆಪಿಯ ಅಧ್ಯಕ್ಷರು ಉತ್ಸವ ಮತ್ತು ಮೊಹರ್‍ರಂ ಮೆರವಣಿಗೆಯ ವೇಳೆ ನಡೆದ ಸಣ್ಣ ಘಟನೆಯನ್ನು ದೊಡ್ಡದು ಮಾಡಿ ತನ್ನ ಮೇಲೆ ದಾಳಿ ನಡೆದಿದೆ ಎಂದು ಚಿತ್ರಿಸಲು ಪ್ರಯತ್ನಿಸಿದ್ದರು. ಆದರೆ ಅದು ಶೋಚನೀಯವಾಗಿ ವಿಫಲಗೊಂಡಿತು.

ರಾಜ್ಯಗಳ ಸುತ್ತ

ಭಾರತಿ ಗಾಂವ್ಕರ್

ಜಮ್ಮು ಗಡಿಪ್ರದೇಶದ ನಿವಾಸಿಗಳ ದುರವಸ್ಥೆ ಬಗ್ಗೆ ಸಿ.ಪಿ.ಐ(ಎಂ) ಕಳವಳ

ಜಮ್ಮು-ಕಾಶ್ಮೀರದ ಸಿಪಿಐ(ಎಂ) ಪ್ರಾದೇಶಿಕ ಸಮಿತಿಯು ಜಮ್ಮೂವಿನ ಗಡಿ ನಿಯಂತ್ರಣರೇಖೆಯ ಬಳಿಇರುವ ಹಳ್ಳಿಗಳಿಗೆ ಭೇಟಿ ನೀಡಿಅಲ್ಲಿನ ನಿವಾಸಿಗಳು ಎದುರಿಸುತ್ತರುವ ಸಮಸ್ಯೆಗಳನ್ನು ಪರಿಶೀಲಿಸಿತು. ಅಂತರಾಷ್ಟ್ರೀಯ ಗಡಿ ಮತ್ತು ನಿಯಂತ್ರಣ ರೇಖೆಗಳಲ್ಲಿ ನಡೆಯುವ ಗುಂಡಿನ ಧಾಳಿಯಿಂದಾಗಿ ಅಲ್ಲಿನ ಹಳ್ಳಿಗಳಲ್ಲಿ ವಾಸಿಸುತ್ತಿರುವ ಜನರು ವಲಸೆ ಹೋಗಿ ತಮ್ಮತಮ್ಮ ಸಂಭಂದಿಗಳ ಮನೆಗಳಲ್ಲಿ ವಾಸಿಸುತ್ತಿದ್ದಾರೆ. ಇನ್ನೂ ಕೆಲವರು ತಮ್ಮ ಕೊಯ್ಲಿಗೆ ಬಂದು ನಿಂತ ಬೆಳೆಗಳನ್ನು ಮತ್ತು ದನಕರುಗಳನ್ನು ರಕ್ಷಿಸಿಕೊಳ್ಳಲು ಅಲ್ಲಿಯೇ ವಾಸಿಸುತ್ತಿದ್ದಾರೆ.

ಕೇಂದ್ರ ಅಥವಾ ರಾಜ್ಯ ಸರಕಾರಗಳಿಂದ ಯಾವುದೇ ಪರಿಹಾರಗಳನ್ನು ಅವರಿಗೆ ವಸ್ತುತಹಃ ನೀಡಲಾಗಿಲ ಎಂದು ಈ ಹಳ್ಳಿ ನಿವಾಸಿಗಳು ದೂರಿದ್ದಾರೆ. ದಶಕಗಳಿಗಿಂತಲೂ ಹೆಚ್ಚುಕಾಲ ಪದೇ ಪದೇ ಗುಂಡಿನ ಧಾಳಿಗಳಿಗೆ ತುತ್ತಾಗುತ್ತಿದ್ದರೂ ಪರಿಹಾರ ನೀಡುವದಾಗಿ ಪೊಳ್ಳು ಭರವಸೆಗಳನ್ನು ನೀಡಲಾಗುತ್ತಿದೆಯೇ ಹೊರತು ಗಡಿಪ್ರದೇಶದ ನಿವಾಸಿಗಳ ಜೀವನ ಸುಧಾರಣೆಗೆ ಏನನ್ನೂ ಮಾಡಿಲ್ಲ ಎಂದು ಅವರು ದೂರುತ್ತಿದ್ದಾರೆ.

ಅಷ್ಟೇ ಅಲ್ಲದೇ ಗಡಿ ಪ್ರದೇಶದ ವಿದ್ಯಾರ್ಥಿಗಳ ಶಿಕ್ಷಣದ ಮೇಲೂ ಗಂಭೀರ ಪರಿಣಾಮ ಉಂಟಾಗಿದೆ. ಕೆಲ ಸಂದರ್ಭಗಳಲ್ಲಿ ಮನೆಗಳನ್ನು ಖಾಲಿ ಮಾಡಲು ಹೇಳಲಾಗುತ್ತದೆ. ಆದರೆ ಯಾವುದೇ ವಾಹನ, ವಸತಿ ವ್ಯವಸ್ಥೆಯನ್ನು ನಿರಾಶ್ರಿತರಿಗಾಗಿ ಮಾಡುವದಿಲ್ಲ ಎಂದು ಅವರು ದೂರಿನಲ್ಲಿ ತಿಳಿಸಿದ್ದಾರೆ. ಹಸಿವು ಮತ್ತು ಬಾಯಾರಿಕೆಯಂತಹ ಪರಿಸ್ಥಿತಿಗಳನ್ನು ಎದುರಿಸಬೇಕಾದ್ದರಿಂದ ಜಾನುವಾರುಗಳನ್ನು ಅಲ್ಲಿಯೇ ಬಿಟ್ಟು ಬಂದಿರುವದಾಗಿ ಅವರು ಹೇಳಿದರು.

ಅವರ ಬೇಡಿಕೆಗಳು * ಕಾಶ್ಮೀರದ ವಲಸಿಗರಿಗೆ ನೀಡಿದಂತೆ ಸುರಕ್ಷಿತ ಪ್ದೇಶಗಳಲ್ಲಿ ಮನೆ ನಿರ್ಮಿಸಿ ಕೊಡಬೇಕು * ಮನೆ, ಜಾನುವಾರು ಮತ್ತು ಬೆಳೆಗಳು ನಾಶವಾದುದಕ್ಕೆ ಸೂಕ್ತ ಪರಿಹಾರ ನೀಡಬೇಕು * ವಿಯೆಟ್ನಾಮ್-ಅಮೇರಿಕಾ ಯುದ್ಧ ಸಂದರ್ಭದಲ್ಲಿ ವಿಯೆಟ್ನಾಮ್‌ನಲ್ಲಿ ನಿರ್ಮಿಸಿ ಕೊಟ್ಟಿದ್ದ ಮಾದರಿಯಲ್ಲಿ ಜನಸಂಖ್ಯಾ ಆಧಾರದ ಮೇಲೆ ಉತ್ತಮ ಬಂಕರ್‌ಗಳ ನಿರ್ಮಾಣ ಮಾಡಿಕೊಡಬೇಕು. * ಗಡಿ ನಿವಾಸಿಗಳಿಗೆ ತಮ್ಮ ಕೃಷಿಭೂಮಿಯನ್ನು ಉಪಯೋಗಿಸಲು ಮತ್ತು ಸಮರ್ಪಕ ದುಡಿಮೆ ಮಾಡಲು ಈಗಿರುವ 2 ಗಂಟೆಗಳ ಕಾಲಾವಧಿಯನ್ನು ವಿಸ್ತರಿಸಿ 6 ಗಂಟೆ ಮಾಡಬೇಕು.

ಸೇಲಂ ಉಕ್ಕು ಸ್ಥಾವರದ ಖಾಸಗೀಕರಣದ ವಿರುದ್ಧ ಪ್ರತಿಭಟನೆ

ಸೇಲಂನ ಉಕ್ಕು ಸ್ಥಾವರ ನೀತಿ ಆಯೋಗದ ಶಿಫಾರಸಿನಂತೆ ಪ್ರಧಾನ ಮತ್ರಿಗಳಿ ಕಚೇರಿ ಮಾರಲು ಹೊರಟಿರುವ 22 ಸಾರ್ವಜನಿಕ ವಲಯದ ಘಟಕಗಳಲ್ಲಿ ಓಂದು. ಇದರಲ್ಲಿ ಕೇಂದ್ರ ಸರಕಾರದ ಪಾಲನ್ನು 51ಶೇ,ಕ್ಕಿಂತ ಕಡಿಮೆ ಮಾಡಿ ಇದನ್ನು ಖಾಸಗಿಯವರಿಗೆ ಕೊಡುವ ಈ ಹುನ್ನಾರದೇಶದ ಪ್ರಗತಿಗೆ ಮಾರಕ ಎಂದು ಈ ಸಥಾವರದ ಕಾರ್ಮಿಕರು ಸಪ್ಟಂಬರ್ 23ರಿಂದ 'ಒಳಗೆ ಕುಳಿತುಕೊಳ್ಳುವ ಮುಷ್ಕರ' ಆರಂಭಿಸಿದ್ದಾರೆ. ಆದಿನ ಬೆಳಿಗ್ಯೆ ಸಿಐಟಿಯು, ಐಎನ್‌ಟಿಯುಸಿ, ಎಲ್‌ಪಿಎಫ್ ಮತ್ತು ಪರಿಶಿಷ್ಟ ಜಾತಿ/ ಪಂಗಡಗಳ ನೌಕರರ ಮತ್ತು ಅಧಿಕಾರಿಗಳ ಕಲ್ಯಾಣ ಸಂಘದ ಸದಸ್ಯರು ಸ್ಥಾವರದ ಮುಖ್ಯದ್ವಾರದ ಎದುರು ಪ್ರತಿಭಟನೆ ನಡೆಸಿದರು.

ನಂತರ ಈ ದಾರಿಯಾಗಿ ಕೇರಳಕ್ಕೆ ತೆರಳುತ್ತಿದ್ದ ಉಕ್ಕು ಮತ್ತು ಗಣಿ ರಾಜ್ಯಮಂತ್ರಿ ವಿಷ್ಣುದೇವ್ ಸಾಯ್ ಅವರನ್ನು ಭೇಟಿ ಮಾಡಿ ಈ ಸಥಾವರದ ಶೇರು ಮಾರಾಟವನ್ನು ಕೈಬಿಡಬೇಕು ಎಂಬ ಮನವಿ ಪತ್ರವನ್ನು ಸಲ್ಲಿಸಿದರು.

ಕೇಂದ್ರ ಸರಕಾರದ ಈ ಮಾರಾಟ ಯೋಜನೆಗೆ ರಾಜ್ಯದ ಎಲ್ಲ ರಾಜಕೀಯ ಪಕ್ಷಗಳಿಂದಲೂ ವ್ಯಾಪಕ ವಿರೋಧ ವ್ಯಕ್ತವಾಗಿದೆ.





ಸಿಪಿಐ(ಎಂ) ಮೇಲೆ ಸಂಘಗ್ಯಾಂಗಿನ ದಾಳಿ: ರಾಜ್ಯಾದ್ಯಂತ ಪ್ರತಿಭಟನೆ

ಅಕ್ಟೋಬರ್ 15, 2016ರಂದು ಸುಮಾರು 150 ಜನ ಬಿಜೆಪಿ ಕಾರ್ಯಕರ್ತರು ಮತ್ತು ಬೆಂಬಲಿಗರು ಮಹಾಲಕ್ಷ್ಮಿ ಲೇಔಟ್ ನಲ್ಲಿರುವ ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)–ಸಿಪಿಐ(ಎಂ)ನ ರಾಜ್ಯ ಕೇಂದ್ರದ ಕಛೇರಿ ಇ.ಎಂ.ಎಸ್.ಭವನದ ಮೇಲೆ ದಾಳಿ ಮಾಡಿ ದಾಂದಲೆ ಎಬ್ಬಿಸಲು ಪ್ರಯತ್ನಿಸಿದ್ದಾರೆ. ಅದೇ ದಿನ ಒಡಿಶಾದ ರಾಜ್ಯ ಕಚೇರಿ ಮೇಲೂ ದಾಳಿಯ ಪ್ರಯತ್ನಗಳು ನಡೆದಿವೆ. ತ್ರಿಪುರಾದ ಕಮ್ಯೂನಿಸ್ಟ್ ಮುಖ್ಯಮಂತ್ರಿ ಮಾಣಿಕ್ ಸರ್ಕಾರ್ ರವರ ಮನೆ ಮೇಲೆ ದಾಳಿ, ಹಾಗೂ ಕೇರಳ ರಾಜ್ಯದ ವಿವಿದೆಡೆ ಕಮ್ಯೂನಿಸ್ಟರನ್ನು ಗುರಿಯಾಗಿಸಿಕೊಂಡು ದಾಳಿಗಳು ವ್ಯಾಪಕವಾಗುತ್ತಿವೆ. ಇವೆಲ್ಲವನ್ನೂ ಖಂಡಿಸಿ ಅಕ್ಟೋಬರ್ 16, 17, 18ರಂದು ಸಿಪಿಐ(ಎಂ) ರಾಜ್ಯ ಸಮಿತಿಯ ಕರೆ ಮೇರೆಗೆ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಪ್ರತಿಭಟನೆ ನಡೆಸಲಾಗಿದೆ.

ಬೆಂಗಳೂರಿನ ಮೈಸೂರು ಬ್ಯಾಂಕ್ ವೃತ್ತದಲ್ಲಿ ಪ್ರತಿಭಟನೆಯನ್ನು ಹಮ್ಮಿಕೊಳ್ಳಲಾಗಿತ್ತು. ಪ್ರತಿಭಟನಾ ಸಭೆಯನ್ನು ಉದ್ದೇಶಿಸಿ ಮೊದಲಿಗೆ ಸಿಪಿಐ(ಎಂ) ರಾಜ್ಯ ಸಮಿತಿ ಸದಸ್ಯರು ಹಾಗೂ ಬೆಂಗಳೂರು ದಕ್ಷಿಣ ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕೆ.ಪ್ರಕಾಶ್‌ರವರು ಮಾತನಾಡಿ "ಇತ್ತೀಚಿಗೆ ನಡೆದ ವಿಧಾನಸಭಾ ಚುನಾವಣೆಯಲ್ಲಿ ಎಡಪಕ್ಷಗಳು ಅಭೂತಪೂರ್ವ ಯಶಸ್ಸು ಕಂಡಿದ್ದು, ರಾಜ್ಯದ ಮುಖ್ಯಮಂತ್ರಿಗಳಾಗಿ ಸಿಪಿಐ(ಎಂ)ನ ಪಿಣರಾಯ್ ವಿಜಯನ್‌ರವರು ಸರ್ಕಾರವನ್ನು ಮುನ್ನಡೆಸುತ್ತಿದ್ದಾರೆ. ಸಿಪಿಐ(ಎಂ) ಪಕ್ಷವು ದೇಶದ ಉದ್ದಗಲಕ್ಕೂ ಜನತೆಯ ಪರವಾಗಿ, ಕಾರ್ಮಿಕರ ಪರವಾಗಿ, ರೈತರ ಪರವಾಗಿ, ಅವರ ಸಮಸ್ಯೆಗಳ ಪರಿಹಾರಕ್ಕಾಗಿ ನಿರಂತರವಾದ ಹೋರಾಟಗಳನ್ನು ನಡೆಸುತ್ತಿದ್ದು ಇದನ್ನು ಸಹಿಸದ ಆರ್.ಎಸ್.ಎಸ್. / ಬಿಜೆಪಿ ಒಳಗೊಂಡ ಸಂಘಪರಿವಾರವು ಸಿಪಿಐ(ಎಂ) ಕಾರ್ಯಕರ್ತರ ಮೇಲೆ ದಾಳಿಗೆ ಮುಂದಾಗಿದ್ದಾರೆ.

ಹಾಗೆಯೇ ಮಾಣಿಕ್ ಸರ್ಕಾರ್‌ರವರ ಮನೆ ಮೇಲೆ ಆರ್.ಎಸ್. ಎಸ್. ಗೂಂಡಾಗಳು ದಾಳಿ ನಡೆಸಿ ಭದ್ರತಾ ಸಿಬ್ಬಂದಿಗಳ ಮೇಲೆ ಹಲ್ಲೆ ನಡೆಸಿದ್ದಾರೆ. ಕೇರಳದಲ್ಲಿ ಸುಮಾರು 35 ಪಕ್ಷದ ಕಛೇರಿಗಳ ಮೇಲೆ ದಾಳಿ ನಡೆದಿದೆ. ರಾಜ್ಯದಲ್ಲಿ ಎಲ್‌ಡಿಎಫ್ ಸರ್ಕಾರ ಅಧಿಕಾರಕ್ಕೆ ಬಂದ ನಂತರದಲ್ಲಿ 7 ಜನ ಸಿಪಿಐ(ಎಂ) ಕಾರ್ಯಕರ್ತರನ್ನು ಕೊಲೆ ಮಾಡಲಾಗಿದೆ.

ಹಣದ ಆಮೀಷದ ಮೂಲಕ ಜನಪ್ರತಿನಿಧಿಗಳನ್ನು ಕೊಂಡುಕೊಂಡು ರಾಜ್ಯಸಭಾ ಸದಸ್ಯರಾಗಿರುವ ಬಿಪಿಎಲ್ ಕಂಪನಿ ಮಾಲೀಕ ರಾಜೀವ್ ಚಂದ್ರಶೇಖರ್‌ರವರು ಬಿಜೆಪಿ ಪಕ್ಷದ ಮುಖಂಡರಾಗಿ ನಡೆದ ಒಂದ ವಿಚಾರ ಸಂಕಿರಣದಲ್ಲಿ ಕಮ್ಯೂನಿಸ್ಟ್ ಪಕ್ಷದ ಮೇಲೆ ಆರೋಪ ಹೊರಿಸಿ, ಸಿಪಿಐ(ಎಂ) ಪಕ್ಷವನ್ನು ನಿರ್ನಾಮ ಮಾಡಬೇಕೆಂದು ಹೇಳಿದ್ದಾರೆ. ಬಿಜೆಪಿ ಪಕ್ಷದಲ್ಲಿರುವವರು ಬಹುತೇಕ ಜನ ಬಂಡವಾಳದಾರರು, ಶ್ರೀಮಂತರು, ಕೈಗಾರಿಕೋದ್ಯಮಿಗಳು ಇವರ ರಕ್ಷಣೆಗಾಗಿ ಬಿಜೆಪಿ ಪಕ್ಷವು ನಿಂತಿದೆ. ಜನತೆಯ ಪರವಾಗಿ ಕೆಲಸ ಮಾಡುವ ಸಿಪಿಐ(ಎಂ) ಪಕ್ಷದ ವಿರುದ್ಧ ದಾಳಿಗೆ ಮುಂದಾಗಿದ್ದಾರೆ.

ಕೇಂದ್ರದ ವಿರುದ್ಧ ಜನತೆಯ ಆಕ್ರೋಶ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಈ ಹಿನ್ನೆಲೆಯಲ್ಲಿಯೇ ಕಳೆದ ಸೆಪ್ಟಂಬರ್ 2ರಂದು ನಡೆದ ಮುಷ್ಕರದಲ್ಲಿ ಸುಮಾರು 18 ಕೋಟಿ ಜನರು ಭಾಗವಹಿಸಿದ್ದರು. ಕೇಂದ್ರದ ಜನ ವಿರೋಧಿ ನೀತಿಯ ವಿರುದ್ಧ ಜನತೆಯಲ್ಲಿ ಪ್ರತಿರೋಧಗಳು ಹೆಚ್ಚಾಗುತ್ತಿದೆ. ಕಾಂಗ್ರೆಸ್ ಪಕ್ಷ ಜನತೆಯ ಪರವಾಗಿ ಹೋರಾಟಗಳನ್ನು ಮಾಡುವುದಿಲ್ಲ. ಸಿಪಿಐ(ಎಂ) ನೇತೃತ್ವದ ಎಡಪಕ್ಷಗಳು ಮಾತ್ರ ಜನಪರವಾಗಿ ನಿರಂತರವಾಗಿ ಚಳುವಳಿ ನಡೆಸುತ್ತಾ ಬಂದಿದೆ.

ಒಂದು ಕಡೆ ರೈತರ ಆತ್ಮಹತ್ಯೆಗಳು, ಇನ್ನೊಂದು ಕರೆ ಜಾತಿ, ಧರ್ಮದ ಹೆಸರಿನಲ್ಲಿ ದಾಳಿ ದಬ್ಬಾಳಿಕೆಗಳು, ಕೋಮುಗಲಭೆಗಳು, ಗೋವಿನ ಹೆಸರು ಹೇಳಿಕೊಂಡು ದಲಿತರ ಮೇಲೆ ಹಲ್ಲೆಗಳು ಅತ್ಯಂತ ವ್ಯವಸ್ಥಿತವಾಗಿ ಸಂಘಟಿಸಲಾಗುತ್ತಿದೆ. ಜನತೆಯಿಂದ ಎದ್ದು ಬರುತ್ತಿರುವ ಪ್ರತಿರೋಧವನ್ನು ಹಿಮ್ಮೆಟ್ಟಿಸಲು ದಾಳಿ ದಬ್ಬಾಳಿಕೆಯನ್ನು ನಡೆಸುತ್ತಿದ್ದಾರೆ. ಇಂತಹ ದಾಳಿಗಳಿಗೆ ಸಿಪಿಐ(ಎಂ) ಎಂದಿಗೂ ಹೆದರುವುದಿಲ್ಲ. ಜನಪರ ಹೋರಾಟ ಮೂಲಕ ಉತ್ತರ ಕೊಡುತ್ತೇವೆ ಎಂದು ತಿಳಿಸಿದರು.

ಕಾ. ಹೆಚ್.ಎನ್.ಗೋಪಾಲಗೌಡ, ಆರ್.ಶ್ರೀನಿವಾಸ್, ಕೆ.ಎನ್. ಉಮೇಶ್ ಅವರುಗಳೂ ಮಾತನಾಡಿದರು.

ಉತ್ತರ ಕನ್ನಡ ಜಿಲ್ಲೆಯ ದಾಂಡೇಲಿಯಲ್ಲಿ ಅಕ್ಟೋಬರ್ 18ರಂದು ಸಿಪಿಐ(ಎಂ) ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ಸಂಘಪರಿವಾರದ ಭೂತ ದಹನ ಮಾಡುವ ಮೂಲಕ ಆಕ್ರೋಶ ವ್ಯಕ್ತಪಡಿಸಿದರು. ಸಭೆಯನ್ನು ಉದ್ದೇಶಿಸಿ ಮಾತನಾಡಿದ ಜಿಲ್ಲಾ ಕಾರ್ಯದರ್ಶಿ ಕಾ॥ಯಮುನಾ ಗಾಂವ್ಕರ್‌ರವರು "ದ್ವೇಷದ ರಾಜಕಾರಣ ನಿಲಿಸದಿದ್ರೆ ಜನತೆ ಉತ್ತರ ಕೊಡುತ್ತಾರೆ. ಹೋರಾಟ ಮಾಡುವುದಾದರೆ ದೇಶದ ತುಂಬಾ ಜನ ಸಾಮಾನ್ಯರ ಸಮಸ್ಯೆಗಳನ್ನೆತ್ತಿಕೊಂಡು ಪರಿಹಾರಕ್ಕೆ ಹೋರಾಡಿ, ಧರ್ಮ, ಜಾತಿ ರಾಜಕೀಯ ಕಾರಣ ಮುಂದಿಟ್ಟು ದೈಹಿಕ ದಾಳಿ, ಕೊಲೆ ಬೆದರಿಕೆ, ಕಛೇರಿ ಮೇಲೆ ದಾಳಿ ನಿಲ್ಲಿಸಿ, ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಮೇಲಿನ ದಾಳಿ ಜನ ಸಾಮಾನ್ಯರ ಮೇಲಿನ ದಾಳಿಯಾಗಿದೆ ಎಂದು ತಿಳಿಸಿದರು.

ಪ್ರತಿಭಟನೆಯಲ್ಲಿ ನಾಗಪ್ಪ ನಾಯ್ಕ, ರಾಜಾಸಾಬ್, ಡಿ.ಸ್ಯಾಮ್‌ಸನ್, ಮಹಮ್ಮದ್ ಸಲಿಂ, ಜಗದೀಶ, ಪ್ರಭುದಾಸ, ರತ್ನದೀಪಾ, ಲಕ್ಷ್ಮಣ ಕಾಂತ್ ರಾವ್ ಮತ್ತಿತರರು ಹಾಜರಿದ್ದರು.

ಹಾಸನ ಜಿಲ್ಲೆಯಲ್ಲಿ ಕಮ್ಯೂನಿಸ್ಟರ ಮೇಲಿನ ದಾಳಿಯನ್ನು ಖಂಡಿಸಿ ನಗರದ ಹೇಮಾವತಿ ಪ್ರತಿಮೆ ಮುಂಬಾಗ ಪ್ರತಿಭಟನೆ ನಡೆಸಿದ ಸಿಪಿಐ(ಎಂ) ಕಾರ್ಯಕರ್ತರು ಬಿ.ಜೆಪಿ–ಆರ್.ಎಸ್.ಎಸ್ ನ ಗೂಂಡಾ ಸಂಸ್ಕೃತಿಯ ವಿರುದ್ಧ ಘೋಷಣೆ ಕೂಗಿದರು. ಪ್ರತಿಭಟನೆಯಲ್ಲಿ ಸಿಪಿಐಎಂ ಸ್ಥಳೀಯ ಸಮಿತಿ ಕಾರ್ಯದರ್ಶಿ ಎಚ್.ಆರ್.ನವೀನ್‌ಕುಮಾರ್, ಜಿಲ್ಲಾ ಸಮಿತಿ ಮುಖಂಡರಾದ ಜಿ.ಪಿ.ಸತ್ಯನಾರಾಯಣ, ಸಿಪಿಐನ ಡೋಂಗ್ರೆ ಮತ್ತು ಪೃಥ್ವಿ ಮಾತನಾಡಿದರು.

ಸಿಪಿಐ(ಎಂ) ನೇತೃತ್ವದಲ್ಲಿ ಬಳ್ಳಾರಿ ಜಿಲ್ಲೆಯ ಬಳ್ಳಾರಿ, ಸಂಡೂರು ಹಾಗೂ ಹೊಸಪೇಟೆಯಲ್ಲಿ ತಹಶೀಲ್ದಾರ್ ಕಛೇರಿ ಆವರಣದಲ್ಲಿ ಪ್ರತಿಭಟನೆ ನಡೆಸಿದರು.

ಅದೇ ರೀತಿಯಲ್ಲಿ ಕಲಬುರಗಿ ಹಾಗೂ ಮೈಸೂರಿನಲ್ಲಿ ಜಿಲ್ಲಾಧಿಕಾರಿ ಕಛೇರಿ ಬಳಿ, ತುಮಕೂರು, ಚಿಕ್ಕಬಳ್ಳಾಪುರ, ಮಂಡ್ಯ, ದೇವದುರ್ಗ, ಸಿಂಧನೂರು, ಗಜೇಂದ್ರಗಡ, ರಾಯಚೂರು, ಇನ್ನಿತರೆ ಜಿಲ್ಲೆ, ತಾಲ್ಲೂಕು ಕೇಂದ್ರಗಳಲ್ಲಿ ಪ್ರತಿಭಟನೆಗಳು ನಡೆದಿವೆ.





ಸಂಘ ಪರಿವಾರದ ಪ್ರತಿಕೃತಿ ದಹನ

ಕೋಲಾರ ನಗರದ ಬಸ್ ನಿಲ್ದಾಣದ ವೃತ್ತದಲ್ಲಿ ಅಕ್ಟೋಬರ್ 17ರಂದು ಸಂಘ ಪರಿವಾರದ ಪ್ರತಿಕೃತಿ ದಹಿಸುವ ಮೂಲಕ ಪ್ರತಿಭಟನೆ ಹಮ್ಮಿಕೊಂಡಿದ್ದ ಪ್ರತಿಭಟನೆಯನ್ನು ಉದ್ದೇಶಿಸಿ ಮಾತನಾಡಿದ ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಗಾಂಧಿನಗರ ನಾರಾಯಣಸ್ವಾಮಿರವರು "ಬಿಜೆಪಿ ಮತ್ತು ಆರ್.ಎಸ್.ಎಸ್. ಮಂದಿ ಜನಪರವಾಗಿ ಹೋರಾಟ ನಡೆಸುತ್ತಿರುವ ಕಮ್ಯೂನಿಸ್ಟರನ್ನು ಗುರಿಯಾಗಿಸಿಕೊಂಡು ಹಲ್ಲೆಗೆ ಮುಂದಾಗಿದ್ದಾರೆ. ಸೈದ್ಧಾಂತಿಕವಾಗಿ ಎದುರಿಸಲಾಗದವರು, ಕಛೇರಿ ಮೇಲೆ ದಾಳಿ, ಕಾರ್ಯಕರ್ತರನ್ನು ಕೊಲ್ಲುವ ಮೂಲಕ ಹಲ್ಲೆಗೆ ಮುಂದಾಗಿದ್ದಾರೆ ಎಂದು ತಿಳಿಸಿದರು. ಪ್ರತಿಭಟನೆಯಲ್ಲಿ ಮುಖಂಡರಾದ ಅರ್ಜುನನ್, ಪಿ.ಶ್ರೀನಿವಾಸ್, ಟಿ.ಎಂ. ವೆಂಕಟೇಶ್, ಪಿ.ಆರ್.ಸೂರ್ಯನಾರಾಯಣ, ಎ.ಆರ್.ಬಾಬು, ಪಿ.ವಿ.ರಮಣ, ಸುಶೀಲ, ಗಾಯತ್ರಿ ಮುಂದಾವರು ಪಾಲ್ಗೊಂಡಿದ್ದರು.

ಆದರೆ ಇದೇ ಸಂದರ್ಭದಲ್ಲಿ ಬೆಂಗಳೂರಿನ ಆರ್.ಎಸ್. ಎಸ್. ಕಾರ್ಯಕರ್ತ ಕೊಲೆ ಖಂಡಿಸಿ ಬಿಜೆಪಿ ಯುವ ಮೋರ್ಚಾ ಕಾರ್ಯಕರ್ತರು ಕೋಲಾರ ನಗರದ ಬಸ್ ನಿಲ್ದಾಣದಲ್ಲಿ ಅದೇ ದಿನ ಪ್ರತಿಭಟನೆ ನಡೆಸಿದ್ದಾರೆ. ಸಿಪಿಐ(ಎಂ) ನೇತೃತ್ವದಲ್ಲಿ ಪ್ರತಿಕೃತಿ ದಹಿಸಿ ಪ್ರತಿಭಟಿಸಲಾಗಿತ್ತು. ಆದೇ ಪ್ರತಿಕೃತಿ ದಹನ ಮುಂಭಾಗ ಮುಖ್ಯಮಂತ್ರಿಗಳ ಪ್ರತಿಕೃತಿ ದಹನ ಮಾಡಲಾಗಿದೆ ಎಂದು ಫೋಟೋಗಳಿಗೆ ಫೋಸು ಕೊಟ್ಟು ಮರು ದಿನದ ಪತ್ರಿಕೆಗಳಲ್ಲಿ ಪ್ರಕಟಿಸಿಕೊಂಡಿದ್ದಾರೆ!









JANASHAKTHI KANNADA VARA PATRIKE OCTO 30, 2016 Price : Rs. 10/- RNI No. KARKAN /2006/17926 Posted on every Satuarday
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026 Licensed to Post without prepayment License No. WPP-283

ದಾಳಿಕೋರರು ಯಾರು? ಆರೆಸ್ಸೆಸ್ ಬಲಿಪಶುಗಳು ಯಾರು? ಸಿಪಿಐ(ಎಂ)



ಸಂಘಗ್ಯಾಂಗಿನ 'ಹುತಾತ್ಮ'ರ ಅಸಲಿಯತ್ತು

ಅಗಸ್ಟ್ 2015ರಲ್ಲಿ 'ಕೇರಳದಲ್ಲಿ ಕಮ್ಯುನಿಸ್ಟ್ ಹಿಂಸಾಚಾರ'ದ ಬಗ್ಗೆ ಒಂದು ಪೋಸ್ಟರ್ ಪ್ರದರ್ಶನವನ್ನು ನವದೆಹಲಿಯಲ್ಲಿ ಏರ್ಪಡಿಸಿತ್ತು. ಪೋಸ್ಟರ್ ಪ್ರದರ್ಶನದಲ್ಲಿ ಸಂಘಗ್ಯಾಂಗಿನ 'ಹುತಾತ್ಮ'ರ ಫೋಟೊಗಳನ್ನು ಹಾಕಲಾಗಿತ್ತು. ಸಿಪಿಐ(ಎಂ)ನ ಕೇಂದ್ರೀಯ ಸಾಮಾಜಿಕ ಮಾಧ್ಯಮ ವಿಭಾಗ ಈ 'ಹುತಾತ್ಮ'ರ ಅಸಲಿಯತ್ತುಗಳನ್ನು ಬಯಲಿಗೆಳೆಯಿತು. ಇವುಗಳಲ್ಲಿ ಗಮನಾರ್ಹವಾದದ್ದು ಎಂದರೆ 'ಹುತಾತ್ಮ'ರಲ್ಲಿ ಆರು ಜನ ಬಾಂಬ್ ತಯಾರಿಕಾ ಘಟಕದಲ್ಲಿ ಅಘಘಾತವಾದಾಗ ಮತ್ತು ಬಾಂಬು ಇಡಲು ಹೋಗುತ್ತಿದ್ದಾಗ ಸತ್ತವರು, ಕೊಲೆಯಾದವರಲ್ಲ ಎಂಬುದನ್ನು ಪತ್ರಿಕಾ ವರದಿಗಳು ಪೋಲಿಸ್ ಮೂಲಗಳಿಂದ ಸಿದ್ಧಪಡಿಸಿತು.

ಪೋಸ್ಟರ್ ಪ್ರದರ್ಶನದಲ್ಲಿ ತೋರಿಸಲಾದ 'ಹುತಾತ್ಮ'ರ ಪೋಸ್ಟರ್ ಇಲ್ಲಿದೆ. ಇದರಲ್ಲಿ ಮೇಲಿನ ಸಾಲಿನಲ್ಲಿ ಹಳದಿ ಮಾರ್ಕಿನಲ್ಲಿ ತೋರಿಸಲಾದ ಮೊದಲ ಇಬ್ಬರು – ಅಶ್ವಿನಿ ಕುಮಾರ್ (28) ಮತ್ತು ಕೆ.ಪಿ.ಸುರೇಂಂದ್ರನ್(32) – ಕಣ್ಣೂರು ಜಿಲ್ಲೆಯ ತಲಸೇರಿ ತಾಲೂಕಿನ ಪೊಯಿಲೂರು ಎಂಬಲಲಿ ಇದ್ದ ಆರೆಸ್ಸೆಸ್ ಬಾಂಬ್ ತಯಾರಕಾ ಘಟಕದಲ್ಲಿ ಆಕಸ್ಮಿಕ ನಡೆದು ಸತ್ತಿದ್ದರು. ಇದು ಮಲಯಾಳಂ ಮನೋರಮಾ ಪತ್ರಿಕೆಯಲ್ಲಿ ಪೊಟೊ ಸಮೇತ ಬಂದಿತ್ತು. ಇವರನ್ನು ಸಿಪಿಐ(ಎಂ) ಕೊಲೆ ಮಾಡಿದ್ದು ಎಂಬುದು ಸುಳ್ಳಲ್ಲವೇ? ಈ ಘಟನೆಯಲ್ಲಿ 4 ಆರೆಸ್ಸೆಸ್ ಕಾರ್ಯಕರ್ತರು ಗಾಯಗೊಂಡಿದ್ದರು.

ಮೂರನೇಯದು ಪಟ್ಯಾಂ ನ ರಾಜೇಶ್. ಈತ ಕರ್ಣಣೂರಿನ ವಲ್ಲಿಯಾವಿ ಎಂಬಲ್ಲಿ ಸಿಪಿಐ(ಎಂ) ಕಾರ್ಯಕರ್ತರ ಮೇಲೆ ಬಾಂಬ್ ಎಸೆಯಲು ಒಯ್ಯುತ್ತಿದ್ದಾಗ ಸ್ಫೋಟಗೊಂಡು ಸತ್ತಿದ್ದ

ನಾಲ್ಕನೇಯವನು ಪ್ರಶಾಂತ್ ಪಟ್ಯಾಂನಲ್ಲಿ ಬಾಂಬ್ ತಯಾರಕಾ ಘಟಕದಲ್ಲಿ ಆಕಸ್ಮಿಕ ನಡೆದು ಸತ್ತಿದ್ದ.

ಕೊನೆಯ ಸಾಲಿನಲ್ಲಿ ಹಳದಿ ಮಾರ್ಕಿನಲ್ಲಿ ತೋರಿಸಲಾದ ಇಬ್ಬರು – ಪ್ರದೀಪನ್ ಮತ್ತು ದಿಲೀಶ್– ಸಹ ಬಾಂಬ್ ತಯಾರಕಾ ಘಟಕದಲ್ಲಿ ನವೆಂಬರ್ 10, 2008ರಂದು ಆಕಸ್ಮಿಕ ನಡೆದು ಸತ್ತಿದ್ದರು ಎಂದು ಪತ್ರಿಕೆಗಳಲಿ ವರದಿಯಾಗಿತ್ತು.

ಹಾಗಾದರೆ ದಾಳಿಕೋರರು ಯಾರು? ಆರೆಸ್ಸೆಸ್ ಬಲಿಪಶುಗಳು ಯಾರು? ಸಿಪಿಐ(ಎಂ)




1995ರಲ್ಲಿ ಇ.ಪಿ.ಜಯರಾನ್ ರ ಮೇಲೆ ನೇರವಾಗಿ ಹತ್ಯೆಯ ಪ್ರಯತ್ನ ನಡೆಯುತ್ತದೆ. ಟ್ರೈನಿನಲ್ಲಿರುವಾಗ ಆಂಧ್ರಪ್ರದೇಶದಲ್ಲಿ ಆ ಘಟನೆ ನಡೆಯಿತು. ಗುಂಡಿಕ್ಕಿ ಕೊಲ್ಲಬೇಕೆಂದು ಯೋಜನೆ ಹಾಕಿಕೊಳ್ಳಲಾಗಿತ್ತು. ಆದರೆ, ಜಯರಾಜರ ಮೇಲೆ ಇಟ್ಟಿದ್ದ ಗುರಿ ತಪ್ಪಿ ಹೋಯಿತು. ಅತ್ಯಂತ ವಿಶಿಷ್ಟವಾದ ಚಿಕಿತ್ಸೆಯ ಫಲವಾಗಿ ಜಯರಾಜರವರು ಅತಿಸಾಹಸದಿಂದ ಪಾರಾದರು. ವಿಕ್ರಂ ಚಾಲಿಲ್ ಶಶಿ, ಪೇಟ್ಟ ದಿನೇಶ ಮುಂತಾದವರನ್ನು ಅಲ್ಲೇ ಬಂದೂಕು ಸಮೇತ ರೈಲ್ವೇ ಪೋಲಿಸರು ಬಂಧಿಸಿದರು. ಈ ಇಬ್ಬರೂ ನನ್ನ ಶಾಖೆಗೆ ಬರುತ್ತಿದ್ದರು. ಅಂದು ಶಾಖೆಯಲ್ಲಿ 'ಈ ಸಿಂಹದ ಮರಿಗಳು' ಎಂದೇ ದಾಸಣ್ಣ ಅವರ ಬಗ್ಗೆ ಮಾತನಾಡಿದ್ದು.

ಸುದೇಶ ಮಿನ್ನಿ ಈ ಹಿಂದೆ ಕಣ್ಣೂರಿನಲ್ಲಿ ಆರೆಸ್‌ಸ್ ಕಾರ್ಯಕರ್ತನಾಗಿದ್ದು ಅದರಿಂದ ರೋಸಿ ಹೋಗಿ ಅದನ್ನು ತ್ಯಜಿಸಿ ಸಿಪಿಎಂ ಸೇರಿದ ಸುದೇಶ ಮಿನ್ನಿಯವರ ಪುಸ್ತಕದಿಂದ ಆರಸಿದ ಭಾಗಗಳನ್ನು ಇಲ್ಲಿ ಕೊಡಲಾಗಿದೆ.



ಒಂದು ದಿನ ಮಾಸ್ತರವರ ಮನೆಗೆ ನೋಡಲು ಹೋಗಿದ್ದೆ. ಕಣ್ಣೂರು ಜಿಲ್ಲೆಯಲ್ಲಿ ಸಂಘಟನೆಯ ಸ್ಥಿತಿ ಬಹಳ ದುರ್ಬಲವಾಗಿದ್ದು ಮಾತ್ರವಲ್ಲ ಅಲ್ಲೂ ಭ್ರಷ್ಟಾಚಾರ ವ್ಯಭಿಚಾರ ಸಂಘಟನೆಯ ಎಲ್ಲಾ ಕಡೆಗಳಲ್ಲೂ ವ್ಯಾಪಕವಾಗಿರುವುದರ ಬಗ್ಗೆ ಮಾಸ್ತರು ನನಗೆ ನೆನಪಿಸಿದರು. ಸೆಂಟ್ರಲ್ ಪೊಯಿಲೂರಿನ ವಿದ್ಯಾಲಯ 'ಸರಸ್ವತಿ ದೇವಾಲಯ' ಎಂದು ಕಲಿಸುವ ಸಂಘಟನೆ, ಅಲ್ಲಿ ಆಯುಧ ಕಾರ್ಖಾನೆ ಹಾಗೂ ವ್ಯಭಿಚಾರದ ಕೇಂದ್ರವಾಗಿ ಮಾರ್ಪಡಿಸುತ್ತಿದ್ದಾರೆ ಎನ್ನುವ ದುಃಖ ಮಾಸ್ತರರಲ್ಲಿತ್ತು. ನಿಜವಾಗಲೂ ಇದನ್ನೆಲ್ಲ ಕೇಳುತ್ತಿರುವಾಗ ನನಗೆ ಭಯ ಉಂಟಾಗುತ್ತಿತ್ತು. ಎಲ್ಲಿಂದ ಆರಂಭಿಸಬೇಕು ಹೇಗೆ ಆರಂಭಿಸಬೇಕು ಎಂದು ಹೇಳಲು ಸಾಧ್ಯವಾಗದ ಪರಿಸ್ಥಿತ ನನ್ನದಾಗಿತ್ತು. ನಾನು ಇಲ್ಲಿಂದಲೆ ಆರಂಭಿಸಿದೆ. ಸೆಂಟ್ರಲ್–ಪೊಯಿಲೂರಿನ ಶಾಖೆಯು ರಸ್ತೆ ಪಕ್ಕದ ಮಾವಿನ ಮರದ ಕೆಳಗೆ ನಡೆಯುತ್ತಿತ್ತು. ಶಾಖೆ ನಡೆಯುವ ಸಮಯದ ಬಗ್ಗೆ ವಿಚಾರಿಸಿದಾಗ 'ಯಾವಾಗಲಾದರೊಮ್ಮೆ ನಡೆ–ಯುತ್ತದೆ' ಎಂದು ಅಲ್ಲಿ ಸ್ವಯಂ ಸೇವಕರಾಗಿದ್ದ ದಿಲೀಪ ಉತ್ತರಿಸಿದ. 'ಅದ್ಯಾಕೆ ಹಾಗೆ' ಎಂದು ವಿಚಾರಿಸಿದಾಗ 'ಕಬ್ಬಡಿ ಆಡಿದರೆ ಸಾಕಾ, ಶತ್ರುಗಳನ್ನು ಸಂಹರಿಸಲು ಕಬ್ಬಡಿಯೂ ದಂಡವೂ ಸಾಕಾಗುವುದಿಲ್ಲ' ಎಂದು ಅವರು ತಿಳಿಸಿದರು. ಬಾಂಬುಗಳನ್ನು ನಿರ್ಮಿಸಲೂ ಆಯುಧಗಳನ್ನು ಸಂಗ್ರಹಿಸಲೂ ಅವರು ಶ್ರಮಿಸುತ್ತಿದ್ದಾರೆಂದು ನನಗೆ ಅರ್ಥವಾಯಿತು.



ನರಕದ ಗರ್ಭಗುಡಿಯ ಗುಟ್ಟುಗಳು



ಒ (ಅಂದಿನ ತಾಲೂಕ್ ಕಾರ್ಯ ವಾಹಕ್) ರಾಜಣ್ಣ (ತಾಲೂಕ್ ಶಾರೀರಕ್ ಪ್ರಮುಖ್) 'ವಡಕರ'ದ ವಿನೀತ (ಮಹಿಳಾ ಕಾರ್ಯಕರ್ತೆ) ಮುಂತಾದವರು ಸಂಜೆಯ ವೇಳೆಯಲ್ಲಿ ಬಂದದ್ದು ನೆನಪಿನಲ್ಲಿದೆ. ಅಂದು ರಾತ್ರಿಯ ಶಾಖೆ ಮುಗಿದು ನನ್ನ ಮನೆಯ ಹಿಂಭಾಗದಲ್ಲಿರುವ ಗುಡ್ಡದ ಅತಿ ಎತ್ತರದ ಕಾಡಿನೊಳಗೆ ಪೆಟ್ರೋಲ್‌ಮ್ಯಾಕ್ಸ್‌ನ ಬೆಳಕಿನಲ್ಲಿ ಅವರೆಲ್ಲರೂ ಒಟ್ಟಾದರು. ದಾಸ, ಮನೋಹರ, ರಾಜ, ಪುರುಷು, ಸದಾನಂದ, ಸಜೀವ, ಚಂದ್ರ, ಸುಧಾಕರ ಮತ್ತೆ ನಾನೂ ನನ್ನ ಅಣ್ಣನೂ ವೃತ್ತಾಕಾರದಲ್ಲಿ ಕುಳಿತೆವು. ವತ್ಸಣ್ಣ ಮೊದಲು ಚರ್ಚೆ ಪ್ರಾರಂಭಿಸಿದರು. ಜಿಲ್ಲಾ ನಿರ್ದೇಶನದಂತೆ ಬಂದಿರುವುದಾಗಿಯೂ 1984ರ 'ಕೋಚಕಂಡಿ ರಾಘವ' ಎನ್ನುವ ಕಮ್ಯೂನಿಸ್ಟ್ ಕಾರ್ಯಕರ್ತನನ್ನು ಕಡಿದು ಕೊಂದುಹಾಕಿದ್ದು ಇಲ್ಲಿಯ ಇಬ್ಬರು ಸ್ವಯಂ ಸೇವಕರ ಚಾಣಕ್ಯತನದಿಂದ ರೂಪುಗೊಂಡ ಯೋಜನೆಯೆಂದೂ ಅದರಲ್ಲಿ ಭಾಗವಹಿಸಿದ ದಾಸಣ್ಣ ಮತ್ತು ಚಂದ್ರ ಇವರಿಗೆ ಸಂಘವು ನಿಶ್ಚಯಿಸಿದ ಹದಿನೈದು ಸಾವಿರ ರೂಪಾಯಿಗಳನ್ನು ಪಾರಿತೋಷಿಕವಾಗಿ ನೀಡಲಾಗುತ್ತದೆ ಎಂದೂ ಹೇಳಿ ಆ ಹಣವನ್ನು ಅವರುಗಳ ಕೈಗೆ ನೀಡಲಾಯಿತು. ನಮ್ಮ ಪಕ್ಷವು ಮಾರ್ಕ್ಸವಾದಿ ಪಕ್ಷದವರ ಬೆದರಿಕೆಯನ್ನೂ ಅವರ ಸವಾಲುಗಳನ್ನೂ ಪ್ರಾಣ ಕೊಟ್ಟಾದರೂ ವಿರೋಧಿಸಬೇಕೆಂದೂ ನಿರಂತರವಾದ ಆಕ್ರಮಣಶೀಲತೆಯೆ ನಮ್ಮ ಶೈಲಿಯೆಂದೂ ಹೇಳಿದರು.

JANASHAKTHI KANNADA VARA PATRIKE: Printed by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086 Published by: **G.V.SRIRAMA REDDY** EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, BANGALORE-560086 . Editor **G.V.SRIRAMA REDDY** EMS Bhavana, No.37/A, 8th Cross, Mahalakshmi Layout, BANGALORE-560086 Editor : **G.V.SRIRAMA REDDY**